TB/VII/2014/3000(K)

# ಸಮಾಜ ವಿಜ್ಞಾನ

# SOCIAL SCIENCE

## ಭಾಗ - 2

## ತರಗತಿ VII



ಕೇರಳ ಸರಕಾರ
ಶಿಕ್ಷಣ ಇಲಾಖೆ

# ಭಾರತದ ಸಂವಿಧಾನ

## ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಸಮಾಜ ವಿಜ್ಞಾನ
# SOCIAL SCIENCE

## STANDARD - VII

## ಭಾಗ - 2


ಕೇರಳ ಸರಕಾರ

ಶಿಕ್ಷಣ ಇಲಾಖೆ

*ತಯಾರಿಸಿದವರು*

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2014

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯವಿಧಾತಾ,
ಪಂಜಾಬಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗಾ,
ವಿಂಧ್ಯಹಿಮಾಚಲ ಯಮುನಾಗಂಗಾ,
ಉಚ್ಛಲ ಜಲಧಿತರಂಗಾ,
ತವಶುಭನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವ ಜಯ ಗಾಥಾ
ಜನಗಣಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ.

## ಪ್ರತಿಜ್ಞೆ

ಭಾರತವು ನನ್ನ ದೇಶ, ಭಾರತೀಯರೆಲ್ಲರೂ ನನ್ನ ಸಹೋದರ ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ.

ನಾನು ನನ್ನ ದೇಶದ ಮತ್ತು ಜನತೆಯ ಕ್ಷೇಮ ಹಾಗೂ ಸಮೃದ್ಧಿಗಾಗಿ ಸದಾ ಪ್ರಯತ್ನಿಸುತ್ತೇನೆ.

*Prepared by* :
**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869
Typesetting and Layout : SCERT
Printed at : KBPS, Kakkanad, Kochi - 30
© Department of Education, Government of Kerala

ಪ್ರೀತಿಯ ಮಕ್ಕಳೆ,

ನಾವು ಪ್ರತಿಯೊಬ್ಬರೂ ಸಮಾಜದ ಸದಸ್ಯರಲ್ಲವೇ. ಸಮಾಜದ ಒಳಿತುಗಳನ್ನು ಸ್ವೀಕರಿಸಿಯೂ ಕೆಡಕುಗಳಿಗೆದುರಾಗಿ ಪ್ರತಿಕ್ರಿಯೆ ವ್ಯಕ್ತಪಡಿಸಿಯೂ ಜೀವಿಸಬೇಕಾದುದು ಪ್ರತಿಯೊಬ್ಬ ಪೌರನ ಕರ್ತವ್ಯವಾಗಿದೆ. ಶ್ರೀಮಂತವಾದ ನಮ್ಮ ಸಂಸ್ಕೃತಿ ಹಾಗೂ ನಾವಿಂದು ಅನುಭವಿಸುತ್ತಿರುವ ವಿವಿಧ ಸೌಲಭ್ಯಗಳು ನಮ್ಮ ಹಿಂದಿನ ತಲೆಮಾರುಗಳ ಕೊಡುಗೆಗಳಾಗಿವೆ. ಅವರ ತ್ಯಾಗಪೂರ್ಣವಾದ ಕೆಲಸಗಳನ್ನು ಗೌರವಿಸುವುದರೊಂದಿಗೆ ಅವರ ಸಾಧನೆಗಳನ್ನು ಜೋಪಾನವಾಗಿಡಬೇಕಾಗಿದೆ. ಅವುಗಳನ್ನು ಮುಂದಿನ ತಲೆಮಾರುಗಳಿಗಾಗಿ ಸಂರಕ್ಷಿಸಬೇಕಾಗಿದೆ.

ಮಾನವನ ಹಾಗೂ ಪರಿಸರಗಳೊಳಗಿನ ಸ್ನೇಹಪೂರ್ಣ ಸಂಬಂಧದಲ್ಲಿಯೇ ನಮ್ಮ ಅಸ್ತಿತ್ವವು ನೆಲೆನಿಂತಿದೆ. ಆದುದರಿಂದಲೇ ನಮ್ಮ ಪರಿಸರವನ್ನು ಸಂರಕ್ಷಿಸುವುದರೊಂದಿಗೆ ಮುಂದಿನ ತಲೆಮಾರಿಗೂ ಅದನ್ನು ಅನುಭವಿಸುವ ಹಕ್ಕು ಇರುವುದೆಂಬ ಪ್ರಜ್ಞೆಯಿಂದ, ಅದನ್ನು ಸಮಾಜದ ಅಭಿವೃದ್ಧಿಗಾಗಿ ಜಾಗರೂಕತೆಯಿಂದ ಬಳಸಬೇಕು. ಪ್ರಜಾಪ್ರಭುತ್ವ ರಾಷ್ಟ್ರದ ಪ್ರಜೆಯೆಂಬ ನೆಲೆಯಲ್ಲಿ ಹಕ್ಕುಗಳನ್ನು ಅನುಭವಿಸಲೂ ಕರ್ತವ್ಯಗಳನ್ನು ನಿರ್ವಹಿಸಲೂ ನಮಗೆ ಸಾಧ್ಯವಾಗಬೇಕು. ಈ ಪ್ರಜ್ಞೆಯೊಂದಿಗೆ ಕಾರ್ಯನಿರ್ವಹಿಸಲು ಹಾಗೂ ಮುನ್ನಡೆಯಲು ಸಮಾಜ ವಿಜ್ಞಾನ ಕಲಿಕೆಯು ಸಹಾಯಕವಾಗುತ್ತದೆ. ಅಗತ್ಯವಾದ ಜ್ಞಾನವನ್ನು ಗಳಿಸಲು ಹಾಗೂ ಹೆಚ್ಚಿನ ಅನ್ವೇಷಣೆಗೆ ಮತ್ತು ನೂತನ ವಿಷಯಗಳ ಕಂಡುಕೊಳ್ಳುವಿಕೆಗೂ ಪ್ರತಿಕ್ರಿಯೆ ವ್ಯಕ್ತಪಡಿಸುವ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವುದಕ್ಕೂ ಈ ಪಠ್ಯಪುಸ್ತಕವು ನಿಮಗೆ ಸಹಕಾರಿಯಾಗಲಿ ಎಂದು ಹಾರೈಸುತ್ತೇನೆ.

*ಶುಭಾಶಯಗಳೊಂದಿಗೆ,*

**ಪ್ರೊ. ಕೆ.ವಿ. ಹಾಷಿಂ**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

# TEXT BOOK DEVELOPMENT COMMITTEE

## Participants

**Abdul Azeez V.P.**
H.S.S.T., History, V.P.K.M.M.H.S.S. Puthur Pallikkal
**Aboobacker Siddique. K.**
P.D. Teacher, G.U.P.S. Veemboor, Manjeri
**Ajay Kumar. N.**
B.P.O., B.R.C. Hosdurg
**Dr. Babukuttan. P.**
Senior Lecturer, DIET, Kollam
**P.V. Hussain**
O.H.S.S., Thiroorangadi
**Jamal. K.**
H.S.S.T., History, R.A.C.H.S.S. Kadameri P.O. Villiyapally
**Jayakumar. K.**
H.S.A., N.S.S.H.S. Palode
**Manoj. K.V.**
H.S.S.T., Political Science, Govt. Gokhale H.S.S. Kumarapuram
**Mohanan. V.P.**
H.S.A., Chothavoor, H.S.S. Chambad
**P.M. Mohammed Musthafa**
Lecturer, DIET Palakkad
**Pradeepan. T.**
H.S.S.T., History, G.H.S.S. Kallachi
**H.A. Saleem**
U.P.S.A., G.H.S.S. Poruvazhi, Shooranad
**Seena Mol. M.M.**
H.S.S., Thonnaikkal
**K.J. Sherli**
U.P.S.A., G.B.H.S.S. Karamana
**Somanathan. C.V.**
Thrichambaram U.P.S. Thalipparamba
**Vijaya Kumar C.R.**
H.S.S.T., Geography,
Govt. Boys H.S.S. Mithrumala
**Wilfred John S.**
H.S.S.T., Geography,
M.G.H.S.S. Kaniyappuram
**Dr. N. Kala**
Research Officer, S.C.E.R.T

## Experts

**Dr. Abdul Razak. P.P.**
Associate Professor, Department of History,
P.S.M.O. College, Thiroorangadi.
**Dr. N.P. Hafis Muhammed**
Associate Professor (Rtd), Department of Sociology,
Feroke College, Kozhikode
**I.P. Joseph**
Assistant Professor (Rtd.),
SCERT, Thiruvananthapuram.
**Manoj Kumar. P.S.**
Assistant Professor, Department of History,
K.K.T.M. College, Kodungalloor, Thrissur.
**Dr. K.S. Madhavan**
Assistant Professor, Department of History,
Calicut University.
**Mahalingam. S.**
Associate Professor (Rtd), Department of
Geography, Govt. College, Chittur.
**Dr. Priyesh. M.**
Assistant Professor, Department of Economics,
University College, Thiruvananthapuram.
**Dr. Venu Mohan**
Assistant Professor, Department of History,
Govt. College, Nedumangadi.

# TRANSLATION COMMITTEE

## Participants

**Ganesh Kumar. S.,** H.S.A., Shri Gopalakrishna High School, Kudlu
**Bhanu. A.C.,** H.S.A., G.H.S.S. Mogralputhur
**Sanjeeva. M.,** H.S.A., G.H.S.S. Paivalike

## Language Expert

**Dr. P. Shrikrishna Bhat**
Rtd. Professor (Kannada), Govt. College Kasaragod

## Subject Expert

**K.V. Sathyanarayana Rao**
Teacher Educator, DIET Kasaragod

## Academic Co-ordinator

**Chithra Madhavan,** Research Officer, SCERT

**State Council of Educational Research and Training (SCERT)**
Vidyabhavan, Poojappura, Thiruvananthapuram-695012

## ಅನುಕ್ರಮಣಿಕೆ


8. ನವಕೇರಳ ಸೃಷ್ಟಿಗಾಗಿ ........ 91

9. ಗಾಂಧೀಜಿ ಹಾಗೂ ಸ್ವಾತಂತ್ರ್ಯ ಹೋರಾಟ ........ 101

10. ನಮ್ಮ ಸಂವಿಧಾನ ........ 120

11. ವ್ಯಕ್ತಿ ಮತ್ತು ಸಮಾಜ ........ 132

12. ಸೌರತಾಪ ಹಾಗೂ ವಾತಾವರಣದ ಸ್ಥಿತಿಗತಿ ........ 142

13. ಭಾರತದೊಂದಿಗೆ ........ 150




## ಸೌಲಭ್ಯಕ್ಕಾಗಿ ಕೆಲವು ಚಿಹ್ನೆಗಳನ್ನು ಈ ಪುಸ್ತಕದಲ್ಲಿ ಬಳಸಲಾಗಿದೆ



ಹೆಚ್ಚಿನ ಓದಿಗಾಗಿ – ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿಲ್ಲ.



ಕಲಿಕಾ ಪ್ರಗತಿಯನ್ನು ನಿರ್ಣಯಿಸುವುದಕ್ಕಿರುವ ಪ್ರಶ್ನೆಗಳು



ಕ್ರೋಢೀಕರಣ



ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು



ಮೌಲ್ಯನಿರ್ಣಯ ಮಾಡುವ



ಮುಂದುವರಿದ ಚಟುವಟಿಕೆಗಳು



# ೮ ನವಕೇರಳ ಸೃಷ್ಟಿಗಾಗಿ...



ಮುಟ್ಟಬಾರದವರು ಸೋಂಕಬಾರದವರು
ದೃಷ್ಟಿಗೆಟಕಿದರೂ ದೋಷವಾಗುವರು
ವಸತಿ ರಹಿತರು ಸಹಭೋಜನ ನಿಷೇಧಿತರು.
ಇವರೇ ಅವರ್ಣೀಯರು!

ಮಹಾಕವಿ ಕುಮಾರನಾಶಾನ್‌ರ 'ದುರವಸ್ಥ' ಎಂಬ ಕೃತಿಯ ಕೆಲವು ಸಾಲುಗಳನ್ನು ಮೇಲೆ ನೀಡಲಾಗಿದೆ.

ಈ ಸಾಲುಗಳಿಂದ ಅಂದಿನ ಕೇರಳದ ಸಾಮಾಜಿಕ ವ್ಯವಸ್ಥೆಯ ಕುರಿತಾದ ಯಾವೆಲ್ಲ ವಿಚಾರಗಳನ್ನು ತಿಳಿದುಕೊಳ್ಳಬಹುದು?

ಹಿಂದಿನ ಕೇರಳೀಯ ಸಮಾಜದಲ್ಲಿದ್ದ ಅನಾಚಾರಗಳು ಯಾವುವು?

- ಅಸ್ಪೃಶ್ಯತೆ
- 
- ಬಾಲ್ಯ ವಿವಾಹ
- 

ಜಾತಿ ವ್ಯವಸ್ಥೆಗೆ ಸಂಬಂಧಿಸಿದ ಅನೇಕ ಸಾಮಾಜಿಕ ಪಿಡುಗುಗಳು, ಹಕ್ಕುಗಳ ಉಲ್ಲಂಘನೆ, ಶೋಷಣೆ, ಇತ್ಯಾದಿಗಳು ಕೇರಳದ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದವು. ವಸ್ತ್ರ, ಕಸುಬು, ಮನೆ, ಭಾಷೆ, ಹೆಸರು ಇತ್ಯಾದಿ ಅನೇಕ ವಿಷಯಗಳಲ್ಲೂ ಭೇದ ಭಾವಗಳನ್ನು ಕಾಣಬಹುದಾಗಿತ್ತು. ಅಲ್ಲದೆ ಮಹಿಳೆಯರಿಗೆ ಸಮಾನ ಅವಕಾಶಗಳಿರಲಿಲ್ಲ. ಈ ರೀತಿಯ ಸಾಮಾಜಿಕ ಕಟ್ಟುಪಾಡುಗಳಿದ್ದ ಕಾರಣ ಸ್ವಾಮಿ ವಿವೇಕಾನಂದರು ಕೇರಳವನ್ನು 'ಹುಚ್ಚರನಾಡು' ಎಂದು ಕರೆದರು.

- ನಿಮ್ಮ ಪರಿಸರದಲ್ಲಿ ಈ ರೀತಿಯ ಅನಾಚಾರಗಳು ಅಸ್ತಿತ್ವದಲ್ಲಿದ್ದುವೇ? ಹಿರಿಯರಲ್ಲಿ ಕೇಳಿ ಮಾಹಿತಿಗಳನ್ನು ಸಂಗ್ರಹಿಸಿರಿ.

ಭಾರತದ ಇತರ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಅನಾಚಾರಗಳು ಹಾಗೂ ಅವುಗಳ ವಿರುದ್ಧ ರೂಪುಗೊಂಡ ಸಮಾಜ ಸುಧಾರಣ ಚಳುವಳಿಗಳ ಕುರಿತಾಗಿ ನೀವು ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿಕೊಂಡದ್ದನ್ನು ನೆನಪಿಸಿಕೊಳ್ಳುವಿರಲ್ಲವೇ.

ಆ ಕಾಲಘಟ್ಟದಲ್ಲಿ ಕೇರಳದಲ್ಲಿಯೂ ಅನೇಕ ಸಮಾಜ ಸುಧಾರಣ ಚಳುವಳಿಗಳು ರೂಪುಗೊಂಡಿದ್ದವು. ಅಂತಹ ಚಳುವಳಿಗಳಿಗೆ ನೇತೃತ್ವವನ್ನು ನೀಡಿದವರ ಕುರಿತೂ ಅವರ ಮುಂದಾಳುತ್ವದಲ್ಲಿ ನಡೆದ ಕಾರ್ಯಚಟುವಟಿಕೆಗಳು ಹಾಗೂ ಚಳುವಳಿಗಳ ಕುರಿತೂ ನಾವು ಚರ್ಚಿಸುವ.

## ಅಸ್ಪೃಶ್ಯತೆಗೆದುರಾಗಿ ಬಾವಿಗಳು

ವೈಕುಂಠ ಸ್ವಾಮಿಗಳು ಕೇರಳದಲ್ಲಿ ಸಮಾಜಿಕ ಪರಿವರ್ತನೆಗಾಗಿ ಪ್ರಯತ್ನಿಸಿದ ಆರಂಭ ಕಾಲದ ಸಮಾಜ ಸುಧಾರಕರಲ್ಲೊಬ್ಬರು. ಕನ್ಯಾಕುಮಾರಿಯ ಶಾಸ್ತಾಂಕೋವಿಲದಲ್ಲಿ ಅವರು ಜನಿಸಿದರು.

*ಸವರ್ಣೀಯರು ಉಪಯೋಗಿಸುತ್ತಿದ್ದ ಬಾವಿಯಿಂದ ನೀರು ಸೇದಲು ಕೀಳು ಜಾತಿಯವರೆಂದು ತಿಳಿಯಲ್ಪಡುತ್ತಿದ್ದವರಿಗೆ ಅವಕಾಶವಿಲ್ಲದಿದ್ದ ಈ ಕಾಲಘಟ್ಟದಲ್ಲಿ ಎಲ್ಲ ಜಾತಿಯವರಿಗೂ ನೀರು ಸೇದಲು ಬಾವಿಯನ್ನು ನಿರ್ಮಿಸಿ ಅಸ್ಪೃಶ್ಯತೆಯೆಂಬ ಅನಾಚಾರಕ್ಕೆ ವೈಕುಂಠ ಸ್ವಾಮಿಗಳು ಸವಾಲೆಸೆದರು.*

*ಆಹಾರ ವಸ್ತುಗಳಾದ ಅಕ್ಕಿ, ಪಚ್ಚೆಹೆಸರು, ಹಸಿರು ತರಕಾರಿಗಳನ್ನು ಸಂಗ್ರಹಿಸಿ, ಅಡುಗೆ ಮಾಡಿ ಸವರ್ಣೀಯರು ಅವರ್ಣೀಯರೆಂಬ ಬೇಧವಿಲ್ಲದೆ ಒಂದೇ ಪಂಕ್ತಿಯಲ್ಲಿ ಕುಳಿತು ಆಹಾರ ಸೇವಿಸುವ 'ಸಹಪಂಕ್ತಿ ಭೋಜನ'ವನ್ನು ಆಯೋಜಿಸಿದರು.*



ವೈಕುಂಠ ಸ್ವಾಮಿಗಳು

- ಮೇಲುಡುಗೆ ತೊಡುವುದನ್ನು ನಿಷೇಧಿಸಿದ ಕ್ರಮವನ್ನು ಪ್ರಶ್ನಿಸಿದರು.
- ದೇವಾಲಯ ಪ್ರವೇಶ ನಿಷೇಧಕ್ಕೆದುರಾಗಿ ಧ್ವನಿಯೆತ್ತಿದ್ದರು.
- ಈ ರೀತಿಯ ಸಾಮಾಜಿಕ ಸುಧಾರಣೆಗಾಗಿ 'ಸಮತ್ವ ಸಮಾಜ' ಎಂಬ ಸಂಘಟನೆಯನ್ನು ಸ್ಥಾಪಿಸಿದರು.

ತಿರುವಾಂಕೂರಿನ ಅವರ್ಣ ವಿಭಾಗಕ್ಕೊಳಪಟ್ಟ ಚನ್ನಾರ್ ಮಹಿಳೆಯರಿಗೆ ಮೊಣಕಾಲಿನಿಂದ ಕೆಳಗಿನವರೆಗೆ ಬಟ್ಟೆಯನ್ನು ಧರಿಸುವುದಕ್ಕೆ ಮತ್ತು ಮೇಲುಡುಪು ಧರಿಸುವುದಕ್ಕಿರುವ ಹಕ್ಕನ್ನು ನೀಡಬೇಕೆಂದು ನಡೆದ ಚನ್ನಾರ್ ಚಳುವಳಿಗೆ ವೈಕುಂಠ ಸ್ವಾಮಿಗಳ ಕಾರ್ಯಚಟುವಟಿಕೆಗಳು ಪ್ರಚೋದನೆಯನ್ನು ನೀಡಿದುವು. "ಕೆಲಸಮಾಡಿದರೆ ಕೂಲಿ ಸಿಗಬೇಕೆಂಬ" ಸ್ವಾಮಿಗಳ ವಾದವೂ ಜನರನ್ನು ಆಕರ್ಷಿಸಿತು. "ಬಿಳುಪಾದ ನೀಚ ಆಡಳಿತೆ" ಎಂದು ಕರೆಯುವ ಮೂಲಕ ವೈಕುಂಠ ಸ್ವಾಮಿಗಳು ಬ್ರಿಟೀಷರ ಆಡಳಿತದ ವಿರುದ್ಧ ತನ್ನ ವಿರೋಧವನ್ನು ವ್ಯಕ್ತಪಡಿಸಿದರು.

## ವಿದ್ಯೆ ಮತ್ತು ಸಂಪತ್ತು


ಚಟ್ಟಂಬಿ ಸ್ವಾಮಿಗಳು

ಚಟ್ಟಂಬಿ ಸ್ವಾಮಿಗಳು ಜಾತಿ, ಮತ, ವರ್ಣ ಭೇದಕ್ಕೆದುರಾಗಿ, ಮಾನವ ಸಮಾಜದ ಕ್ಷೇಮ ಮತ್ತು ಕಲ್ಯಾಣಕ್ಕಾಗಿಯೂ ಕಾರ್ಯಪ್ರವೃತ್ತರಾದ ಮನುಷ್ಯ ಸ್ನೇಹಿಗಳಾಗಿದ್ದರು.ಇವರು ತಿರುವನಂತಪುರದ ಕಣ್ಣಂಮೂಲೆಯಲ್ಲಿ ಜನಿಸಿದರು.

ಅವರ್ಣೀಯರಿಗೆ ದೇವಾಲಯ ಪ್ರವೇಶವನ್ನೂ ಸಂಚಾರ ಸ್ವಾತಂತ್ರ್ಯವನ್ನೂ ನೀಡಬೇಕೆಂದು ಚಟ್ಟಂಬಿ ಸ್ವಾಮಿಗಳು ವಾದಿಸಿದರು. ಅವರ್ಣೀಯರೊಂದಿಗೆ ಸಹಭೋಜನವನ್ನು ಹಂಚಿಕೊಂಡ ಚಟ್ಟಂಬಿ ಸ್ವಾಮಿಗಳು ಅವರ ಸಾಮಾಜಿಕ ಪ್ರಗತಿಗಾಗಿ ಪ್ರಯತ್ನಿಸಿದರು. ಸಮಾಜದಲ್ಲಿ ನೆಲೆನಿಂತಿದ್ದ ಬ್ರಾಹ್ಮಣ ಆಧಿಪತ್ಯವನ್ನು ಪ್ರಬಲವಾಗಿ ವಿರೋಧಿಸಿದರು. ಎಲ್ಲ ವಿಭಾಗದವರನ್ನು ಸೇರಿಸಿಕೊಂಡು ಸಮಾಜ ಸುಧಾರಣ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರಿಗೆ ಉಪನಿಷತ್ತು ಮತ್ತು ವೇದಗಳಲ್ಲಿ ಅಪಾರವಾದ ಪಾಂಡಿತ್ಯವಿತ್ತು. 'ವೇದಾಧಿಕಾರನಿರೂಪಣಂ', 'ಪ್ರಾಚೀನ ಮಲಯಾಳಂ' ಎಂಬಿವುಗಳು ಅವರು ರಚಿಸಿದ ಗ್ರಂಥಗಳಾಗಿವೆ. ವಿದ್ಯೆಯೂ ಸಂಪತ್ತೂ ಇದ್ದರೆ ಮಾತ್ರವೇ ಮಾನವನ ಪ್ರಗತಿ ಸಾಧ್ಯ ಎಂದು ಅವರು ನಂಬಿದ್ದರು. ಅವರ ಸಿದ್ಧಾಂತವು ಜಾತಿ, ಮತ, ಭೇದಗಳಿಗೆ ಅತೀತವಾಗಿತ್ತು. ಕೊಲ್ಲಂ ಜಿಲ್ಲೆಯ ಪನ್ಮನ ಎಂಬಲ್ಲಿ ಅವರು ಸಮಾಧಿ ಹೊಂದಿದರು.

**ಚಟ್ಟಂಬಿ ಸ್ವಾಮಿಗಳು**

ಚಟ್ಟಂಬಿ ಸ್ವಾಮಿಗಳ ನಿಜವಾದ ಹೆಸರು ಅಯ್ಯಪ್ಪನ್ ಎಂದು. ಗುರುಕುಲ ಶಿಕ್ಷಣ ಸಂದರ್ಭದಲ್ಲಿ ಶಿಸ್ತಿನ ನಿಯಮಗಳನ್ನು (ನಿಯಮಗಳಿಗೆ ಮಲಯಾಳದಲ್ಲಿ ಚಟ್ಟಗಳೆಂದು ಕರೆಯುವರು) ಜಾರಿಗೊಳಿಸಲು ಗುರುಗಳು ಅಯ್ಯಪ್ಪರಿಗೆ ಹೇಳುತ್ತಿದ್ದರು 'ನಿಯಮಗಳನ್ನು ಹೇರಲು ತಕ್ಕ ಜವಾಬ್ದಾರಿಯುಳ್ಳವನು' ಎಂಬ ಅರ್ಥದಲ್ಲಿ ಅವರ ಹೆಸರು ಚಟ್ಟಂಬಿ ಎಂದು ಬದಲಾಯಿತು. ಮುಂದೆ ಅಯ್ಯಪ್ಪನ್ ಚಟ್ಟಂಬಿ ಸ್ವಾಮಿಗಳೆಂಬ ಹೆಸರಿನಿಂದ ಗುರುತಿಸಿಕೊಂಡರು.

## ವಿದ್ಯೆಯಿಂದ ಪ್ರಬುದ್ಧರಾಗಿ

"ಮಾನವರಿಗೆ ಒಂದೇ ಜಾತಿ, ಒಂದೇ ಮತ, ಒಬ್ಬನೇ ದೇವರು"


"ಮತ ಯಾವುದಾದರೇನು ಮನುಷ್ಯ ಉತ್ತಮನಾದರೆ ಸಾಕು"

"ವಿದ್ಯೆಯಿಂದ ಪ್ರಬುದ್ಧರಾಗಿ, ಸಂಘಟನೆಯಿಂದ ಪ್ರಬಲರಾಗಿ"

"ಮಾನವರ ವೇಷ, ಭಾಷೆ, ಧರ್ಮಗಳು ಭಿನ್ನವಾಗಿದ್ದರೂ ಅವರೆಲ್ಲ ಒಂದೇ ಜಾತಿಗೆ ಸೇರಿದವರು. ಆದ್ದರಿಂದ ಪರಸ್ಪರ ವಿವಾಹ ಮತ್ತು ಸಹಪಂಕ್ತಿ ಭೋಜನ ಮಾಡುವುದರಿಂದ ಯಾವುದೇ ದೋಷವಿಲ್ಲ."

ಕೇರಳದ ಸಮಾಜ ಸುಧಾರಕರಲ್ಲಿ ಪ್ರಮುಖರಾಗಿದ್ದ ಶ್ರೀ ನಾರಾಯಣ ಗುರುಗಳ ಪ್ರಧಾನ ದೃಷ್ಟಿಕೋನಗಳನ್ನು ಮೇಲೆ ಸೂಚಿಸಲಾಗಿದೆ.

ಜಾತಿ ವ್ಯವಸ್ಥೆಯನ್ನು ತೊಡೆದು ಹಾಕುವುದು ಶ್ರೀನಾರಾಯಣ ಗುರುಗಳ ಸಮಾಜ ಸುಧಾರಣೆಯ ಪ್ರಧಾನ ಗುರಿಯಾಗಿತ್ತು. ಸರ್ವಧರ್ಮ ಸಹೋದರತೆಗಾಗಿ ಅವರು ಪ್ರಯತ್ನಿಸಿದರು. ಕೇರಳದ ಆಲುವಾದಲ್ಲಿ ಆಯೋಜಿಸಿದ ಸರ್ವಧರ್ಮ ಸಮ್ಮೇಳನದ ಪ್ರವೇಶ ದ್ವಾರದಲ್ಲಿ ಅವರು ಹೀಗೆ ಬರೆದರು.


ಶ್ರೀನಾರಾಯಣ ಗುರು

"ವಾದಿಸಲು ಹಾಗೂ ಗೆಲ್ಲಲು ಮಾತ್ರವಲ್ಲ ತಿಳಿಯಲು ಮತ್ತು ತಿಳಿಸಲು ಈ ಸಮ್ಮೇಳನವನ್ನು ಆಯೋಜಿಸಲಾಗಿದೆ."

"ಮನುಷ್ಯತ್ವವೇ ಮಾನವನ ಜಾತಿಯಾಗಿದೆ" ಎನ್ನುವ ನಾರಾಯಣ ಗುರುಗಳ ಘೋಷಣೆಯು ಕೇರಳೀಯ ಸಮಾಜದಲ್ಲಿ ಹೊಸ ಸಂಚಲನವನ್ನು ಉಂಟುಮಾಡಿತು. ಪರಿಷ್ಕೃತ ಸಮಾಜವೊಂದನ್ನು ರೂಪಿಸುವುದು ಅವರ ಉದ್ದೇಶವಾಗಿತ್ತು.

ಅವಗಣಿಸಲ್ಪಟ್ಟ ಜನತೆಯ ಸಾಮಾಜಿಕ ಉನ್ನತಿಯು ಈ ರೀತಿಯ ಆಶಯಗಳಿಂದ ಮಾತ್ರ ಸಾಧ್ಯವಿಲ್ಲ ಎಂಬುದು ಅವರಿಗೆ ತಿಳಿದಿತ್ತು. ಬಡತನ ನಿರ್ಮೂಲನೆಯ ಮೂಲಕ ಸಾಮಾಜಿಕ ಬದಲಾವಣೆಗೆ ಅವರು ಪ್ರಯತ್ನಿಸಿದರು. ಉದ್ದಿಮೆಗಳನ್ನು ಸ್ಥಾಪಿಸಿ ಜನರಿಗೆ ಉದ್ಯೋಗವನ್ನು ಒದಗಿಸಲು ಅವರು ಸಲಹೆ ನೀಡಿದರು.

ಆ ಕಾಲದಲ್ಲಿ ನೆಲೆನಿಂತಿದ್ದ ಸೀಮಂತ, ಋತುಮತಿ ಕಲ್ಯಾಣ, ತಾಳಿಕಟ್ಟು ಕಲ್ಯಾಣ ಮೊದಲಾದ ಸಾಮಾಜಿಕ ಅನಾಚಾರಗಳ ವಿರುದ್ಧ ಅವರು ಜನರಿಗೆ ತಿಳುವಳಿಕೆಯನ್ನು ನೀಡಿದರು. ಆಡಂಬರ ಹಾಗೂ ದುಂದುವೆಚ್ಚವನ್ನು ಕಡಿಮೆಮಾಡಿ ಸರಳಜೀವನ ನಡೆಸುವಂತೆ ಅವರು ಜನರಿಗೆ ಉಪದೇಶಿಸಿದರು. ಗುರುಗಳ ಸಂದೇಶವನ್ನು ಪ್ರಚಾರ ಮಾಡುವ ಹಾಗೂ ಜಾರಿಗೊಳಿಸುವ ಉದ್ದೇಶದಿಂದ 1903ರಲ್ಲಿ ಶ್ರೀನಾರಾಯಣ ಧರ್ಮ ಪರಿಪಾಲನಾ ಯೋಗವನ್ನು ಸ್ಥಾಪಿಸಲಾಯಿತು. ತಿರುವನಂತಪುರ ಜಿಲ್ಲೆಯ ಚೆಂಬಳಂತಿ ಎಂಬಲ್ಲಿ ಶ್ರೀನಾರಾಯಣಗುರುಗಳು ಜನಿಸಿದರು. ಆತ್ಮೋಪದೇಶ ಶತಕಂ, ದರ್ಶನಮಾಲ, ದೈವ ದಶಕಂ ಮುಂತಾದವುಗಳು ಗುರುಗಳ ಪ್ರಧಾನ ಕೃತಿಗಳಾಗಿವೆ. ಸಾಮಾಜಿಕ ನವೋತ್ಥಾನಕ್ಕೆ ಶ್ರೀನಾರಾಯಣ ಗುರುಗಳು ನೀಡಿದ ಕೊಡುಗೆಗಳು ರವೀಂದ್ರನಾಥ್ ಠಾಗೋರ್, ಮಹಾತ್ಮಗಾಂಧಿ ಮುಂತಾದವರ ಪ್ರಶಂಸೆಗೆ ಪಾತ್ರವಾದವು.



### ವಿದ್ಯಾಲಯವೇ ದೇವಾಲಯ

ಶ್ರೀನಾರಾಯಣ ಗುರುಗಳು ಮಾಡಿದ ದೇವಾಲಯ ಪ್ರತಿಷ್ಠೆಗಳು ಜಾತಿ ವ್ಯವಸ್ಥೆಯ ಅಡಿಪಾಯವನ್ನೇ ಅಲುಗಾಡಿಸುವಂಥವಾಗಿದ್ದವು. ಅರುವಿಪ್ಪುರದ ಶಿವಲಿಂಗ ಪ್ರತಿಷ್ಠೆ, ಕಾರಮುಕ್ಕು ದೇವಾಲಯದ ದೀಪ ಪ್ರತಿಷ್ಠೆ, ಶಿವಗಿರಿಯ ಶಾರದಾ ಪ್ರತಿಷ್ಠೆಗಳು ಅವುಗಳಲ್ಲಿ ಪ್ರಧಾನವಾಗಿದ್ದವು. ಆಲಪ್ಪುಳ ಜಿಲ್ಲೆಯ ಕಳವನ್‌ಕೋಡದಲ್ಲಿ ನಡೆಸಿದ ಪ್ರತಿಷ್ಠೆಯು ಅವರು ನಡೆಸಿದ ಕೊನೆಯ ಪ್ರತಿಷ್ಠೆಯಾಗಿತ್ತು. ಓಂ ಎಂದು ಬರೆದ ಕನ್ನಡಿಯನ್ನು ಅಲ್ಲಿ ಪ್ರತಿಷ್ಠೆ ಮಾಡಲಾಯಿತು. ದೇವಾಲಯಗಳಿಗೆ ಸಮಾನವಾದ ಪ್ರಾಧಾನ್ಯವನ್ನು ವಿದ್ಯಾಲಯಗಳಿಗೂ ನೀಡಿದ ಗುರುಗಳು ಹೀಗೆ ಹೇಳಿದರು. ಇನ್ನು ಜನತೆಗಾಗಿ ನಿರ್ಮಿಸಬೇಕಾದುದು ದೇವಾಲಯಗಳನ್ನಲ್ಲ, ವಿದ್ಯಾಲಯಗಳನ್ನು. ವಿದ್ಯಾಲಯವೇ ಪ್ರಧಾನ ದೇಗುಲವಾಗಬೇಕು.



ಶ್ರೀ ನಾರಾಯಣ ಗುರುಗಳ ಸಂದೇಶಗಳು ಹಾಗೂ ಕಾರ್ಯ ಚಟುವಟಿಕೆಗಳು ಕೇರಳದ ಸಾಮಾಜಿಕ ಬದಲಾವಣೆಯ ಮೇಲೆ ಯಾವೆಲ್ಲ ರೀತಿಯಲ್ಲಿ ಪ್ರಭಾವ ಬೀರಿದೆ ಎಂಬುವುದನ್ನು ಅವಲೋಕಿಸಿರಿ.

ಶ್ರೀ ನಾರಾಯಣ ಗುರುಗಳ ವಚನಗಳನ್ನು/ ಸಂದೇಶಗಳನ್ನು ಒಳಗೊಂಡಿರುವ ಭಿತ್ತಿಪತ್ರವನ್ನು ತಯಾರಿಸಿರಿ.

## ಶಿಕ್ಷಣವೇ ಸಾಮಾಜಿಕ ಮೂಲಧನ



ಅಯ್ಯಂಗಾಳಿ

ಅಯ್ಯಂಗಾಳಿಯವರು ಅವಗಣಿಸಲ್ಪಟ್ಟ ಜನವಿಭಾಗದ ಉನ್ನತಿಗಾಗಿ ಪ್ರಯತ್ನಿಸಿದ ಸಮಾಜ ಸುಧಾರಕರಾಗಿದ್ದರು. ಸಾಮಾಜಿಕ ಅಸಮಾನತೆಯನ್ನು ದೂರಮಾಡಲೂ ಅವಗಣಿಸಲ್ಪಟ್ಟವರ ಸ್ಥಿತಿಗತಿಗಳನ್ನು ಉತ್ತಮಪಡಿಸಲೂ ಇರುವ ಮೂಲಧನವು ವಿದ್ಯಾಭ್ಯಾಸವಾಗಿದೆ ಎಂದು ಅಯ್ಯಂಗಾಳಿ ಅಭಿಪ್ರಾಯಪಟ್ಟರು. ಅವರ ಶೈಕ್ಷಣಿಕ ಮುನ್ನಡೆಗಾಗಿ ಪ್ರಯತ್ನಿಸಿದ ಅಯ್ಯಂಗಾಳಿ 1904 ರಲ್ಲಿ ದಲಿತರಿಗಾಗಿಯೇ ವಿದ್ಯಾಲಯವೊಂದನ್ನು ಆರಂಭಿಸಿದರು.

> *"ನಮ್ಮ ಮಕ್ಕಳಿಗೆ ಶಿಕ್ಷಣಕ್ಕೆ ಬೇಕಾದ ಸೌಲಭ್ಯವನ್ನು ಒದಗಿಸದಿದ್ದರೆ ಫಲವತ್ತಾದ ಬಯಲಿನಲ್ಲಿ ಕಳೆಗಳು ಬೆಳೆಯುವು" ಅವಗಣಿಸಲ್ಪಟ್ಟ ಜನವಿಭಾಗಕ್ಕೆ ಶಿಕ್ಷಣವನ್ನು ನಿಷೇಧಿಸಿದಾಗ ಅಯ್ಯಂಗಾಳಿ ಈ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು.*

ತಿರುವನಂತಪುರದ ವೆಂಗಾನೂರಿನಲ್ಲಿ ಅಯ್ಯಂಗಾಳಿ ಜನಿಸಿದರು. ಸಾಮಾಜಿಕ ಸುಧಾರಣಾ ಚಟುವಟಿಕೆಗಳಿಗಾಗಿ ಅವರು 'ಸಾಧುಜನ ಪರಿಪಾಲನಾ ಸಂಘಂ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.



ಸಾರ್ವಜನಿಕ ಸ್ಥಳಗಳಲ್ಲಿ ಅವರ್ಣೀಯರಿಗೆ ಸಂಚರಿಸುವ ಸ್ವಾತಂತ್ರ್ಯ, ಅವಗಣಿಸಲ್ಪಟ್ಟ ವಿಭಾಗದ ಮಕ್ಕಳಿಗೆ ಶಾಲಾ ಪ್ರವೇಶಾತಿ, ಕೂಲಿ ಕಾರ್ಮಿಕರಿಗೆ ಸಂಬಳದ ಹೆಚ್ಚಳ ಇತ್ಯಾದಿಗಳು ಈ ಸಂಘಟನೆಯ ಉದ್ದೇಶಗಳಾಗಿದ್ದವು. ಅವಗಣಿಸಲ್ಪಟ್ಟ ವಿಭಾಗದ ನೇತಾರ ಎಂಬ ನೆಲೆಯಲ್ಲಿ ಅಯ್ಯಂಗಾಳಿಯವರಿಗೆ ಶ್ರೀ ಮೂಲಂ ಪ್ರಜಾಸಭೆಯಲ್ಲಿ ಸದಸ್ಯತನ ದೊರೆಯಿತು. ಅಯ್ಯಂಗಾಳಿಯ ಕಾರ್ಯಚಟುವಟಿಕೆಯನ್ನು ಗಾಂಧೀಜಿಯವರು ಶ್ಲಾಘಿಸಿದರು.

### ವಿಲ್ಲುವಂಡಿಯ ಐತಿಹಾಸಿಕ ಯಾತ್ರೆ

ಅಯ್ಯಂಗಾಳಿಯವರು 1893ರಲ್ಲಿ ವೆಂಜನೂರಿನ ಸಾರ್ವಜನಿಕ ಹಾದಿಯಲ್ಲಿ ವಿಲ್ಲುವಂಡಿ (ಎತ್ತಿನಗಾಡಿ) ಯಲ್ಲಿ ಸಂಚರಿಸುವ ಮೂಲಕ ಸಾಮಾಜಿಕ ನಿಷೇಧವನ್ನು ಉಲ್ಲಂಘಿಸಿದರು. ಅವಗಣಿಸಲ್ಪಟ್ಟವರ ಸಂಚಾರ ಸ್ವಾತಂತ್ರ್ಯಕ್ಕೆ ನಾಂದಿಯನ್ನು ಹಾಡಿದ ಅಯ್ಯಂಗಾಳಿಯವರು ತಿರುವಾಂಕೂರಿನ ಪ್ರಮುಖ ರಸ್ತೆಗಳಲ್ಲಿ ವಿಲ್ಲುವಂಡಿಯ ಮೂಲಕ ಸಂಚರಿಸಿ ಇತಿಹಾಸ ಸೃಷ್ಟಿಸಿದರು.



### ಕಲ್ಲುಮಾಲೆ ಹೋರಾಟ

ಅವಗಣಿತ ವಿಭಾಗದ ಮಹಿಳೆಯರು ಕಲ್ಲಿನಮಾಲೆಯ ಆಭರಣವನ್ನು ಧರಿಸುತ್ತಿದ್ದರು. ಗುಲಾಮತನದ ಪ್ರತೀಕವಾದ ಕಲ್ಲುಮಾಲೆಗಳನ್ನು ಕಿತ್ತೆಸೆಯಲು ಅಯ್ಯಂಗಾಳಿ ಅವರಲ್ಲಿ ಕೇಳಿಕೊಂಡರು. ಮಹಿಳೆಯರು ಕಲ್ಲುಮಾಲೆಗಳನ್ನು ಕಿತ್ತೆಸೆದರು. ಅವರು ಕಿತ್ತೆಸೆದ ಕಲ್ಲುಮಾಲೆಗಳು ನಾಲ್ಕೈದು ಅಡಿ ಎತ್ತರಕ್ಕೆ ರಾಶಿ ಬಿದ್ದವು.



ಅಯ್ಯಂಗಾಳಿಯ ಚಟುವಟಿಕೆಗಳು ಸಾಮಾಜಿಕ ಬದಲಾವಣೆಗೆ ಯಾವ ರೀತಿಯಲ್ಲಿ ಸಹಾಯ ಮಾಡಿದವು. ವಿಶ್ಲೇಷಿಸಿರಿ.

## ಲೇಖನಿಯಿಂದ ಬದಲಾವಣೆ



ವಕ್ಕಂ ಅಬ್ದುಲ್ ಖಾದರ್ ಮೌಲವಿ

'ಸಿರಿವಂತರು ಬಡವರ ಶಿಕ್ಷಣಕ್ಕೆ ಅಗತ್ಯವಿರುವ ಖರ್ಚನ್ನು ವಹಿಸಿಕೊಳ್ಳಬೇಕು ಹಾಗೂ ಅವರಿಗೆ ಉನ್ನತ ಶಿಕ್ಷಣವನ್ನು ನೀಡಲು ಸಹಾಯ ಮಾಡಬೇಕು'.

'ಧಾರ್ಮಿಕ ಶಿಕ್ಷಣದ ಜೊತೆಗೆ ಔಪಚಾರಿಕ ಶಿಕ್ಷಣವನ್ನು ಗಳಿಸಿದರೆ ಮಾತ್ರವೇ ಮಾನವನು ಪ್ರಗತಿ ಹೊಂದಲು ಸಾಧ್ಯ.'

'ಶಿಕ್ಷಣವು ಸಾಮಾಜಿಕ ಹಿನ್ನಡೆಯನ್ನು ಪರಿಹರಿಸಲಿರುವ ಮಾರ್ಗವಾಗಿದೆ.'

ಇವು ಕೇರಳದಲ್ಲಿ ಸಾಮಾಜಿಕ ಬದಲಾವಣೆಗಾಗಿ ಹೋರಾಡಿದವರಲ್ಲಿ ಪ್ರಮುಖರಾದ ವಕ್ಕಂ ಅಬ್ದುಲ್ ಖಾದರ್ ಮೌಲವಿಯವರ ದೃಷ್ಟಿಕೋನಗಳಾಗಿವೆ. ಅವರು

- ಮೂಢನಂಬಿಕೆಗಳ ವಿರುದ್ಧ ಹೋರಾಡಿದರು.
- ಇಂಗ್ಲೀಷ್ ಶಿಕ್ಷಣವನ್ನು ಪ್ರೋತ್ಸಾಹಿಸಿದರು.
- ಸ್ತ್ರೀ ಶಿಕ್ಷಣವನ್ನು ಬೆಂಬಲಿಸಿದರು.
- ವಿಜ್ಞಾನ, ಕಲೆ ಮುಂತಾದ ವಿಷಯಗಳಿಗೆ ಪ್ರಾಧಾನ್ಯವನ್ನು ನೀಡುವ ಕಲಿಕೆಯನ್ನು ಪ್ರೋತ್ಸಾಹಿಸಿದರು.
- ಶಿಕ್ಷಣವನ್ನು ಪ್ರಚಾರ ಮಾಡುವುದಕ್ಕಾಗಿ ಸಾಮಾಜಿಕ ಸಂಘಟನೆಗಳ ಜಾಗೃತಿ ಮೂಡಿಸಿದರು.

ಮಲಯಾಳ, ಉರ್ದು, ಅರೇಬಿಕ್, ಸಂಸ್ಕೃತ, ಪರ್ಷಿಯನ್ ಮೊದಲಾದ ಭಾಷೆಗಳಲ್ಲಿ ಪಾಂಡಿತ್ಯವನ್ನು ಹೊಂದಿದ್ದ ಮೌಲವಿಯವರು ಕೊಡಂಗಲ್ಲೂರಿನಲ್ಲಿ ಸ್ಥಾಪಿಸಿದ 'ಮುಸ್ಲಿಂ ಐಕ್ಯ ಸಂಘ'ದ ಕಾರ್ಯಚಟುವಟಿಕೆಗಳೊಂದಿಗೆ ಕೈ ಜೋಡಿಸಿದರು. ಜ್ಞಾನದ ಬೆಳಕನ್ನು ಪಸರಿಸಲು 'ಮುಸ್ಲಿಂ', 'ಅಲ್ ಇಸ್ಲಾಂ' ಎಂಬೀ ಮಾಸಿಕಗಳನ್ನೂ 'ಸ್ವದೇಶಾಭಿಮಾನಿ' ಎಂಬ ದಿನ ಪತ್ರಿಕೆಯನ್ನೂ ಅವರು ಪ್ರಾರಂಭಿಸಿದರು.



### ಸ್ವದೇಶಾಭಿಮಾನಿ ಪತ್ರಿಕೆ

'ಸ್ವದೇಶಾಭಿಮಾನಿ ಪತ್ರಿಕೆ' ಯು ತಿರುವಾಂಕೂರು ರಾಜಾಡಳಿತದ ಭ್ರಷ್ಟಾಚಾರ ಹಾಗೂ ಅನೀತಿಗಳನ್ನು ಬಯಲಿಗೆಳೆಯಿತು. ಇದಕ್ಕೆ ಸಂಬಂಧಿಸಿ 1910ರಲ್ಲಿ ಪತ್ರಿಕೆಯನ್ನು ನಿಷೇಧಿಸಿದ್ದಲ್ಲದೆ, ಸಂಪಾದಕರಾಗಿದ್ದ ರಾಮಕೃಷ್ಣ ಪಿಳ್ಳೆಯವರನ್ನು ಗಡಿಪಾರು ಮಾಡಲಾಯಿತು. ಪತ್ರಿಕಾಲಯವನ್ನು ಪುನರಾರಂಭಿಸಲು ಒತ್ತಾಯಿಸಿದಾಗ 'ನನ್ನ ಸಂಪಾದಕರಿಲ್ಲದೆ ನನಗೆ ಪತ್ರಿಕೆ ಏಕೆ, ಮುದ್ರಣಾಲಯವೇಕೆ' ಎಂಬ ನಿಲುವನ್ನು ಸ್ವದೇಶಾಭಿಮಾನಿ ಪತ್ರಿಕಾಲಯದ ಮಾಲಕರಾಗಿದ್ದ ವಕ್ಕಂ ಅಬ್ದುಲ್‌ಖಾದರ್ ಮೌಲವಿಯವರು ತಳೆದರು.

ವಕ್ಕಂ ಅಬ್ದುಲ್‌ಖಾದರ್ ಮೌಲವಿಯವರ ಕೊಡುಗೆಗಳು ಸಾಮಾಜಿಕ ಪ್ರಗತಿ ಎಷ್ಟರ ಮಟ್ಟಿಗೆ ಪ್ರಯೋಜನಕರವಾದುವು? ಟಿಪ್ಪಣಿ ತಯಾರಿಸಿರಿ.

## ಪ್ರತಿಭಟನೆ ಹಾಡಿನಲ್ಲಿಯೂ


"ಕಾಣುಸಿಲ್ಲೋರಕ್ಷರವುಂ
ಎಂಟೆ ವಂಶತ್ತೆ ಪಟ್ಟಿ
ಕಾಣುನುಂಡನೇಕ ವಂಶತ್ತಿನ್
ಚರಿತ್ರಂಗಳ್,
...

ಮುಂಪಿತಾಕಲ್‌ಕ್ಕ್ ವನ್ನ
ದುಃಖ ವಾರ್ತೆಗಳ್ ಕೇಳ್ಪಿನ್
ಕಾಳಗಳ್ ಪ್ರೋತುಗಳ್‌ಕುಂ
ಇಣಾಯಾಯಿ ಕೂಟ್ಟಿಕೆಟ್ಟಿ
ನಿಲಂಬಳಿಲ್ ಉಳುತ್ತಿಡುನ್ನು.

***

ಭಕ್ಷಣಂ ಕಿಟ್ಟುನ್ನಿಲ್ಲಾ
ವೇಲಕೂಲಿಗಳ್ ಓರ್‌ತಾಲ್
ಒಟ್ಟುಂ ಸಹಿಪ್ಪದಿಲ್ಲ.

***


ಪೋಯ್ಕೈಯಿಲ್ ಶ್ರೀಕುಮಾರ ಗುರುದೇವನ್

ಜನತೆಯೊಂದರ ಗುಲಾಮತನದ ಅನುಭವಗಳನ್ನು, ಸಂಕಷ್ಟಗಳನ್ನು, ಸಮಸ್ಯೆಗಳನ್ನು, ರೋಷಗಳನ್ನೂ ಈ ರೀತಿಯ ಹಾಡುಗಳಲ್ಲಿ ಹಾಗೂ ಭಾಷಣಗಳಲ್ಲಿ ಪೋಯ್ಕೈಯಿಲ್ ಶ್ರೀಕುಮಾರಗುರುದೇವನ್ ತನ್ನ ಆಶಯಗಳನ್ನು ಪ್ರಚಾರ ಮಾಡಿದರು. ಪೋಯ್ಕೈಯಿಲ್ ಶ್ರೀ ಕುಮಾರ ಗುರುದೇವನ್ ಅವರು ಅವಗಣಿಸಲ್ಪಟ್ಟ ವಿಭಾಗದವರ ಸ್ವಾತಂತ್ರ್ಯಕ್ಕಾಗಿ ಜ್ಞಾನ ಮತ್ತು ಆತ್ಮೀಯತೆಯನ್ನು ಸಂಯೋಜಿಸಿದ ಸಮಾಜ ಸುಧಾರಕರಾಗಿದ್ದರು. ತಿರುವಲ್ಲದ ಇರವಿಪೇರೂರಿನಲ್ಲಿ ಅವರು ಜನಿಸಿದರು.

ಅಸ್ಪೃಶ್ಯತೆ ಮತ್ತು ಶೋಷಣೆಯ ವಿರುದ್ಧ ಧ್ವನಿಯೆತ್ತಿದ ಅವರು ಮಾನವ ಸ್ನೇಹಕ್ಕೂ ಸಹೋದರತೆಗೂ ಲೋಕ ಶಾಂತಿಗೂ ಬೇಕಾಗಿ 'ಪ್ರತ್ಯಕ್ಷ ರಕ್ಷಾದೈವ ಸಭೆ' ಎಂಬ ಸಂಘಟನೆಯನ್ನು ಸ್ಥಾಪಿಸಿದರು.

ಪೋಯ್ಕೈಯಿಲ್ ಅಪ್ಪಚ್ಚನ್ ಎಂಬ ಹೆಸರಿನಲ್ಲಿಯೂ ಅವರು ಪ್ರಸಿದ್ಧರಾಗಿದ್ದರು. ಸಾಮಾಜಿಕ ಬದಲಾವಣೆಗಾಗಿ ಕಾರ್ಯವೆಸಗಿದ ಅವರು ಎರಡು ಬಾರಿ ಶ್ರೀಮೂಲಂ ಪ್ರಜಾಸಭಾದ ಸದಸ್ಯರಾಗಿದ್ದರು.



### ಯುದ್ಧ ವಿರುದ್ಧ ಜಾಥಾ

ಒಂದನೇ ಜಾಗತಿಕ ಯುದ್ಧದ ಕಾಲದಲ್ಲಿ ಶ್ರೀಕುಮಾರ ಗುರುದೇವನ್‌ರ ನೇತೃತ್ವದಲ್ಲಿ ಮರಕ್ಕುಳಂನಿಂದ ಕುಳತ್ತೂರ್‌ಕುನ್ನ್ ಎಂಬಲ್ಲಿಗೆ ಒಂದು ಯುದ್ಧ ವಿರುದ್ಧ ಜಾಥಾ ನಡೆಸಲಾಯಿತು. ಶಾಂತಿ, ಜಗತ್ತಿಗೆ ಶಾಂತಿ ಎಂಬುದು ಜಾಥಾದ ಘೋಷಣಾ ವಾಕ್ಯವಾಗಿತ್ತು. ಈ ಜಾಥಾ ಬ್ರಿಟೀಷ್ ಆಡಳಿತದ ವಿರುದ್ಧ ಎಂದು ಪರಿಗಣಿಸಿ ಅವರನ್ನು ಬಂಧಿಸಲಾಯಿತು.

## ಮೂಢನಂಬಿಕೆಗಳಿಗೆದುರಾಗಿ....

ವಾಗ್ಭಟಾನಂದರು ಮಲಬಾರಿನಲ್ಲಿ ಸಾಮಾಜಿಕ ಅನಾಚಾರಗಳಿಗೆ ಎದುರಾಗಿ ನಡೆದ ಚಟುವಟಿಕೆಗಳಿಗೆ ನೇತೃತ್ವ ನೀಡಿದವರಲ್ಲಿ ಪ್ರಮುಖರು. ಒಬ್ಬನೇ ದೇವರು ಎಂಬ ನಂಬಿಕೆಯನ್ನು ಎತ್ತಿಹಿಡಿದ ಇವರು ಮೂಢನಂಬಿಕೆಗಳು, ಅರ್ಥಹೀನವಾದ ಆಚರಣೆಗಳು ಇತ್ಯಾದಿಗಳಿಗೆದುರಾಗಿ ಜನಜಾಗೃತಿ ಮೂಡಿಸಲು 'ಆತ್ಮವಿದ್ಯಾಸಂಘ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಸಾಮಾಜಿಕ ಸುಧಾರಣೆಯೊಂದಿಗೆ ಬಡತನ ನಿರ್ಮೂಲನೆಗೂ ಸ್ತ್ರೀ-ಪುರುಷ ಸಮಾನತೆಗೂ ಅವರು ಪ್ರಾಧಾನ್ಯವನ್ನು ನೀಡಿದರು.

**ಪಟ್ಟಿಯನ್ನು ಭರ್ತಿ ಮಾಡಿರಿ**

| ನವೋತ್ಥಾನ ನಾಯಕರು | ಚಳುವಳಿ/ಸಂಸ್ಥೆ | ಪ್ರಧಾನ ಚಟುವಟಿಕೆಗಳು |
|---|---|---|
| ವೈಕುಂಠ ಸ್ವಾಮಿಗಳು | ಸಮತ್ವ ಸಮಾಜ | • ಮುಟ್ಟಬಾರದು, ಸೋಂಕಬಾರದು ಎಂಬಿವುಗಳಿಗೆದುರಾಗಿ ಹೋರಾಡಿದರು.<br>• ದೇವಾಲಯ ಪ್ರವೇಶ, ಮೇಲುಡುಪು ಧರಿಸುವಂತಹ ಹಕ್ಕುಗಳಿಗಾಗಿ ವಾದಿಸಿದರು.<br>• ಸಹಪಂಕ್ತಿ ಭೋಜನವನ್ನು ಆಯೋಜಿಸಿದರು. |
| ಚಟ್ಟಂಬಿ ಸ್ವಾಮಿಗಳು | | |
| ಶ್ರೀನಾರಾಯಣ ಗುರು | | |
| ಅಯ್ಯಂಗಾಳಿ | | |
| ವಕ್ಕಂ ಅಬ್ದುಲ್‌ಖಾದರ್ ಮೌಲವಿ | | |
| ಪೋಯ್ಕೈಯಿಲ್ ಶ್ರೀಕುಮಾರಗುರುದೇವನ್ | | |
| ವಾಗ್ಭಟಾನಂದ | | |

## ಸ್ತ್ರೀ–ಪುರುಷ ಸಮಾನತೆಯ ಕಡೆಗೆ

ಕೇರಳೀಯ ಸಮಾಜದಲ್ಲಿ ನೆಲೆನಿಂತಿದ್ದ ಜಾತಿ ವ್ಯವಸ್ಥೆ, ಪುರುಷ ಪ್ರಧಾನ ದೃಷ್ಟಿಕೋನಗಳಿಂದ ವಿವಿಧ ವಿಭಾಗಗಳಿಗೆ ಸೇರಿದ ಮಹಿಳೆಯರ ಕಷ್ಟ ಕಾರ್ಪಣ್ಯಗಳು ವಿವಿಧ ರೀತಿಯಲ್ಲಾಗಿತ್ತು. ನಂಬೂದಿರಿ ಮಹಿಳೆಯರು ಮನೆಯೊಳಗೇ ಉಳಿದುಕೊಳ್ಳಲು ನಿರ್ಬಂಧಿತರಾದರು. ಕೂಲಿ ಕೆಲಸವನ್ನು ನಿರ್ವಹಿಸುವ ಅವರ್ಣೀಯ ಮಹಿಳೆಯರು ಸವರ್ಣೀಯರಿಂದ ಶೋಷಣೆ ಮತ್ತು ಸಾಮಾಜಿಕ ತಾರತಮ್ಯವನ್ನು ಅನುಭವಿಸಬೇಕಾಯಿತು.

ಮಹಿಳೆಯರು ಎದುರಿಸಿದ ಈ ರೀತಿಯ ಶೋಷಣೆ, ಭೇದಭಾವ, ಅಸಮಾನತೆಯ ವಿರುದ್ಧ ಸಮಾಜ ಸುಧಾರಕರು ಧ್ವನಿಯೆತ್ತಿದರು. ಮಹಿಳೆಯರಿಗೆ ಮೇಲುಡುಪು ಧರಿಸಲೂ, ಮೊಣಕಾಲಿನ ಕೆಳಗೆ ವಸ್ತ್ರ ತಲುಪುವ ರೀತಿಯಲ್ಲಿ ಬಟ್ಟೆ ಧರಿಸುವ ಅವಕಾಶವನ್ನು ನೀಡಬೇಕೆಂದು ನಡೆದ ಚನ್ನಾರ್ ಚಳುವಳಿಯು ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಿದ ಆರಂಭ ಕಾಲದ ಚಳುವಳಿಗಳಲ್ಲಿ ಒಂದಾಗಿತ್ತು. ಕಾಸರಗೋಡು ಜಿಲ್ಲೆಯ ಚೀಮೇನಿಯಲ್ಲಿ ನಡೆದ 'ತೋಲ್‌ವಿರಗ್ ಚಳುವಳಿ' (ಸೊಪ್ಪು ಕಟ್ಟಿಗೆ ಹೋರಾಟ) ಕಣ್ಣೂರು ಜಿಲ್ಲೆಯ ಕಂಡಕ್ಕೈ ಗ್ರಾಮದ ಕಂಡಕ್ಕೈ ಕುಂಞಾಕಮ್ಮನ ನೇತೃತ್ವದಲ್ಲಿ ನಡೆದ 'ಮೇಚಿಲ್ ಪುಲ್ಲ್' (ಮೇವಿನ ಹುಲ್ಲು) ಚಳುವಳಿಯನ್ನು ಮಹಿಳೆಯರೇ ಮುನ್ನಡೆಸಿದ್ದರು.

ನಂಬೂದಿರಿ ಸಮುದಾಯದಲ್ಲಿ ಮಹಿಳೆಯರು ಅನುಭವಿಸುತ್ತಿದ್ದ ಅಸಮಾನತೆ ಮತ್ತು ಭೇದಭಾವದ ವಿರುದ್ಧ ಅದೇ ಸಮುದಾಯದ ವಿ.ಟಿ. ಭಟ್ಟತ್ತಿರಿಪ್ಪಾಡ್, ಎಂ.ಆರ್. ಭಟ್ಟತ್ತಿರಿಪ್ಪಾಡ್ ಮೊದಲಾದವರು ನಡೆಸಿದ ಕಾರ್ಯಚಟುವಟಿಕೆಗಳು ದೊಡ್ಡ ಪ್ರಮಾಣದ ಬದಲಾವಣೆಯನ್ನುಂಟುಮಾಡಿದುವು. ವಿ.ಟಿ. ಭಟ್ಟತ್ತಿರಿಪ್ಪಾಡ್ ರಚಿಸಿದ 'ಅಡುಕ್ಕಳಯಿಲ್‌ನಿನ್ನ್ ಅರಂಜತ್ತೇಕ್ಕ್' ಪ್ರೇಂಜೀಯವರ 'ಋತುಮತಿ' ಮುಂತಾದ ನಾಟಕಗಳು ನಂಬೂದಿರಿ ಮಹಿಳೆಯರ ಅಸಹಾಯಕ ಸ್ಥಿತಿಗತಿಗಳನ್ನು ಸಮಾಜಕ್ಕೆ ತೋರಿಸಿಕೊಟ್ಟಿತು. ನಂಬೂದಿರಿ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವ ಕಾರ್ಯ ಚಟುವಟಿಕೆಗಳಿಗೆ ಆರ್ಯಪಳ್ಳಂ, ದೇವಕಿ ನರಿಕ್ಕಾಟ್ಟಿರಿ, ಪಾರ್ವತಿ ನೆನ್ಮೇನಿಮಂಗಳಂ

ಮೊದಲಾದವರು ನೇತೃತ್ವವನ್ನು ನೀಡಿದ ಪ್ರಮುಖರಾಗಿದ್ದಾರೆ. ಸ್ತ್ರೀಯರ ವಿಮೋಚನೆಗಾಗಿ, ಕಾರ್ಮಿಕ ಶೋಷಣೆಯ ವಿರುದ್ಧವಾಗಿ, ಸರಿಯಾದ ವೇತನ ಹಾಗೂ ವಸ್ತ್ರಧಾರಣೆಗಳಿಗಾಗಿ ನವೋತ್ಥಾನ ಕಾಲದಲ್ಲಿ ಹೊಸ ಆಶಯಗಳು, ಕಾರ್ಯಚಟುವಟಿಕೆಗಳು ರೂಪುಗೊಂಡವು. ಇದು ಸ್ತ್ರೀ ಪುರುಷ ಸಮಾನತೆಯನ್ನು ಒಳಗೊಂಡ ಆಧುನಿಕ ಪ್ರಜಾಪ್ರಭುತ್ವ ದೃಷ್ಟಿಕೋನಗಳ ರೂಪೀಕರಣಕ್ಕೆ ಸಹಾಯಕವಾಯಿತು.



ಸ್ತ್ರೀಪುರುಷ ಸಮಾನತೆಯನ್ನು ಒಳಗೊಂಡ ಕೇರಳೀಯ ಸಮಾಜದ ರೂಪೀಕರಣಕ್ಕೆ ಅಡಿಪಾಯವಾದ ಸನ್ನಿವೇಶಗಳನ್ನು ಅವಲೋಕಿಸಿರಿ.

## ಮಿಷನರಿ ಚಟುವಟಿಕೆಗಳು

ಕೇರಳದ ಸಮಾಜ ಸುಧಾರಣ ಚಟುವಟಿಕೆಗಳಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಪ್ರಮುಖ ಪಾತ್ರವನ್ನು ವಹಿಸಿವೆ. ಶಿಕ್ಷಣ ಕ್ಷೇತ್ರದಲ್ಲಿನ ಅವರ ಚಟುವಟಿಕೆಗಳು ಅಮೂಲ್ಯವಾದುದಾಗಿತ್ತು. ಜಾತಿ ಮತ ಚಿಂತನೆಗಳಿಗೆ ಅತೀತವಾಗಿ ಎಲ್ಲಾ ವಿಭಾಗದ ಮಕ್ಕಳಿಗೂ ಅವರ ಮಿಷನರಿಯಲ್ಲಿ ಪ್ರವೇಶವನ್ನು ನೀಡಲಾಯಿತು. ಈ ಮೂಲಕ ಶಿಕ್ಷಣ ರಂಗವನ್ನು ಸಾರ್ವತ್ರಿಕಗೊಳಿಸಲು ಮಿಷನರಿ ಚಟುವಟಿಕೆಗಳಿಗೆ ಸಾಧ್ಯವಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಉಂಟಾದ ಈ ಬದಲಾವಣೆಯು ಕೇರಳದಲ್ಲಿ ಸಾಮಾಜಿಕ ನವೋತ್ಥಾನಕ್ಕೆ ಪ್ರಚೋದನೆಯಾಯಿತು. ಕೇರಳದಲ್ಲಿ ಕಾರ್ಯನಿರ್ವಹಿಸಿದ ಮಿಷನರಿಗಳಲ್ಲಿ ಪ್ರಧಾನವಾದವುಗಳು:

- ಲಂಡನ್ ಮಿಷನ್ ಸೊಸೈಟಿ
- ಚರ್ಚ್ ಮಿಷನ್ ಸೊಸೈಟಿ
- ಬಾಸಲ್ ಇವಾಂಜೆಲಿಕಲ್ ಮಿಷನ್


ಮೊದಲಾದವುಗಳಾಗಿವೆ.

ಸಹೋದರನ್ ಅಯ್ಯಪ್ಪನ್, ಪಂಡಿತ್ ಕೆ.ಪಿ. ಕರುಪ್ಪನ್, ಸನಾವುಲ್ಲ ಸಯೀದ್ ಮಕ್ತಿ ತಂಙಳ್ ಮುಂತಾದವರು ಕೇರಳದ ಸಾರ್ವಜನಿಕ ಶಿಕ್ಷಣ ಕ್ಷೇತ್ರಗಳಲ್ಲಿ ನವಚೇತನವನ್ನು ಉಂಟುಮಾಡಿದ ಇತರ ಸಮಾಜ ಸುಧಾರಕರಾಗಿದ್ದಾರೆ. ಸಮಾಜದಲ್ಲಿ ನೆಲೆ ನಿಂತಿದ್ದ ಜಾತಿ ವ್ಯವಸ್ಥೆ ಮತ್ತು ಮೂಢನಂಬಿಕೆಗಳ ವಿರುದ್ಧ ಇವರು ಜನರಲ್ಲಿ ಅರಿವನ್ನು ಮೂಡಿಸಿದರು. ಶಿಕ್ಷಣದ ಪ್ರಾಧಾನ್ಯವನ್ನು ಒತ್ತಿ ಹೇಳಿದರು. ಸಮಾಜ ಸುಧಾರಣೆಯೊಂದಿಗೆ ಮಾನವ ಮೈತ್ರಿ ಸಂದೇಶವನ್ನು ಸಾರಲು ಇವರು ಜನರಿಗೆ ಕರೆನೀಡಿದರು.

ಈ ರೀತಿ ಸಮಾಜ ಸುಧಾರಣ ಚಳುವಳಿಯ ಮೂಲಕ ನಾವು ಗಳಿಸಿದ ಪ್ರಗತಿಯು ಅನಂತರದ ಕಾಲದಲ್ಲಿ ನಡೆದ ಅಭಿವೃದ್ಧಿಯನ್ನು ಮುನ್ನಡೆಸಿತು. ಈ ಸುಧಾರಣಾ ಚಳುವಳಿಗಳ ಮೂಲಕ ಕೇರಳವು ಗಳಿಸಿದ ಸಾಧನೆಗಳನ್ನು ಈ ಕೆಳಗಿನಂತೆ ಕ್ರೋಡೀಕರಿಸಬಹುದು.

- ಸಾರ್ವಜನಿಕ ಸ್ಥಳಗಳಲ್ಲಿ ಸಂಚಾರ ಸ್ವಾತಂತ್ರ್ಯವನ್ನು ನೀಡಲಾಯಿತು.
- ಕಸುಬು, ಹೆಸರು, ವಸತಿ, ವಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿ ನೆಲೆ ನಿಂತಿದ್ದ ಭೇದಭಾವಗಳಿಗೆದುರಾಗಿ ಚಳುವಳಿಗಳು ರೂಪುಗೊಂಡವು.
- ಜಾತಿಗೆ ಸಂಬಂಧಿಸಿದಂತೆ ಉಚ್ಚ ನೀಚತ್ವಗಳನ್ನು ಪ್ರಶ್ನಿಸಲಾಯಿತು.
- ಶಿಕ್ಷಣವು ಅಭಿವೃದ್ಧಿಯ ತಳಹದಿಯಾಗಿದೆ ಎಂಬ ಅರಿವು ಉಂಟಾಯಿತು.
- ಆಧುನಿಕ ಶಿಕ್ಷಣಕ್ಕೆ ಪ್ರೋತ್ಸಾಹ ಲಭಿಸಿತು.
- ಸ್ತ್ರೀಯರ ಶಿಕ್ಷಣ ಹಾಗೂ ಸ್ತ್ರೀ ಪುರುಷ ಸಮಾನತೆಯ ಪ್ರಾಧಾನ್ಯವನ್ನು ಗುರುತಿಸಲಾಯಿತು.

ಕೇರಳದ ಸಾಮಾಜ ಸುಧಾರಕರು ಪ್ರಧಾನವಾಗಿ ಒತ್ತು ನೀಡಿದ ವಲಯಗಳು ಯಾವುವು ?



ಸಮಾಜ ಸುಧಾರಣ ಚಳುವಳಿಗಳ ಪರಿಣಾಮವಾಗಿ ಕೇರಳದಲ್ಲಿ ಉಂಟಾದ ಸಾಮಾಜಿಕ ಬದಲಾವಣೆಯ ಕುರಿತು ಟಿಪ್ಪಣಿ ತಯಾರಿಸಿರಿ.

## ಕ್ರೋಡೀಕರಣ

- ಕೇರಳದಲ್ಲಿ ಅನೇಕ ಅನಾಚಾರಗಳು ಅಸ್ತಿತ್ವದಲ್ಲಿದ್ದುವು.
- ಜಾತಿ ವ್ಯವಸ್ಥೆಗೂ ಭೇದಭಾವಕ್ಕೂ, ಶೋಷಣೆಗೂ ಎದುರಾಗಿ ಅನೇಕ ಸಮಾಜ ಸುಧಾರಣ ಚಳುವಳಿಗಳು ರೂಪುಗೊಂಡವು.
- ವೈಕುಂಠ ಸ್ವಾಮಿಗಳು, ಚಟ್ಟಂಬಿ ಸ್ವಾಮಿಗಳು, ಶ್ರೀನಾರಾಯಣ ಗುರು, ವಕ್ಕಂ ಅಬ್ದುಲ್ ಖಾದರ್ ಮೌಲವಿ, ಅಯ್ಯಂಗಾಳಿ, ಪೊಯ್ಕೆಯಿಲ್ ಶ್ರೀಕುಮಾರಗುರುದೇವನ್, ಮಕ್ತಿ ತಂಙಳ್, ಪಂಡಿತ್ ಕೆ.ಪಿ. ಕರುಪ್ಪನ್, ವಾಗ್ಭಟಾನಂದ, ವಿ.ಟಿ. ಭಟ್ಟತ್ತಿರಿಪ್ಪಾಡ್ ಮೊದಲಾದ ಸಾಮಾಜಿಕ ನವೋತ್ಥಾನ ನಾಯಕರು ಕೇರಳದಲ್ಲಿ ಸಮಾಜ ಸುಧಾರಣೆಗಾಗಿ ಹೋರಾಡಿದರು.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಕೇರಳದಲ್ಲಿ ಅಸ್ತಿತ್ವದಲ್ಲಿದ್ದ ಅನಾಚಾರಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು.
- ಕೇರಳದಲ್ಲಿ ಸಮಾಜ ಸುಧಾರಣೆಗಾಗಿ ಪ್ರಯತ್ನಿಸಿದ ವ್ಯಕ್ತಿಗಳ ಮತ್ತು ಚಳುವಳಿಗಳ ಪಾತ್ರವನ್ನು ವಿಶ್ಲೇಷಿಸಲು ಸಾಧ್ಯವಾಗುವುದು.
- ಕೇರಳದ ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ನವೋತ್ಥಾನ ಚಳುವಳಿಗಳು ಬೀರಿದ ಪ್ರಭಾವವನ್ನು ಅವಲೋಕಿಸಲು ಸಾಧ್ಯವಾಗುವುದು.
- ಸಮಾಜದಲ್ಲಿ ನೆಲೆ ನಿಂತಿರುವ ಅನಾಚಾರಗಳಿಗೆದುರಾಗಿ ಪ್ರತಿಕ್ರಿಯಿಸಲು ಬೇಕಾದ ಸಾಮರ್ಥ್ಯವನ್ನು ಗಳಿಸುವರು.

## ಮೌಲ್ಯನಿರ್ಣಯ ಮಾಡುವ

- ಕೇರಳದಲ್ಲುಂಟಾದ ಸಾಮಾಜಿಕ ನವೋತ್ಥಾನ ಚಳುವಳಿಗಳ ಸಾಮಾನ್ಯ ವಿಶೇಷತೆಗಳನ್ನು ಕಂಡುಹಿಡಿದು ಬರೆಯಿರಿ.
- ಪಟ್ಟಿಯನ್ನು ಕ್ರಮೀಕರಿಸಿರಿ:

| | |
|---|---|
| ಸಮತ್ವ ಸಮಾಜ | ವಕ್ಕಂ ಅಬ್ದುಲ್ ಖಾದರ್ ಮೌಲವಿ |
| ಎಸ್.ಎನ್.ಡಿ.ಪಿ. ಯೋಗ | ಅಯ್ಯಂಗಾಳಿ |
| ಸಾಧುಜನ ಪರಿಪಾಲನಾ ಸಂಘ | ವೈಕುಂಠ ಸ್ವಾಮಿ |
| ಕೇರಳ ಮುಸ್ಲಿಂ ಐಕ್ಯ ಸಂಘ | ಶ್ರೀ ನಾರಾಯಣ ಗುರು |

## ಮುಂದುವರಿದ ಚಟುವಟಿಕೆಗಳು

- 'ಕೇರಳದ ಸಮಾಜಿಕ ನವೋತ್ಥಾನ ಚಳುವಳಿಗಳು ಮತ್ತು ಅವುಗಳ ಕಾರ್ಯಚಟುವಟಿಕೆಗಳು' ಎಂಬ ವಿಷಯದಲ್ಲಿ ಸೆಮಿನಾರ್ ಪೇಪರ್ ತಯಾರಿಸಿ ಮಂಡಿಸಿರಿ.
- ಕೇರಳದ ಸಾಮಾಜ ಸುಧಾರಕರ ಚಿತ್ರಗಳನ್ನು ಮತ್ತು ಸ್ಟಾಂಪ್‌ಗಳನ್ನು ಸಂಗ್ರಹಿಸಿ ಟಿಪ್ಪಣಿಯೊಂದಿಗೆ ಅಲ್ಬಂ ತಯಾರಿಸಿರಿ.
- ನಿಮ್ಮೂರಿನ ಸಾಮಾಜಿಕ, ಸಾಂಸ್ಕೃತಿಕ ಸಂಘಟನೆಗಳ ನೇತೃತ್ವದಲ್ಲಿ ನಡೆಯುವ ಚಟುವಟಿಕೆಗಳ ಕುರಿತು ಅನ್ವೇಷಿಸಿ ಮಾಹಿತಿಗಳನ್ನು ಸಂಗ್ರಹಿಸಿರಿ.
- ಸ್ತ್ರೀ ಪುರುಷ ಸಮಾನತೆಯ ಅವಶ್ಯಕತೆಯ ಕುರಿತಾಗಿ ಚರ್ಚೆಯೊಂದನ್ನು ನಡೆಸಿರಿ.



# 9 ಗಾಂಧೀಜಿ ಹಾಗೂ ಸ್ವಾತಂತ್ರ್ಯ ಹೋರಾಟ

ವೈಕ್ಕಂ ಬಂದರಿನಲ್ಲೂ ಹಿನ್ನೀರಿನ ತೀರದಲ್ಲೂ ಜನಸಾಗರ. ಎಲ್ಲೆಲ್ಲೂ ಹಾಹಾಕಾರ, ಬೊಬ್ಬೆ. ಇತರ ವಿದ್ಯಾರ್ಥಿಗಳೊಂದಿಗೆ ನಾನು ನುಸುಳುತ್ತ ಜನಸಾಗರದ ಮುಂದೆ ಬಂದೆನು. ಬಹಳ ದೂರದಿಂದಲೇ ಗಾಂಧೀಜಿಯನ್ನು ಬೋಟಿನಲ್ಲಿ ಕಂಡೆನು. ಸಮುದ್ರದ ಅಬ್ಬರದಂತೆ ಸಾವಿರಾರು ಕಂಠಗಳಿಂದ ಘೋಷಣೆಯು ಮೊಳಗಿತು.

'ಮಹಾತ್ಮಾ... ಗಾಂಧಿ....ಕೀ....ಜೈ !'

ಅರ್ಧ ನಗ್ನನಾದ ಫಕೀರರು ಹಲ್ಲಿಲ್ಲದ ಮಸಡನ್ನು ತೋರಿಸಿ ನಕ್ಕರು. ಕೈಮುಗಿದುಕೊಂಡು ತೀರದಲ್ಲಿಳಿದರು. ತೆರೆದ ಕಾರಿನಲ್ಲಿ ನಿಧಾನವಾಗಿ ಹತ್ತಿ ಕುಳಿತರು. ಕಿಕ್ಕಿರಿದ ಜನಸಾಗರದ ನಡುವೆ ಕಾರು ನಿಧಾನವಾಗಿ ಸತ್ಯಾಗ್ರಹ ವೇದಿಕೆಯತ್ತ ಸಾಗಿತು.

ತುಂಬಾ ಶಬ್ದ, ಕೋಲಾಹಲ. ಆ ಕೋಲಾಹಲಗಳ ಮಧ್ಯೆ ನನಗೊಂದು ಆಸೆ. ಲೋಕ ಪೂಜ್ಯರಾದ ಆ ಮಹಾತ್ಮರನ್ನೊಮ್ಮೆ ಮುಟ್ಟಬೇಕು! ಒಮ್ಮೆ ಅದು ಅಸಾಧ್ಯವಾದರೆ ತಾನು ಸತ್ತು ಹೋಗುವೆನೆಂಬ ಭಾವನೆ ಉಂಟಾಯಿತು. ಯಾರಾದರೂ ನೋಡಿದರೆ.... ನನಗೆ ಭಯ ಹಾಗೂ ಗೊಂದಲವುಂಟಾಯಿತು. ಎಲ್ಲವೂ ಮರೆತು ಹೋಯಿತು. ನಾನು ಗಾಂಧೀಜಿಯವರ ಬಲ ಹೆಗಲನ್ನೊಮ್ಮೆ ಮೆಲ್ಲನೆ ಸ್ಪರ್ಶಿಸಿದೆ. ಎಡವಿ ಬೀಳಲು ಹೋದ ಕಾರಣ ಅವರ ಕೈಯನ್ನು ಹಿಡಿದೆ.

ಗಾಂಧೀಜಿಯವರು ನನ್ನನ್ನು ನೋಡಿ ಮಂದಹಾಸ ಬೀರಿದರು. ಅಂದು ಮುಸ್ಸಂಜೆ ಮನೆಗೆ ಹೋಗಿ ಅಮ್ಮನಲ್ಲಿ ನಾನು ಹೇಳಿದೆ. ಉಮ್ಮಾ, ನಾನು ಗಾಂಧೀಜಿಯನ್ನು ಸ್ಪರ್ಶಿಸಿದೆ!


(ಇದು ವೈಕ್ಕಂ ಮುಹಮ್ಮದ್ ಬಶೀರರ 'ಓರ್ಮ ಕುರಿಪ್ಪ್' ಎಂಬ ಕೃತಿಯ 'ಅಮ್ಮ' ಎಂಬ ಅನುಭವ ಕಥನದಿಂದ ಆಯ್ದ ಭಾಗವಾಗಿದೆ.)

ಸತ್ಯಾಗ್ರಹಕ್ಕೆ ನವಚೇತನವನ್ನು ತುಂಬಲು ವೈಕ್ಕಂಗೆ ಗಾಂಧೀಜಿಯವರು ಆಗಮಿಸಿದ ಘಟನೆಯು ವೈಕ್ಕಂ ಮುಹಮ್ಮದ್ ಬಶೀರರ ಜೀವನದಲ್ಲಿ ಮರೆಯಲಾಗದ ಒಂದು ಅನುಭವವಾಗಿತ್ತು.

ರಾಷ್ಟ್ರೀಯ ಚಳುವಳಿಯ ಮಂದಗಾಮಿ ಮತ್ತು ತೀವ್ರಗಾಮಿ ಕಾಲಘಟ್ಟದ ಕುರಿತು ಹಿಂದಿನ ಅಧ್ಯಾಯಗಳಲ್ಲಿ ನಾವು ಚರ್ಚಿಸಿದ್ದೇವೆ. ಗಾಂಧೀಜಿಯ ಆಗಮನದೊಂದಿಗೆ ರಾಷ್ಟ್ರೀಯ ಚಳುವಳಿಯ ಮೂರನೇ ಹಂತವು ಆರಂಭವಾಯಿತು. 1919 ರಿಂದ 1947ರ ವರೆಗಿನ ಕಾಲಘಟ್ಟವನ್ನು ಗಾಂಧೀಜಿಯ ಕಾಲಘಟ್ಟ (ಗಾಂಧಿಯುಗ)ವೆಂದು ಕರೆಯುತ್ತಾರೆ.



## ಗಾಂಧೀಜಿಯವರ ಆಗಮನ



ದಕ್ಷಿಣ ಆಫ್ರಿಕಾದಲ್ಲಿ ದೀರ್ಘ ಕಾಲದ ವಾಸ್ತವ್ಯದ ಅನಂತರ 1915 ಜನವರಿ 9ರಂದು ಗಾಂಧೀಜಿ ಭಾರತಕ್ಕೆ ಹಿಂತಿರುಗಿದರು. ಭಾರತೀಯರ ಸಮಸ್ಯೆಗಳನ್ನು ಅರ್ಥೈಸಲು ಹಾಗೂ ಭಾರತದ ಬಗ್ಗೆ ತಿಳಿದುಕೊಳ್ಳಲು ಭಾರತದಾದ್ಯಂತ ಸಂಚರಿಸಿದರು. ಸರಳವಾದ ಜೀವನ ಮತ್ತು ವಸ್ತ್ರಧಾರಣೆಯ ಮೂಲಕ ಜನರಿಗೆ ಮಾರ್ಗದರ್ಶಕರಾದರು. ಸಾಮಾನ್ಯ ಜನರ ಭಾಷೆಯ ಮೂಲಕ ಅವರೊಂದಿಗೆ ವ್ಯವಹರಿಸಿದರು. ಅಹಿಂಸೆಯಲ್ಲಿ ಬೇರೂರಿದ ಸತ್ಯಾಗ್ರಹ ಎಂಬ ಹೊಸ ಹೋರಾಟ ವಿಧಾನಕ್ಕೆ ಅವರು ರೂಪು ನೀಡಿದರು. ತನ್ನ ಆಶಯಗಳ ಪ್ರಚಾರಕ್ಕಾಗಿ ಗುಜರಾತಿನ ಅಹಮ್ಮದಾಬಾದಿನಲ್ಲಿ ಸಬರ್‌ಮತಿ ಆಶ್ರಮವನ್ನು ಸ್ಥಾಪಿಸಿದರು. ರಾಷ್ಟ್ರೀಯ ಚಳುವಳಿಯ ನೇತೃತ್ವವನ್ನು ಗಾಂಧೀಜಿ ಕೈಗೆತ್ತಿಕೊಂಡ ಬಳಿಕ ಸ್ವಾತಂತ್ರ್ಯ ಹೋರಾಟದಲ್ಲಿ ಜನರ ಸಹಭಾಗಿತ್ವವು ಹೆಚ್ಚಾಯಿತು.



### ಸತ್ಯಾಗ್ರಹ

ಸತ್ಯಾಗ್ರಹವೆಂದರೆ, ಸತ್ಯವನ್ನು ಕಟ್ಟುನಿಟ್ಟಾಗಿ ಪಾಲಿಸುವುದು ಎಂದರ್ಥ. ಸತ್ಯಾಗ್ರಹವು ಅಹಿಂಸೆಯ ತಳಹದಿಯಲ್ಲಿ ನಿಂತಿದೆ. ಸತ್ಯಾಗ್ರಹಿ ಕೆಡುಕನ್ನು ವಿರೋಧಿಸುವನು. ಆದರೆ ಕೆಡುಕನ್ನುಂಟು ಮಾಡುವವನನ್ನು ದ್ವೇಷಿಸಲಾರ ಆ ಮೂಲಕ ಕೆಡುಕನ್ನುಂಟುಮಾಡುವ ವ್ಯಕ್ತಿಯ ಮನಃಸ್ಸಾಕ್ಷಿಯನ್ನು ಜಾಗೃತವಾಗಿಸಬಹುದೆಂದು ಸತ್ಯಾಗ್ರಹಿ ನಂಬುತ್ತಾನೆ.

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಗಾಂಧೀಜಿಯ ಆರಂಭ ಕಾಲದ ಚಟುವಟಿಕೆಗಳ ಕುರಿತು ಟಿಪ್ಪಣಿ ತಯಾರಿಸಿರಿ.

## ಆರಂಭ ಕಾಲದ ಹೋರಾಟಗಳು

1917ರ ಚಂಪಾರಣ್ ಸತ್ಯಾಗ್ರಹವು ಗಾಂಧೀಜಿಯ ನೇತೃತ್ವದಲ್ಲಿ ನಡೆದ ಪ್ರಥಮ ಹೋರಾಟವಾಗಿದೆ. ಈ ಸತ್ಯಾಗ್ರಹವು ಬಿಹಾರಿನ ಚಂಪಾರಣ್‌ನ ನೀಲಿ ಕೃಷಿಕರನ್ನು ತೋಟದ ಯಜಮಾನರಾದ ಬಿಳಿಯರು ಶೋಷಣೆ ಮಾಡುವುದರ ವಿರುದ್ಧವಾಗಿತ್ತು. ಇದರ ಫಲವಾಗಿ ಕೃಷಿಕರಿಗೆ ಅನುಕೂಲಕರವಾದ ತೀರ್ಮಾನಗಳನ್ನು ಕೈಗೊಳ್ಳಲು ಬಿಳಿಯರು ನಿರ್ಬಂಧಿತರಾದರು.


1918ರಲ್ಲಿ ಗಾಂಧೀಜಿಯು ಅಹಮ್ಮದಾಬಾದಿನ ಬಟ್ಟೆ ಗಿರಣಿಯ ಕಾರ್ಮಿಕರ ವೇತನ ಹೆಚ್ಚಳಕ್ಕಾಗಿ ನಡೆಸಿದ ಮುಷ್ಕರವನ್ನು ಮುನ್ನಡೆಸಿದರು. ಇದು ಗಾಂಧಿಯವರು ಭಾರತದಲ್ಲಿ ನಡೆಸಿದ ಪ್ರಥಮ ನಿರಾಹಾರ ಸತ್ಯಾಗ್ರಹವಾಗಿತ್ತು.

ಅದೇ ವರ್ಷ ಗುಜರಾತಿನ ಖೇಡಾದಲ್ಲಿ ಉಂಟಾದ ಪ್ರಕೃತಿ ವಿಕೋಪದಲ್ಲಿ ಕೃಷಿ ಬೆಳೆಗಳು ವ್ಯಾಪಕವಾಗಿ ನಾಶವಾದವು. ಬೆಳೆ ನಾಶವಾದುದರಿಂದ ತೆರಿಗೆಯಲ್ಲಿ ರಿಯಾಯಿತಿ ನೀಡಬೇಕೆಂದು ಕೃಷಿಕರು ಬೇಡಿಕೆಯನ್ನು ಮುಂದಿಟ್ಟರು. ಬ್ರಿಟಿಷ್ ಅಧಿಕಾರಿಗಳು ಈ ಬೇಡಿಕೆಯನ್ನು ತಿರಸ್ಕರಿಸಿದಾಗ ಗಾಂಧೀಜಿಯು ಕರ ನಿರಾಕರಣೆ ಮುಷ್ಕರಕ್ಕೆ ಆಹ್ವಾನ ಕೊಟ್ಟರು.

ತೀವ್ರಗಾಮಿ ಕಾಲಘಟ್ಟದ ಹೋರಾಟ ರೀತಿಗಳಿಗಿಂತ ಗಾಂಧೀಜಿಯ ಆರಂಭ ಕಾಲದ ಹೋರಾಟಗಳು ಹೇಗೆ ಭಿನ್ನವಾಗಿವೆ? ಚರ್ಚಿಸಿ ಟಿಪ್ಪಣಿ ತಯಾರಿಸಿರಿ.



## ಪೌರರ ಹಕ್ಕುಗಳಿಗಾಗಿ




**ಕೊಲಾಷನ್ನು ಗಮನಿಸಿರಿ..**

ಇದರಿಂದ ಬ್ರಿಟಿಷರು ಭಾರತೀಯರ ವಿರುದ್ಧ ಕೈಗೊಂಡ ಜನವಿರೋಧಿ ಕ್ರಮಗಳನ್ನು ಅರ್ಥೈಸಬಹುದು.

ಬ್ರಿಟಿಷ್ ಆಡಳಿತಾಧಿಕಾರಿಗಳು ಭಾರತೀಯರ ಪೌರ ಹಕ್ಕುಗಳನ್ನು ಕಸಿದುಕೊಳ್ಳುವ ಅನೇಕ ಕರಾಳ ನಿಯಮಗಳನ್ನು ಜಾರಿಗೊಳಿಸಿದರು. ಅವುಗಳಲ್ಲಿ 'ರೌಲಟ್ ಆಕ್ಟ್' ಎಂಬ ನಿಯಮವು ಜನರ ವ್ಯಾಪಕ ಪ್ರತಿಭಟನೆಗೆ ಗುರಿಯಾಯಿತು. ಈ ನಿಯಮವು ಬ್ರಿಟಿಷ್ ಸರಕಾರಕ್ಕೆ ಕೆಳಗೆ ಕೊಡಲಾದ ಅಧಿಕಾರಗಳನ್ನು ನೀಡಿತು.

- ಯಾವೊಬ್ಬ ಭಾರತೀಯನನ್ನು ವಾರಂಟ್ ಇಲ್ಲದೆ ಬಂಧಿಸಬಹುದು.
- ವಿಚಾರಣೆ ಮಾಡದೆ ಸೆರೆಮನೆಯಲ್ಲಿಡಬಹುದು.
- ಪ್ರತ್ಯೇಕ ನ್ಯಾಯಾಲಯದಲ್ಲಿ ರಹಸ್ಯ ವಿಚಾರಣೆಗೊಳಪಡಿಸಬಹುದು.
- ನ್ಯಾಯಾಲಯದ ತೀರ್ಪಿಗೆದುರಾಗಿ ಅಪೀಲು ಕೊಡುವುದನ್ನು ನಿಷೇಧಿಸಬಹುದು.

ಈ ಕಾನೂನಿಗೆದುರಾಗಿ ಜನರು ಚಳುವಳಿಗಳನ್ನಾರಂಭಿಸಿದರು. ಪ್ರತಿಭಟನಾ ಮೆರವಣಿಗೆ, ಉಪವಾಸ, ಹರತಾಳ ಹಾಗೂ ಕಾನೂನು ಉಲ್ಲಂಘನೆಗಳನ್ನು ನಡೆಸಿದರು. 1919 ಏಪ್ರಿಲ್ 6 ರಂದು ದೇಶದಾದ್ಯಂತ ಕರಾಳ ದಿನವನ್ನಾಚರಿಸಲು ಗಾಂಧೀಜಿ ಕರೆಕೊಟ್ಟರು. ಅಭೂತಪೂರ್ವವಾದ ಪ್ರತಿಕ್ರಿಯೆಗಳು ಈ ಕರೆಗೆ ಲಭಿಸಿದುವು.

ಪಂಜಾಬಿನಲ್ಲಿ ಮುಷ್ಕರಕ್ಕೆ ನೇತೃತ್ವವನ್ನು ನೀಡಿದ ಡಾ. ಸತ್ಯಪಾಲ್ ಮತ್ತು ಡಾ. ಸೈಫುದ್ದೀನ್ ಕಿಚ್ಲುರವರನ್ನು ದಸ್ತಗಿರಿಮಾಡಲಾಯಿತು. ಇದನ್ನು ವಿರೋಧಿಸಿ ಪಂಜಾಬಿನ ಜಲಿಯನ್‌ವಾಲಾಬಾಗ್‌ನಲ್ಲಿ ಜನರು ಒಟ್ಟು ಸೇರಿದರು. ಜಲಿಯನ್‌ವಾಲಾಬಾಗ್ ಮೈದಾನವು ಮೂರು ಭಾಗಗಳಲ್ಲೂ ಗೋಡೆಗಳಿಂದ ಸುತ್ತುವರಿಯಲ್ಪಟ್ಟು, ಕೇವಲ ಒಂದೇ ಒಂದು ಪ್ರವೇಶದ್ವಾರವನ್ನು ಮಾತ್ರ ಹೊಂದಿದ್ದ ವಿಶಾಲವಾದ ಪ್ರದೇಶವಾಗಿತ್ತು. ಆಯುಧ ರಹಿತರಾದ ಜನರಿಗೆದುರಾಗಿ ಸೈನ್ಯವು ಗುಂಡು ಹಾರಿಸಿತು. ಸಾವಿರಾರು ಜನರು ಗುಂಡೇಟಿಗೆ ಬಲಿಯಾದರು. ಗಾಯಗೊಂಡವರ ಸಂಖ್ಯೆ ಇದಕ್ಕಿಂತಲೂ ಅಧಿಕವಾಗಿತ್ತು. ಮೃತ ಶರೀರಗಳನ್ನು ಅಲ್ಲಿಂದ ತೆಗೆಯಲು, ಗಾಯಗೊಂಡವರ ಶುಶ್ರೂಷೆಗೆ ಮತ್ತು ಬಾಯಾರಿದವರಿಗೆ ನೀರನ್ನು ಕೊಡಲು ಸೈನ್ಯವು ಅನುಮತಿ ನೀಡಲಿಲ್ಲ. ಈ ಭಯಾನಕವಾದ ಘಟನೆಯು ಜಲಿಯನ್‌ವಾಲಾಬಾಗ್ ಹತ್ಯಾಕಾಂಡವೆಂದು ತಿಳಿಯಲ್ಪಡುತ್ತದೆ.

ಇದನ್ನು ಪ್ರತಿಭಟಿಸಿ,

- ಕೈಸರ್-ಎ-ಹಿಂದ್ ಪದವಿಯನ್ನು ಗಾಂಧೀಜಿ ಬ್ರಿಟಿಷ್ ಸರಕಾರಕ್ಕೆ ಹಿಂದಿರುಗಿಸಿದರು.
- ಬ್ರಿಟಿಷರು ನೀಡಿದ 'ಸರ್' ಪದವಿಯನ್ನು ರವೀಂದ್ರನಾಥ ಠಾಗೋರರು ತ್ಯಜಿಸಿದರು.
- ರಾಷ್ಟ್ರದಾದ್ಯಂತ ಚಳುವಳಿಗಳನ್ನಾರಂಭಿಸಿದರು.



ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ಚಿತ್ರಗಾರನ ಕಲ್ಪನೆಯಲ್ಲಿ

ಶಾಂತಿಯುತವಾದ ಹೋರಾಟಗಳ ವಿರುದ್ಧ ಬ್ರಿಟಿಷ್ ಸರಕಾರವು ಯಾವ ರೀತಿಯ ನಿಲುವನ್ನು ಸ್ವೀಕರಿಸುತ್ತಿತ್ತು ಎಂಬುದನ್ನು ಜಲಿಯನ್‌ವಾಲಾಬಾಗ್ ಹತ್ಯಾಕಾಂಡದ ಆಧಾರದಲ್ಲಿ ವಿವರಿಸಿರಿ.

ಜಲಿಯನ್ ವಾಲಾಬಾಗಿನ ಘಟನೆಯನ್ನು ಒಂದು ನಾಟಕವಾಗಿ ಪ್ರದರ್ಶಿಸಲು ಅಗತ್ಯವಾದ ನಾಟಕದ ಸಂಭಾಷಣೆಯನ್ನು ತಯಾರಿಸಿರಿ.

## ಧೀರನಾದ ಉದ್ಧಂಸಿಂಗ್

ಬಾಲಕನಾದ ಉದ್ಧಂಸಿಂಗ್ ಜಲಿಯನ್ ವಾಲಾಬಾಗ್ ಸಾಮೂಹಿಕ ಹತ್ಯಾಕಾಂಡದ ಪ್ರತ್ಯಕ್ಷದರ್ಶಿಯಾಗಿದ್ದನು. ಈ ಹತ್ಯಾಕಾಂಡಕ್ಕೆ ನೇತೃತ್ವವನ್ನು ನೀಡಿದ ಮೈಕಲ್ ಒ. ಡಯರನನ್ನು ಅನೇಕ ವರ್ಷಗಳ ಅನಂತರ ಅವನು ಇಂಗ್ಲೇಂಡಿಗೆ ಹೋಗಿ ವಧಿಸಿದನು. 1940 ಜುಲೈ 31ರಂದು ಉದ್ಧಂಸಿಂಗ್‌ನನ್ನು ಮರಣದಂಡನೆಗೆ ಗುರಿಪಡಿಸಲಾಯಿತು.


ಉದ್ಧಂಸಿಂಗ್

## ಖಿಲಾಫತ್ತು ಚಳುವಳಿ

ತುರ್ಕಿಯನ್ನು ಕೇಂದ್ರವಾಗಿಟ್ಟುಕೊಂಡು ಆಡಳಿತವನ್ನು ನಡೆಸುತ್ತಿದ್ದ ಉಸ್ಮಾನಿಯಾ (ಒಟ್ಟೋಮನ್) ಸಾಮ್ರಾಜ್ಯದ ಆಡಳಿತಾಧಿಕಾರಿಯನ್ನು ಖಲೀಫನೆಂದು ಕರೆಯುತ್ತಾರೆ. ಖಲೀಫನು ಜಗತ್ತಿನ ಮುಸ್ಲಿಂಮರ ಧಾರ್ಮಿಕ ನಾಯಕನೂ ಕೂಡ ಆಗಿದ್ದನು. ಒಂದನೇ ಜಾಗತಿಕ ಯುದ್ಧದಲ್ಲಿ ತುರ್ಕಿ ಸಾಮ್ರಾಜ್ಯವು ಬ್ರಿಟನಿನ ವಿರುದ್ಧ ಗುಂಪಿನಲ್ಲಿ ಸೇರಿಕೊಂಡಿತ್ತು. ಯುದ್ಧದಲ್ಲಿ ಖಲೀಫನಿಗೆದುರಾಗಿ ಬ್ರಿಟಿಷರು ಕೈಗೊಂಡ ತೀರ್ಮಾನವು ಖಿಲಾಫತ್ತು ಚಳುವಳಿಯು ರೂಪುಗೊಳ್ಳಲು ಕಾರಣವಾಯಿತು. ಭಾರತದಲ್ಲಿ ಮೌಲಾನಾ ಶೌಕತ್ ಆಲಿ ಹಾಗೂ ಮೌಲಾನಾ ಮುಹಮ್ಮದ್ ಆಲಿ ಇವರು ಖಿಲಾಫತ್ ಚಳುವಳಿಯ ನೇತಾರರಾಗಿದ್ದರು. ಇವರು 'ಆಲಿ ಸಹೋದರ'ರೆಂದು ಪ್ರಸಿದ್ಧರಾಗಿದ್ದಾರೆ.


ಮೌಲಾನಾ ಶೌಕತ್ ಆಲಿ ಮತ್ತು ಮೌಲಾನಾ ಮುಹಮ್ಮದ್ ಆಲಿ

ರೌಲಟ್ ಆಕ್ಟಿಗೆದುರಾಗಿ ಬೆಳೆದು ಬಂದ ಹಿಂದು ಮುಸ್ಲಿಂ ಐಕ್ಯವು ಇನ್ನಷ್ಟು ದೃಢವಾಗಲು ಖಿಲಾಫತ್ತು ಚಳುವಳಿಯು ಕಾರಣವಾಗಬಹುದೆಂದು ಗಾಂಧೀಜಿಯವರು ಬಲವಾಗಿ ನಂಬಿದ್ದರು. ಅವರು ಖಿಲಾಫತ್ತು ಚಳುವಳಿಗೆ ಸಂಪೂರ್ಣ ಬೆಂಬಲ ಹಾಗೂ ಸಹಕಾರವನ್ನು ನೀಡಿದರು. ಅಖಿಲ ಭಾರತ ಖಿಲಾಫತ್ತು ಸಮಿತಿಯ ಅಧ್ಯಕ್ಷ ಪದವಿಯನ್ನು ಗಾಂಧೀಜಿಯವರು ವಹಿಸಿಕೊಂಡರು. 1919 ಅಕ್ಟೋಬರ್ 17ನ್ನು ಭಾರತದಾದ್ಯಂತ 'ಖಿಲಾಫತ್ತು ದಿನ' ವಾಗಿ ಆಚರಿಸಿದರು.

ಖಿಲಾಫತ್ತು ಚಳುವಳಿಯ ಚಟುವಟಿಕೆಗಳಿಗೆ ಸಂಪೂರ್ಣ ಬೆಂಬಲ ನೀಡಲು ಗಾಂಧೀಜಿಯನ್ನು ಪ್ರೇರೇಪಿಸಿದ ಘಟಕಗಳು ಯಾವುವು? ಟಿಪ್ಪಣಿ ತಯಾರಿಸಿರಿ.

## ಅಸಹಕಾರ ಚಳುವಳಿ

ಅಸಹಕಾರ ಚಳುವಳಿಯು ಗಾಂಧಿಯವರ ನೇತೃತ್ವದಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ನ ಆಶ್ರಯದಲ್ಲಿ ನಡೆದ ಪ್ರಥಮ ಜನಪರ ಹೋರಾಟವಾಗಿದೆ. 1920ರಲ್ಲಿ ಕಲ್ಕತ್ತಾದಲ್ಲಿ ಸಭೆ ಸೇರಿದ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ಸಿನ ವಿಶೇಷ ಸಮ್ಮೇಳನವು ಅಸಹಕಾರ ಚಳುವಳಿಗೆ ಅಂಗೀಕಾರವನ್ನು ನೀಡಿತು.

ಅಸಹಕಾರ ಚಳುವಳಿಯನ್ನು ಆರಂಭಿಸುವ ಮೊದಲು ಗಾಂಧಿಯವರು ವೈಸರಾಯಿಗೆ ಈ ರೀತಿಯಾಗಿ ಪತ್ರ ಬರೆದರು.

"ಆಡಳಿತಾಧಿಕಾರಿಯು ಅಧಿಕಾರವನ್ನು ದುರುಪಯೋಗಪಡಿಸಿದರೆ, ಅವನನ್ನು ಅನುಸರಿಸದಿರಲು ಪುರಾತನ ಕಾಲದಿಂದಲೇ ಪ್ರಜೆಗಳಿಗೆ ಹಕ್ಕಿದೆ."

ಅಸಹಕಾರ ಚಳುವಳಿಯು ಬಹಿಷ್ಕಾರ ಮತ್ತು ಸಕ್ರಿಯವಾದ ಚಟುವಟಿಕೆ ಎಂಬ ಎರಡು ರೀತಿಯ ಕಾರ್ಯಕ್ರಮಗಳನ್ನು ಒಳಗೊಂಡಿತ್ತು.

**ಅಸಹಕಾರ ಚಳುವಳಿಯ ರೀತಿಗಳು**

| ಬಹಿಷ್ಕಾರ ಚಟುವಟಿಕೆಗಳು | | ಸಕ್ರಿಯವಾದ ಚಟುವಟಿಕೆಗಳು | |
|---|---|---|---|
| ವಿದೇಶಿ ವಸ್ತುಗಳ ಬಹಿಷ್ಕಾರ | ಕರ ನಿರಾಕರಣೆ | ಹಿಂದೂ ಮುಸ್ಲಿಂ ಐಕ್ಯ | ಖಾದಿ ಬಟ್ಟೆಬರೆಗಳಿಗೆ ಪ್ರಚಾರ |
| ಪದವಿಗಳನ್ನು ಬಿರುದುಗಳನ್ನು ತ್ಯಜಿಸುವುದು | ನ್ಯಾಯಾಲಯ ಬಹಿಷ್ಕಾರ | ಅಸ್ಪೃಶ್ಯತೆಯ ನಿವಾರಣೆ | ಸ್ವದೇಶಿ ಶಾಲೆಗಳ ಸ್ಥಾಪನೆ |



ಅಸಹಕಾರ ಚಳುವಳಿಯು ಜನಪರ ಹೋರಾಟವಾಗಿ ಬದಲಾಗಲು ಕಾರಣಗಳಾವುವು?

ಅಸಹಕಾರ ಚಳುವಳಿಗೆ ಸಂಬಂಧಿಸಿದ ಆಶಯಗಳನ್ನೊಳಗೊಂಡ ಘೋಷಣಾ ಫಲಕಗಳನ್ನು ತಯಾರಿಸಿರಿ.

ದೇಶದಾದ್ಯಂತ ಇಂತಹ ಹೋರಾಟಗಳು ರೂಪುಗೊಂಡಾಗ ಕೇರಳದಲ್ಲಿ ಏನು ನಡೆಯಿತೆಂದು ಪರಿಶೀಲಿಸುವ.



## ಮಲಬಾರಿನ ದಂಗೆ

1921ರ ಮಲಬಾರಿನ ದಂಗೆಯು ಕೇರಳದಲ್ಲಿ ಬ್ರಿಟಿಷರ ವಿರುದ್ಧ ನಡೆದ ಪ್ರಧಾನ ದಂಗೆಗಳಲ್ಲೊಂದಾಗಿದೆ. ಮಲಬಾರಿನ ರೈತರು ಜಮೀನ್ದಾರರ ಜನ ವಿರೋಧಿ ಕ್ರಮಗಳಾದ ಒಕ್ಕಲೆಬ್ಬಿಸುವಿಕೆ, ನ್ಯಾಯಯುತವಲ್ಲದ ತೆರಿಗೆ ಸಂಗ್ರಹ ಹಾಗೂ ಅಮಿತವಾದ ಗೇಣಿಯಂತಹ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಜಮೀನ್ದಾರರ ರೈತವಿರೋಧಿ ಚಟುವಟಿಕೆಗಳಿಗೆ ಬ್ರಿಟಿಷರು ಬೆಂಬಲವನ್ನು ನೀಡಿದರು. ಈ ಸಂದರ್ಭದಲ್ಲಿ ಕೇರಳದಲ್ಲಿ ಅಸಹಕಾರ ಚಳುವಳಿ ಮತ್ತು ಖಿಲಾಫತ್ತು ಚಳುವಳಿಗಳು ಇನ್ನಷ್ಟು ಸಕ್ರಿಯವಾದವು. ಗಾಂಧಿಯವರು ಮೌಲಾನಾ ಶೌಕತ್ ಆಲಿಯವರೊಂದಿಗೆ ಕೇರಳಕ್ಕೆ ಭೇಟಿ ನೀಡಿದರು.

ಖಿಲಾಫತ್ತು ಚಳುವಳಿ ಮತ್ತು 1920ರ ಮಂಜೇರಿ ಕಾಂಗ್ರೆಸ್ ಸಮ್ಮೇಳನವು ರೈತರಲ್ಲಿ ನವಚೇತನವನ್ನುಂಟು ಮಾಡಿತು. ಕೃಷಿಕರಲ್ಲಿ ಹೆಚ್ಚಿನವರೂ ಮಾಪಿಳ್ಳೆಗಳು (ಮುಸ್ಲಿಮರು) ಆಗಿದ್ದರು.

ಬ್ರಿಟಿಷರ ಮತ್ತು ಜಮೀನ್ದಾರರ ವಿರುದ್ಧವಾದ ಒಕ್ಕಲುಗಳ ಪ್ರತಿಭಟನೆಗಳು ತೀವ್ರಗೊಂಡಿರುವಾಗ ಪುಕ್ಕೋಟ್ಟೂರಿನ ಖಿಲಾಫತ್ತು ಸಮಿತಿಯ ಕಾರ್ಯದರ್ಶಿಯಾದ ವಡಕ್ಕೇವೀಟಿಲ್ ಮುಹಮ್ಮದ್‌ನನ್ನು ಬಂಧಿಸಲು ತಲುಪಿದ ಪೊಲೀಸರನ್ನು ಜನರು ತಡೆದರು. ಖಿಲಾಫತ್ತು ನಾಯಕನಾಗಿದ್ದ ಆಲಿ ಮುಸ್ಲಿಯಾರನನ್ನು ಬಂಧಿಸಿದರೆಂಬ ಗಾಳಿ ಸುದ್ದಿಯು ಹರಡಿತು. ಇದರೊಂದಿಗೆ ಮಲಬಾರಿನ ಏರನಾಡು, ವಳ್ಳುವನಾಡು, ಪೊನ್ನಾನಿ ತಾಲೂಕುಗಳಲ್ಲಿ ದಂಗೆ ಆರಂಭವಾಯಿತು. ದಂಗೆಗಾರರ ರೋಷ ಹಾಗೂ ಆಕ್ರಮಣವು ಬ್ರಿಟಿಷರಿಗೆ ಸಹಾಯ ಮಾಡುವ ಜಮೀನ್ದಾರರಿಗೆದುರಾಗಿಯೂ ಭುಗಿಲೆದ್ದಿತು. ದಂಗೆಗೆ ನೇತೃತ್ವವನ್ನು ನೀಡಿದ ಆಲಿ ಮುಸ್ಲಿಯಾರ್, ವಾರಿಯಂಕುನ್ನತ್ತ್ ಕುಂಞಹಮ್ಮದ್ ಹಾಜಿ ಮೊದಲಾದವರನ್ನು ಬ್ರಿಟಿಷರು ವಧಿಸಿದರು.

## ವ್ಯಾಗನ್ ದುರಂತ

ಮಲಬಾರಿನ ದಂಗೆಯ ಸಂದರ್ಭದಲ್ಲಿ ಬಂಧನಕ್ಕೊಳಗಾದ ತೊಂಬತ್ತರಷ್ಟು ದಂಗೆಗಾರರನ್ನು ತಿರೂರು ರೈಲ್ವೇ ನಿಲ್ದಾಣದಿಂದ ಒಂದು ಸರಕು ಸಾಗಾಟದ ರೈಲುಗಾಡಿಯ ಬೋಗಿಯಲ್ಲಿ ತುಂಬಿಸಿ ಕೊಯಂಬತ್ತೂರಿಗೆ ಸಾಗಿಸಿದರು. ಗಾಳಿ ಸಂಚಾರವಿಲ್ಲದ ರೈಲುಗಾಡಿಯ ಆ ಬೋಗಿಯಲ್ಲಿ ಅವರು ಪ್ರಾಣ ರಕ್ಷಣೆಗಾಗಿ ಒದ್ದಾಡಿದರು. ಮರಣ ಭಯದಿಂದ ಅವರು ಪರಸ್ಪರ ಪರಚಲು, ಕಚ್ಚಲು ಪ್ರಾರಂಭಿಸಿದರು. ರೈಲುಗಾಡಿಯು ಕೊಯಂಬತ್ತೂರಿನ ಸಮೀಪದ ಪೋತನ್ನೂರಿಗೆ ತಲುಪಿತು. ಬೋಗಿಯ ಬಾಗಿಲನ್ನು ತೆರೆದು ನೋಡಿದಾಗ ಎಪ್ಪತ್ತೆರಡು ಮಂದಿ ಮೃತಪಟ್ಟಿದ್ದರು. ಉಳಿದವರು ಮರಣದೊಂದಿಗೆ ಹೋರಾಡುತ್ತಿದ್ದರು. 1921 ನವೆಂಬರ್ 10ರಂದು ನಡೆದ ಈ ಘಟನೆಯನ್ನು ವ್ಯಾಗನ್ ದುರಂತವೆಂದು ಕರೆಯುತ್ತಾರೆ. ಜಮೀನ್ದಾರಿ ಸಂಪ್ರದಾಯ ಮತ್ತು ಬ್ರಿಟಿಷ್ ಆಡಳಿತಕ್ಕೆದುರಾಗಿ ಆರಂಭಿಸಿದ ಜನಪರ ಹೋರಾಟವನ್ನು ಕ್ರೂರ ಕ್ರಮಗಳ ಮೂಲಕ ಬ್ರಿಟಿಷ್ ಸರಕಾರವು ದಮನಿಸಿತು.




ವ್ಯಾಗನ್ ದುರಂತ – ಚಿತ್ರಗಾರನ ಕಲ್ಪನೆಯಲ್ಲಿ

ಸ್ವಾತಂತ್ರ್ಯ ಹೋರಾಟಗಳನ್ನು ಬ್ರಿಟಿಷ್ ಸರಕಾರವು ಕ್ರೂರವಾದ ಕ್ರಮಗಳ ಮೂಲಕ ಎದುರಿಸಿತು. ಈ ಹೇಳಿಕೆಯನ್ನು ಮಲಬಾರಿನ ದಂಗೆಯ ಹಿನ್ನೆಲೆಯಲ್ಲಿ ಅವಲೋಕಿಸಿ ಟಿಪ್ಪಣಿ ತಯಾರಿಸಿರಿ.

ವ್ಯಾಗನ್ ದುರಂತದ ಸ್ತಬ್ಧ ಚಿತ್ರವನ್ನು ತಯಾರಿಸಿರಿ.



ಮಲಬಾರಿನ ದಂಗೆಯು ರೈತ ಹೋರಾಟಗಳ ಮತ್ತು ಖಿಲಾಫತ್ತು ಚಳುವಳಿಯ ಸಮ್ಮಿಲನವಾಗಿದೆ. ವಿಶ್ಲೇಷಿಸಿರಿ.

### ಪಟ್ಟಿಯನ್ನು ಪೂರ್ತಿಗೊಳಿಸಿರಿ

| ಚಿತ್ರಗಳು | ಘಟನೆಗಳು | ಪ್ರಧಾನ ಮಾಹಿತಿಗಳು |
|---|---|---|
|  | ಜಲಿಯನ್ ವಾಲಾಬಾಗ್ ಹತ್ಯಾಕಾಂಡ | • 1919<br>• ಪಂಜಾಬಿನ ಅಮೃತಸರ<br>• ರೌಲಟ್ ಆಕ್ಟ್‌ನ ವಿರುದ್ಧದ ಪ್ರತಿಭಟನೆ<br>•<br>• |
|  | | •<br>•<br>•<br>•<br>• |

## ಚೌರಿ ಚೌರಾ ಘಟನೆ

ಉತ್ತರ ಪ್ರದೇಶದ ಚೌರಿಚೌರಾ ಗ್ರಾಮದಲ್ಲಿ ಬ್ರಿಟಿಷ್ ಆಡಳಿತಾಧಿಕಾರಿಗಳ ದುಷ್ಕೃತ್ಯಗಳಿಗೆದುರಾಗಿ 1922ರಲ್ಲಿ ಕೃಷಿಕರು ಸಂಘಟಿತರಾದರು. ಸುಮಾರು ಮೂರು ಸಾವಿರಕ್ಕಿಂತಲೂ ಹೆಚ್ಚು ನಿರಾಯುಧರಾದ ಕೃಷಿಕರ ಮೆರವಣಿಗೆಗೆದುರಾಗಿ ಪೊಲೀಸರು ಗುಂಡಿನ ಮಳೆಗರೆದರು. ಕೋಪೋದ್ರಿಕ್ತರಾದ ಜನರು ಪೊಲೀಸು ಠಾಣೆಗೆ ಬೆಂಕಿ ಹಚ್ಚಿದರು. ಇಪ್ಪತ್ತೆರಡು ಪೊಲೀಸರು ಕೊಲ್ಲಲ್ಪಟ್ಟರು. ಈ ಘಟನೆಯು ಅಹಿಂಸಾತ್ಮಕ ಹೋರಾಟಕ್ಕೆ ವಿರುದ್ಧವಾದ ಕಾರಣ ಅಸಹಕಾರ ಚಳುವಳಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ಗಾಂಧೀಜಿ ತೀರ್ಮಾನಿಸಿದರು.

ಅಸಹಕಾರ ಚಳುವಳಿಯನ್ನು ನಿಲ್ಲಿಸಲು ಗಾಂಧೀಜಿಯನ್ನು ಪ್ರೇರೇಪಿಸಿದ ಸನ್ನಿವೇಶಗಳು ಯಾವುವು? ಚರ್ಚಿಸಿರಿ.



ಗಾಂಧೀಜಿಯ ಆರಂಭ ಕಾಲದ ಹೋರಾಟದ ವಿಧಾನಗಳಿಗಿಂತ ಅಸಹಕಾರ ಚಳುವಳಿಯು ಹೇಗೆ ಭಿನ್ನವಾಗಿದೆ?

## ವೈಕ್ಕಂ ಸತ್ಯಾಗ್ರಹ

ರಾಷ್ಟ್ರೀಯ ಚಳುವಳಿಯು ಸ್ವಾತಂತ್ರ್ಯ ಹೋರಾಟದೊಂದಿಗೆ ಸಾಮಾಜಿಕ ಅಸಮಾನತೆಗೆದುರಾಗಿ ಹೋರಾಡುವ ವೇದಿಕೆಯಾಗಿ ಬದಲಾಯಿತು.

ವೈಕ್ಕಂ ದೇವಾಲಯದ ಆವರಣ ಗೋಡೆಯ ಹೊರಗೆ ಸುತ್ತಲೂ ಇರುವ ರಸ್ತೆಗಳಲ್ಲಿ ಸಂಚರಿಸಲು ಅವರ್ಣೀಯರಿಗೆ ಹಕ್ಕು ಇರಲಿಲ್ಲ. 1924ರ ವೈಕ್ಕಂ ಸತ್ಯಾಗ್ರಹವು ಈ ರಸ್ತೆಗಳಲ್ಲಿ ಎಲ್ಲಾ ಜಾತಿಯವರಿಗೂ ಸಂಚರಿಸಲಿರುವ ಹಕ್ಕನ್ನು ನೀಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟುಕೊಂಡು ನಡೆಸಿದ ಹೋರಾಟವಾಗಿದೆ. ಇದರ ಅಂಗವಾಗಿ ಮನ್ನತ್ ಪದ್ಮನಾಭರ ನೇತೃತ್ವದಲ್ಲಿ ನಡೆದ ಸವರ್ಣ ಜಾಥವು ಪ್ರಸಿದ್ಧವಾಗಿದೆ. ಇದು ಸಾರ್ವಜನಿಕ ಸ್ಥಳಗಳಲ್ಲಿ ಅಸ್ಪೃಶ್ಯತೆಯೆಂಬ ಅನಾಚಾರಕ್ಕೆದುರಾಗಿ ಭಾರತದಲ್ಲಿ ನಡೆದ ಗಮನಾರ್ಹವಾದ ಹೋರಾಟಗಳಲ್ಲೊಂದಾಗಿದೆ. ಈ ಹೋರಾಟಕ್ಕೆ ಬೆಂಬಲವನ್ನು ನೀಡಲು ಗಾಂಧಿಯವರು ವೈಕ್ಕಂಗೆ ತಲುಪಿದ ಘಟನೆಯನ್ನು ಅಧ್ಯಾಯದ ಆರಂಭದಲ್ಲಿ ನಾವು ಓದಿದ್ದೇವಲ್ಲವೆ.




### ಸವರ್ಣ ಜಾಥ


ವೈಕ್ಕಂ ಸತ್ಯಾಗ್ರಹಕ್ಕೆ ಬೆಂಬಲವನ್ನು ಘೋಷಿಸಿ ಮನ್ನತ್ ಪದ್ಮನಾಭನ್‌ರವರ ನೇತೃತ್ವದಲ್ಲಿ 1924 ನವೆಂಬರ್ 1ರಂದು ಸವರ್ಣೀಯರ ಸಹಭಾಗಿತ್ವದೊಂದಿಗೆ ವೈಕ್ಕಂ ದೇವಾಲಯದಿಂದ ತಿರುವನಂತಪುರಕ್ಕೆ ಒಂದು ಜಾಥವು ಹೊರಟಿತು. ವೈಕ್ಕಂ ದೇವಾಲಯಕ್ಕಿರುವ ಎಲ್ಲ ರಸ್ತೆಗಳ ಮೂಲಕ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಸಂಚರಿಸಲು ಅನುಮತಿ ನೀಡಬೇಕೆಂದು ವಿನಂತಿಸಿ ಅವರು ಮಹಾರಾಣಿ ಸೇತುಲಕ್ಷ್ಮೀ ಬಾಯಿಗೆ ಮನವಿಯೊಂದನ್ನು ಸಲ್ಲಿಸಿದರು.


ವೈಕ್ಕಂ ಸತ್ಯಾಗ್ರಹದ ಪ್ರಾಧಾನ್ಯದ ಕುರಿತು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.


## ನೇಣುಗಂಬಕ್ಕೆ ಹೆದರದವರು

ಗಾಂಧೀಜಿಯ ಹೋರಾಟ ವಿಧಾನಗಳಿಗೆ ಸಮಾನವಾಗಿ ಇದೇ ಕಾಲಘಟ್ಟದಲ್ಲಿ ಅನೇಕ ಸಶಸ್ತ್ರ ಹೋರಾಟಗಳು ನಡೆದುವು. ಚಂದ್ರಶೇಖರ.ಆಜಾದ್, ಭಗತ್‌ಸಿಂಗ್, ರಾಜಗುರು, ಸುಖ್‌ದೇವ್ ಮೊದಲಾದವರು ಈ ರೀತಿಯ ಹೋರಾಟಗಳಿಗೆ ನೇತೃತ್ವವನ್ನು ನೀಡಿ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದವರಾಗಿದ್ದಾರೆ. ಯುವಕರನ್ನು ಹೋರಾಟಗಳಿಗೆ ಸಜ್ಜುಗೊಳಿಸುವುದು ಅವರ ಗುರಿಯಾಗಿತ್ತು. ಅದಕ್ಕಾಗಿ ಅವರು ಹಿಂದುಸ್ತಾನ್ ರಿಪಬ್ಲಿಕನ್ ಅಸೋಸಿಯೇಶನ್ ಎಂಬ ಸಂಘಟನೆಗೆ ರೂಪು ನೀಡಿದರು.


ಚಂದ್ರಶೇಖರ ಆಜಾದ್


ಭಗತ್‌ಸಿಂಗ್


ರಾಜಗುರು


ಸುಖ್‌ದೇವ್



## ಒಂದು ಚಿಟಿಕೆ ಉಪ್ಪು ಒಂದು ಸಾಮ್ರಾಜ್ಯವನ್ನು ಅಲುಗಾಡಿಸಿತು

1929ರಲ್ಲಿ ಲಾಹೋರಿನಲ್ಲಿ ನಡೆದ ಇಂಡಿಯನ್ ನ್ಯಾಶನಲ್ ಕಾಂಗ್ರೆಸಿನ ಸಮ್ಮೇಳನವು ಗಾಂಧಿಯವರ ನೇತೃತ್ವದಲ್ಲಿ ಕಾನೂನು ಉಲ್ಲಂಘನ ಚಳುವಳಿಯನ್ನು ಆರಂಭಿಸಲು ತೀರ್ಮಾನಿಸಿತು. ಬ್ರಿಟಿಷರ ಜನವಿರೋಧಿ ಕಾನೂನುಗಳನ್ನು ಉಲ್ಲಂಘಿಸುವುದು ಇದರ ಮುಖ್ಯ ಗುರಿಯಾಗಿತ್ತು. ಈ ಸಂದರ್ಭದಲ್ಲಿ ಬ್ರಿಟಿಷ್ ಸರಕಾರವು ಉಪ್ಪಿನ ಮೇಲಿನ ತೆರಿಗೆಯನ್ನು ಇಮ್ಮಡಿಗೊಳಿಸಿದುದು ಜನರೋಷಕ್ಕೆ ಕಾರಣವಾಯಿತು. ಉಪ್ಪು ಎಲ್ಲರಿಗೂ ಅತಿ ಅಗತ್ಯವಾದ ಕಾರಣ ಜನರನ್ನು ಹೋರಾಟದ ಕಡೆಗೆ ಸೆಳೆಯಲು ಉಪ್ಪನ್ನು ಹೋರಾಟದ ಆಯುಧವನ್ನಾಗಿಸುವುದು ಸೂಕ್ತವೆಂದು ಗಾಂಧೀಜಿಗೆ ಮನವರಿಕೆಯಾಯಿತು. ಉಪ್ಪಿನ ಕಾನೂನನ್ನು ಉಲ್ಲಂಘಿಸಲು ಗಾಂಧಿಯವರು ತೀರ್ಮಾನಿಸಿದರು.



ದಂಡಿ ಯಾತ್ರೆ

ಉಪ್ಪು ಸತ್ಯಾಗ್ರಹವನ್ನು ಘೋಷಿಸಿದ ಗಾಂಧಿಯವರು ಹೀಗೆ ಹೇಳಿದರು.

"ಒಂದೋ ನಾನು ನನ್ನ ಗುರಿಯನ್ನು ಸಾಧಿಸಿ ಮರಳಿ ಬರುವೆನು. ಪರಾಜಯಗೊಂಡರೆ ನಾನು ನನ್ನ ಮೃತ ಶರೀರವನ್ನು ಸಮುದ್ರಕ್ಕೆ ಅರ್ಪಿಸುವೆನು."

78 ಮಂದಿ ಅನುಯಾಯಿಗಳೊಂದಿಗೆ ಗಾಂಧಿಯವರು ಸಬರ್ಮತಿ ಆಶ್ರಮದಿಂದ ಪ್ರಯಾಣವನ್ನು ಆರಂಭಿಸಿದರು. 375 ಕಿಲೋಮೀಟರ್ ದೂರವನ್ನು ಕಾಲ್ನಡಿಗೆಯಲ್ಲಿ ಸಂಚರಿಸಿ ದಂಡಿ ಕಡಲ ತೀರಕ್ಕೆ ತಲುಪಿದರು.

1930 ಏಪ್ರಿಲ್ 6ರಂದು ಒಂದು ಹಿಡಿ ಉಪ್ಪನ್ನು ಸಂಗ್ರಹಿಸಿಕೊಂಡು ಗಾಂಧಿಯವರು ಕಾನೂನು ಉಲ್ಲಂಘನ ಚಳುವಳಿಗೆ ನಾಂದಿಯನ್ನು ಹಾಡಿದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ 'ಉಪ್ಪು' ಕಾನೂನು ಉಲ್ಲಂಘನ ಹೋರಾಟದ ಪ್ರತೀಕವಾಯಿತು.



ಉಪ್ಪು ನಿಯಮದ ಉಲ್ಲಂಘನೆ



### ದಂಡಿ ಯಾತ್ರೆಯ ಮಲಯಾಳಿಗಳು

ಸಿ. ಕೃಷ್ಣನ್‌ನಾಯರ್, ಟೈಟಸ್, ಶಂಕರನ್ ಎಳುತ್ತಚ್ಚನ್ ಮತ್ತು ರಾಘವ ಪೊದುವಾಳರು ಉಪ್ಪು ಸತ್ಯಾಗ್ರಹದಲ್ಲಿ ಗಾಂಧೀಜಿಯೊಂದಿಗಿದ್ದ ಮಲಯಾಳಿಗಳಾಗಿದ್ದಾರೆ.


ಖಾನ್ ಅಬ್ದುಲ್ ಗಫರ್‌ಖಾನ್

ಭಾರತದಾದ್ಯಂತ ಕಾನೂನು ಉಲ್ಲಂಘನ ಚಳುವಳಿಯು ವ್ಯಾಪಿಸಿತು. 'ಗಡಿನಾಡ ಗಾಂಧಿ' ಎಂಬುದಾಗಿ ಹೆಸರು ಪಡೆದ ಖಾನ್ ಅಬ್ದುಲ್ ಗಫರ್‌ಖಾನ್‌ರ ನೇತೃತ್ವದಲ್ಲಿ ಭಾರತದ ವಾಯುವ್ಯ ಭಾಗದಲ್ಲಿ ಹೋರಾಟವು ನಡೆಯಿತು.


ಸರೋಜಿನಿ ನಾಯ್ಡು

ಕೆ. ಮಾಧವನ್ ನಾಯರ್ ಹಾಗೂ ಇ. ಮೊಯ್ದು ಮೌಲವಿಯವರು ಕೇರಳದಲ್ಲಿ ಉಪ್ಪು ಸತ್ಯಾಗ್ರಹದ ಪ್ರಚಾರಕ್ಕೆ ನೇತೃತ್ವವನ್ನು ನೀಡಿದ ಪ್ರಧಾನ ವ್ಯಕ್ತಿಗಳಾಗಿದ್ದಾರೆ. ಕಣ್ಣೂರು ಜಿಲ್ಲೆಯ ಪಯ್ಯನ್ನೂರು ಮತ್ತು ಕಲ್ಲಿಕೋಟೆಯು ಉಪ್ಪುಸತ್ಯಾಗ್ರಹದ ಪ್ರಧಾನ ಕೇಂದ್ರಗಳಾಗಿದ್ದುವು. ಪಯ್ಯನ್ನೂರಿನಲ್ಲಿ ಕೆ. ಕೇಳಪ್ಪನವರ ನೇತೃತ್ವದಲ್ಲಿ ಉಪ್ಪಿನ ಕಾನೂನನ್ನು ಉಲ್ಲಂಘಿಸಲಾಯಿತು. ಕಲ್ಲಿಕೋಟೆಯಲ್ಲಿ ಉಪ್ಪಿನ ಸತ್ಯಾಗ್ರಹಕ್ಕೆ ನೇತೃತ್ವವನ್ನು ನೀಡಿದ ಮುಹಮ್ಮದ್ ಅಬ್ದುಲ್‌ರಹಿಮಾನ್ ಮತ್ತು ಪಿ.ಕೃಷ್ಣ ಪಿಳ್ಳೆಯವರು ಪೊಲೀಸರ ಕ್ರೂರವಾದ ಹೊಡೆತದಿಂದ ಗಾಯಗೊಂಡರು. ಉಪ್ಪು ಸತ್ಯಾಗ್ರಹವು ಕೇರಳೀಯರ ಮನದಾಳದಲ್ಲಿ ಸ್ವಾತಂತ್ರ್ಯ ಹೋರಾಟದ ಅಗ್ನಿಜ್ವಾಲೆಯು ಪ್ರಜ್ವಲಿಸುವಂತೆ ಮಾಡಿತು.



## ನಾಗಾ ಜನತೆಯ ರಾಣಿ

ಭಾರತದ ಈಶಾನ್ಯ ಭಾಗದಲ್ಲಿರುವ ಮಣಿಪುರ, ನಾಗಾಲ್ಯಾಂಡ್ ಎಂಬೀ ಪ್ರದೇಶಗಳಲ್ಲೂ ಕಾನೂನು ಉಲ್ಲಂಘನ ಚಳುವಳಿಯು ನವಚೇತನವನ್ನು ತುಂಬಿತು. ಕೇವಲ ಹದಿಮೂರು ವರ್ಷ ಪ್ರಾಯದ ರಾಣಿ ಗೈಡಿಲಿಯು ರಾಷ್ಟ್ರೀಯ ಚಳುವಳಿಯಿಂದ ಪ್ರಭಾವಿತಳಾಗಿ ಕಾನೂನು ಉಲ್ಲಂಘನ ಚಳುವಳಿಯಲ್ಲಿ ಪಾಲ್ಗೊಂಡಳು. ಸ್ವಾತಂತ್ರ್ಯ ಹೋರಾಟದಲ್ಲಿ ಅವಳು ವಹಿಸಿದ ಪಾತ್ರಕ್ಕೆ ಮೆಚ್ಚಿ ಅವಳನ್ನು "ನಾಗಾ ಜನತೆಯ ರಾಣಿ" ಎಂಬುದಾಗಿ ಜವಹರ್‌ಲಾಲ್ ನೆಹರೂರವರು ಕರೆದರು.

ಉಪ್ಪು ಸತ್ಯಾಗ್ರಹವನ್ನು ದಮನಿಸಲು ಬ್ರಿಟಿಷ್ ಸರಕಾರವು ತೀರ್ಮಾನಿಸಿತು. ಗಾಂಧೀಜಿ, ಜವಹರ್‌ಲಾಲ್ ನೆಹರೂ, ಸುಭಾಷ್‌ಚಂದ್ರಬೋಸ್ ಮೊದಲಾದ ನೇತಾರರನ್ನೂ ಒಳಗೊಂಡಂತೆ ಸಾವಿರಾರು ಜನರನ್ನು ಬ್ರಿಟಿಷರು ಬಂಧಿಸಿದರು.

ಉಪ್ಪು ಸತ್ಯಾಗ್ರಹದ ಪ್ರಧಾನ ಘಟನೆಗಳನ್ನು ನಾಟಕ ರೂಪದಲ್ಲಿ ಆವಿಷ್ಕರಿಸಿರಿ.



ಉಪ್ಪನ್ನು ಹೋರಾಟದ ಅಸ್ತ್ರವಾಗಿ ಬಳಸಲು ಗಾಂಧೀಜಿಯನ್ನು ಪ್ರೇರೇಪಿಸಿದ ಅಂಶಗಳು ಯಾವುವು? ಚರ್ಚಿಸಿರಿ.

### ಗುರುವಾಯೂರು ಸತ್ಯಾಗ್ರಹ

ಗಾಂಧೀಜಿಯವರ ಆಶಯವಾದ ಸಾಮಾಜಿಕ ಪುನರ್ ನಿರ್ಮಾಣವು ಕೂಡ ಸ್ವಾತಂತ್ರ್ಯ ಹೋರಾಟದ ಭಾಗವೇ ಆಗಿತ್ತು. ಸಾಮಾಜಿಕ ಸಮಾನತೆಯ ಸೃಷ್ಟಿ ಎಂಬ ಉದ್ದೇಶದೊಂದಿಗೆ ಆರಂಭಿಸಿದ ಅಸ್ಪೃಶ್ಯತಾ ನಿವಾರಣ ಆಂದೋಲನಗಳು ಮತ್ತು ಆರಾಧನ ಸ್ವಾತಂತ್ರ್ಯವನ್ನು ಗಳಿಸಲು ಮಾಡಿದ ಹೋರಾಟಗಳು ಸ್ವಾತಂತ್ರ್ಯ ಹೋರಾಟದ ಭಾಗಗಳಾಗಿ ಬದಲಾದವು. ಕೇರಳದಲ್ಲಿ 1931ರಲ್ಲಿ ನಡೆದ ಗುರುವಾಯೂರು ಸತ್ಯಾಗ್ರಹವು ಕೂಡ ಇಂತಹ ಹೋರಾಟಗಳಲ್ಲೊಂದಾಗಿದೆ.

ಗುರುವಾಯೂರು ದೇವಾಲಯದಲ್ಲಿ ಎಲ್ಲ ಹಿಂದುಗಳಿಗೂ ಪ್ರವೇಶಾನುಮತಿ ನೀಡಬೇಕೆಂಬ ಗಾಂಧಿಯವರ ಬೇಡಿಕೆಯನ್ನು ದೇವಾಲಯದ ಆಡಳಿತ ಮೊಕ್ತೇಸರರಾದ ಸಾಮೂದಿರಿಯು ತಿರಸ್ಕರಿಸಿದರು. ಇದಕ್ಕೆದುರಾಗಿ ಗುರುವಾಯೂರು ದೇವಾಲಯದ ಎದುರು ಕೆ.ಕೇಳಪ್ಪನವರು ನಿರಾಹಾರ ಸತ್ಯಾಗ್ರಹವನ್ನು ಆರಂಭಿಸಿದರು. ಪಿ. ಕೃಷ್ಣಪಿಳ್ಳೆ ಮತ್ತು

ಎ.ಕೆ.ಗೋಪಾಲನ್ ಇದಕ್ಕೆ ನೇತೃತ್ವವನ್ನು ನೀಡಿದರು. ಗಾಂಧಿಯವರ ಬೆಂಬಲದೊಂದಿಗೆ ಆರಂಭಿಸಿದ ಈ ಸತ್ಯಾಗ್ರಹವು ಎಲ್ಲ ಹಿಂದುಗಳಿಗೂ ದೇವಾಲಯ ಪ್ರವೇಶಾನುಮತಿ ದೊರೆಯಲು ಕಾರಣವಾಯಿತು.



ಡಾ. ಬಿ.ಆರ್. ಅಂಬೇಡ್ಕರ್

## ಅಂಬೇಡ್ಕರ್ ಹಾಗೂ ಪೂನಾದ ಒಪ್ಪಂದ

ಡಾ.ಬಿ.ಆರ್. ಅಂಬೇಡ್ಕರರು ಭಾರತದ ದಲಿತರನ್ನು ರಾಜಕೀಯವಾಗಿ ಸಂಘಟಿಸುವ ಚಟುವಟಿಕೆಗಳಿಗೆ ನೇತೃತ್ವವನ್ನು ನೀಡಿದವರಲ್ಲಿ ಅಗ್ರಗಣ್ಯರಾಗಿದ್ದಾರೆ. ರಾಷ್ಟ್ರದ ಆಡಳಿತದಲ್ಲಿ ಸಹಭಾಗಿತ್ವವನ್ನು ಗಳಿಸುವ ಮೂಲಕ ಮಾತ್ರವೇ ದಲಿತರಿಗೆ ವಿಮೋಚನೆಯನ್ನು ಪಡೆಯಲು ಸಾಧ್ಯವೆಂದು ಮನಗಂಡ ಅಂಬೇಡ್ಕರರು ಅದಕ್ಕಾಗಿ ದುಂಡುಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿದರು. ಆ ಮೂಲಕ ಅವರು ಅಸ್ಪೃಶ್ಯರು ಅನುಭವಿಸುವ ಸಾಮಾಜಿಕ ತೊಡಕುಗಳನ್ನು ಪರಿಹರಿಸಲು ರಾಷ್ಟ್ರದ ರಾಜಕೀಯ ಅಧಿಕಾರದಲ್ಲಿ ದಲಿತರನ್ನು ಸಹಭಾಗಿಗಳನ್ನಾಗಿಸಬೇಕೆಂದು ಬ್ರಿಟಿಷ್ ಸರಕಾರದೊಡನೆ ಕೇಳಿಕೊಂಡರು.

### ದುಂಡು ಮೇಜಿನ ಪರಿಷತ್ತು

ಭಾರತದ ಸಮಸ್ಯೆಗಳನ್ನು ಚರ್ಚಿಸಲು 1930, 1931 ಮತ್ತು 1932ರಲ್ಲಿ ಬ್ರಿಟಿಷ್ ಸರಕಾರವು ಲಂಡನಿನಲ್ಲಿ ದುಂಡು ಮೇಜಿನ ಸಮ್ಮೇಳನಗಳನ್ನು ನಡೆಸಿತು. ಅಂಬೇಡ್ಕರರು ಈ ಮೂರು ಸಮ್ಮೇಳನಗಳಲ್ಲೂ ಭಾಗವಹಿಸಿದರು. ಗಾಂಧೀಜಿಯು ಎರಡನೇ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸಿದರು.

ಬ್ರಿಟಿಷ್ ಸರಕಾರವು ದಲಿತರಿಗೆ ಪ್ರತ್ಯೇಕ ವಿಧಾನಸಭಾ ಕ್ಷೇತ್ರವನ್ನು ಮೀಸಲಿಟ್ಟಿತು. ದಲಿತರು ಸಮಾಜದ ಮುಖ್ಯ ವಾಹಿನಿಯಿಂದ ಹೊರಗೆ ಉಳಿಯುವಂತೆ ಮಾಡಲು ಇದು ಕಾರಣವಾಗಬಹುದು ಎಂದು ಮನಗಂಡು ಗಾಂಧೀಜಿಯವರು ದಲಿತರನ್ನು ಹೀಗೆ ಪ್ರತ್ಯೇಕ ರಾಜಕೀಯ ವಿಭಾಗವಾಗಿ ಪರಿಗಣಿಸುವುದನ್ನು ಪ್ರತಿಭಟಿಸಿದರು. ಬ್ರಿಟಿಷ್ ಸರಕಾರದ ಧೋರಣೆಗೆದುರಾಗಿ ಗಾಂಧಿಯವರು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಮಾಡಲು ತೀರ್ಮಾನಿಸಿದರು. ಗಾಂಧೀಜಿ ಮತ್ತು ಅಂಬೇಡ್ಕರರು ಪರಸ್ಪರ ಮಾತುಕತೆ ನಡೆಸಿದರು. ಇದರಂತೆ ದಲಿತರಿಗೆ ಪ್ರತ್ಯೇಕ ವಿಧಾನಸಭಾ ಕ್ಷೇತ್ರಗಳನ್ನು ಕೈಬಿಟ್ಟು, ಮೀಸಲಾತಿ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸಿ ದಲಿತರ ರಾಜಕೀಯ ಹಕ್ಕನ್ನು ಸಂರಕ್ಷಿಸಲು ತೀರ್ಮಾನಿಸಿದರು. 1932ರಲ್ಲಿ ಗಾಂಧೀಜಿ ಮತ್ತು ಅಂಬೇಡ್ಕರರ ನಡುವೆ ಮಾಡಿಕೊಂಡ ಈ ಒಪ್ಪಂದವನ್ನು ಪೂನಾ ಒಪ್ಪಂದವೆಂದು ಕರೆಯಲಾಗುತ್ತದೆ.

- ಪೂನಾ ಒಪ್ಪಂದಕ್ಕೆ ಕಾರಣವಾದ ಸನ್ನಿವೇಶಗಳಾವುವು? ಚರ್ಚಿಸಿರಿ.



## ಕ್ವಿಟ್ ಇಂಡಿಯಾ ಚಳುವಳಿ

ಕ್ವಿಟ್ ಇಂಡಿಯಾ ಚಳುವಳಿಯು ಬ್ರಿಟಿಷರ ಆಡಳಿತಕ್ಕೆದುರಾಗಿ ಭಾರತದಲ್ಲಿ ನಡೆದ ಅತಿ ದೊಡ್ಡ ಜನಪರ ಹೋರಾಟವಾಗಿದೆ. 1942 ಆಗಸ್ಟ್ 8ರಂದು ಬೊಂಬೈಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಘೋಷಿಸಿದರು. ಎಲ್ಲ ಆಡಳಿತಾಧಿಕಾರಗಳನ್ನೂ ಭಾರತೀಯರಿಗೆ ಹಸ್ತಾಂತರಿಸಿ ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಬೇಕೆಂದು ಈ ಸಮ್ಮೇಳನವು ಆಗ್ರಹಿಸಿತು.



ಬೊಂಬಾಯಿಯ ಕಾಂಗ್ರೆಸ್ ಸಮ್ಮೇಳನದಲ್ಲಿ ಗಾಂಧೀಜಿ ಮತ್ತು ನೆಹರು


ಕಸ್ತೂರ್‌ಬಾ ಗಾಂಧಿ

ಗಾಂಧೀಜಿ ತನ್ನ ಭಾಷಣದ ಮೂಲಕ ಹೀಗೆ ಕರೆಯಿತ್ತರು.

"ಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆಯಾಗಿರುವ ಯಾವುದೂ ಬೇಡ. ನಾನು ನಿಮಗೆ ಒಂದು ಮಂತ್ರ, ಒಂದು ಕಿರುಮಂತ್ರವನ್ನು ಹೇಳಿಕೊಡುತ್ತೇನೆ. ಅದನ್ನು ನೀವು ನಿಮ್ಮ ಹೃದಯಗಳಲ್ಲಿಟ್ಟುಕೊಳ್ಳಿ. ನಿಮ್ಮ ಪ್ರತಿಯೊಂದು ಶ್ವಾಸೋಚ್ಛ್ವಾಸಗಳಲ್ಲಿ ಅದು ಹೊರ ಹೊಮ್ಮುತ್ತಿರಲಿ. "ಮಾಡು ಇಲ್ಲವೇ ಮಡಿ" ಎಂಬುದೇ ಆ ಮಂತ್ರ. ನಾವು ಒಂದೋ ಭಾರತವನ್ನು ಸ್ವತಂತ್ರವಾಗಿಸುತ್ತೇವೆ. ಅಲ್ಲದಿದ್ದರೆ ಆ ಪ್ರಯತ್ನದಲ್ಲಿ ಮರಣವನ್ನಪ್ಪುತ್ತೇವೆ."


ಅರುಣಾ ಅಸಫಲಿ

ಕಾಂಗ್ರೆಸ್ಸಿನ ಅನೇಕ ನೇತಾರರನ್ನು ಬಂಧಿಸಲಾಯಿತು. ಗಾಂಧೀಜಿ ಮತ್ತು ಅವರ ಪತ್ನಿಯಾದ ಕಸ್ತೂರ್‌ಬಾ ಗಾಂಧಿಯನ್ನು ಪೂನಾದ ಆಗಾಖಾನ್ ಅರಮನೆಯ ಸೆರೆಮನೆಯಲ್ಲಿಟ್ಟರು. 1944 ಫೆಬ್ರವರಿ 22ರಂದು ಕಸ್ತೂರ್‌ಬಾ ಗಾಂಧಿಯವರು ಸೆರೆಮನೆವಾಸದಲ್ಲಿರುವಾಗಲೇ ಮರಣ ಹೊಂದಿದರು. ಕಾರಾಗೃಹದ ಹಿತ್ತಿಲಿನಲ್ಲಿಯೇ ಶವ ಸಂಸ್ಕಾರ ಮಾಡಿದರು. ಅರುಣಾ ಅಸಫಲಿ, ಜಯಪ್ರಕಾಶ್ ನಾರಾಯಣ್ ಮೊದಲಾದವರು ಭೂಗತರಾಗಿದ್ದುಕೊಂಡು ಕ್ವಿಟ್ ಇಂಡಿಯಾ ಚಳುವಳಿಗೆ ನೇತೃತ್ವವನ್ನು ನೀಡಿದರು. ಅರುಣಾ ಅಸಫಲಿಯನ್ನು ಗಾಂಧಿಯವರು 'ಕ್ವಿಟ್ ಇಂಡಿಯಾ ಚಳುವಳಿಯ ನಾಯಕಿ' ಎಂದು ಅಭಿನಂದಿಸಿದರು.

ನಾಯಕರ ಬಂಧನವನ್ನು ಪ್ರತಿಭಟಿಸಿ ನಾಡಿನಾದ್ಯಂತ ಮುಷ್ಕರ, ಹರತಾಳ, ಕರಿದಿನಾಚರಣೆ, ಮೆರವಣಿಗೆಗಳು ನಡೆದವು. ಪ್ರತಿಭಟನೆಗಳು ಕ್ರಮೇಣ ದಂಗೆಗಳಾಗಿ ಬದಲಾದವು. ರೈಲ್ವೇ ಸ್ಟೇಷನ್‌ಗಳನ್ನು ನಾಶ ಮಾಡಿದರು. ರೈಲುಗಾಡಿಗಳಿಗೆ ಬೆಂಕಿಹಚ್ಚಿದರು. ಸರಕಾರಿ ಕಚೇರಿಗಳು ಹೊತ್ತಿ ಬೂದಿಯಾದುವು. ವಾರ್ತಾವಿನಿಮಯ ಸಂಪರ್ಕವು ಅಸ್ತವ್ಯಸ್ತವಾಯಿತು. ಕಾರ್ಮಿಕರು ಕಾರ್ಖಾನೆಗಳನ್ನು ತ್ಯಜಿಸಿದರು. ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿದರು.

ಬ್ರಿಟಿಷ್ ಸರಕಾರವು ಹೋರಾಟವನ್ನು ಕ್ರೂರವಾಗಿ ದಮನಿಸಿತು.

1942 ಆಗಸ್ಟ್ 9ರಂದು ಹರತಾಳವನ್ನಾಚರಿಸಿಕೊಂಡು ಕೇರಳದಲ್ಲಿ ಕ್ವಿಟ್ ಇಂಡಿಯಾ ಚಳುವಳಿಯನ್ನು ಆರಂಭಿಸಿದರು. ಇದರಲ್ಲಿ ಪಾಲ್ಗೊಂಡ ಎಂ.ಪಿ. ನಾರಾಯಣ ಮೆನೋನ್, ಕೆ. ಕೇಳಪ್ಪನ್, ಇ. ಮೊಯ್ದು ಮೌಲವಿ ಹಾಗೂ ಎ.ವಿ.ಕುಟ್ಟಿಮಾಳುಅಮ್ಮ ಮೊದಲಾದವರನ್ನು ಬಂಧಿಸಲಾಯಿತು. ಆಗಸ್ಟ್ 9 ನ್ನು ನಾವು 'ಕ್ವಿಟ್ ಇಂಡಿಯಾ ದಿನ'ವನ್ನಾಗಿ ಆಚರಿಸುತ್ತೇವೆ.



ಕ್ವಿಟ್ ಇಂಡಿಯಾ ಚಳುವಳಿಯು ಕಾನೂನು ಉಲ್ಲಂಘನ ಚಳುವಳಿಗಿಂತ ಹೇಗೆ ಭಿನ್ನವಾಗಿದೆ? ಚರ್ಚಿಸಿರಿ.

**ಪಟ್ಟಿಯನ್ನು ಪೂರ್ತಿಗೊಳಿಸಿರಿ**

| ಚಿತ್ರಗಳು | ಸ್ವಾತಂತ್ರ್ಯ ಹೋರಾಟದ ಪ್ರಧಾನ ಘಟನೆಗಳು | ಪ್ರಧಾನ ಮಾಹಿತಿಗಳು |
|---|---|---|
|  | ಉಪ್ಪು ಸತ್ಯಾಗ್ರಹ | • 1930<br>• ಗುಜರಾತಿನ ದಂಡಿ ತೀರ<br>•<br>• |
|  | | •<br>•<br>•<br>• |

### ಕಾಲರೇಖೆ (Time Line) ತಯಾರಿಸಿರಿ

- ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಘಟನೆಗಳನ್ನು ಕಾಲರೇಖೆ ಕ್ರಮದಲ್ಲಿ ದಾಖಲಿಸಿರಿ.

| ಘಟನೆಗಳು | ವರ್ಷ |
| --- | --- |
| ↔ | |
| ↔ | |
| ↔ | |
| ↔ | |
| ↔ | |
| ↔ | |

| | |
| --- | --- |
| • ದಂಡಿಯಾತ್ರೆ | 1942 |
| • ಮಲಬಾರಿನ ದಂಗೆ | 1947 |
| • ವೈಕ್ಕಂ ಸತ್ಯಾಗ್ರಹ | 1930 |
| • ಕ್ವಿಟ್ ಇಂಡಿಯಾ ಚಳುವಳಿ | 1921 |
| • ಅಸಹಕಾರ ಚಳುವಳಿ | 1924 |
| • ಚೌರಿ ಚೌರಾ ಘಟನೆ | 1920 |
| | 1922 |

### ಸುಭಾಷ್ಚಂದ್ರಬೋಸ್ ಹಾಗೂ ಇಂಡಿಯನ್ ನ್ಯಾಶನಲ್ ಆರ್ಮಿ


ಸುಭಾಷ್ಚಂದ್ರ ಬೋಸ್

ಭಾರತದ ಸ್ವಾತಂತ್ರ್ಯವು ಬ್ರಿಟಿಷರ ಔದಾರ್ಯವಲ್ಲ, ಅದನ್ನು ಹೋರಾಡಿ ಗಳಿಸಬೇಕು ಎಂಬುದು ಸುಭಾಷ್ಚಂದ್ರ ಬೋಸರ ನಿಲುವಾಗಿತ್ತು. "ನೀವು ನನಗೆ ರಕ್ತವನ್ನು ಕೊಡಿ. ನಾನು ನಿಮಗೆ ಸ್ವಾತಂತ್ರ್ಯವನ್ನು ಕೊಡುತ್ತೇನೆ" ಎಂಬ ಘೋಷಣೆಯ ಮೂಲಕ ಸುಭಾಷ್ಚಂದ್ರ ಬೋಸರು ಸಾರ್ವಜನಿಕರನ್ನು ಹೋರಾಟಕ್ಕೆ ಆಹ್ವಾನಿಸಿದರು. ರಾಸ್ ಬಿಹಾರಿ ಬೋಸರು ರೂಪಿಸಿದ ಇಂಡಿಯನ್ ನ್ಯಾಶನಲ್ ಆರ್ಮಿ (INA)ಯ ನೇತೃತ್ವವನ್ನು ಸುಭಾಷ್ಚಂದ್ರ ಬೋಸರು ವಹಿಸಿಕೊಂಡರು. ಭಾರತವನ್ನು ವಿಮೋಚನೆಗೊಳಿಸುವುದು ಐ.ಎನ್.ಎ. ಯ ಗುರಿಯಾಗಿತ್ತು.

ಸುಭಾಷ್ಚಂದ್ರ ಬೋಸ್‌ರು ಆಜಾದ್ ಹಿಂದ್ ರೇಡಿಯೋದ ಮೂಲಕ ಗಾಂಧೀಜಿಯಲ್ಲಿ ಹೀಗೆ ಹೇಳಿದರು.

"ಭಾರತದ ಅಂತಿಮವಾದ ಸ್ವಾತಂತ್ರ್ಯ ಯುದ್ಧವು ಆರಂಭಗೊಂಡಿದೆ. ನಮ್ಮ ರಾಷ್ಟ್ರಪಿತರೇ, ಭಾರತದ ವಿಮೋಚನೆಗಾಗಿರುವ ಈ ಪವಿತ್ರ ಯುದ್ಧದಲ್ಲಿ ನಾವು ನಿಮ್ಮ ಅನುಗ್ರಹವನ್ನು ಬೇಡಿಕೊಳ್ಳುತ್ತೇವೆ".

ಗಾಂಧೀಜಿಯು ಸುಭಾಷ್ಚಂದ್ರ ಬೋಸರಿಗೆ ನೇತಾಜಿ ಎಂಬ ಬಿರುದನ್ನು ನೀಡಿದರು. 'ಜೈಹಿಂದ್' ಎಂಬ ಘೋಷಣೆಯು ಸುಭಾಷ್ಚಂದ್ರ ಬೋಸ್‌ರ ಕೊಡುಗೆಯಾಗಿದೆ.


ಕ್ಯಾಪ್ಟನ್ ಲಕ್ಷ್ಮಿ

## ಐ.ಎನ್.ಎ. ಹಾಗೂ ಮಲಯಾಳಿಗಳು

ಮಲೆಯಾಳಿಯಾದ ಕ್ಯಾಪ್ಟನ್‌ಲಕ್ಷ್ಮಿಯವರು ಐ.ಎನ್.ಎ. ಯ ವನಿತಾ ವಿಭಾಗದ ನೇತಾರರಾಗಿದ್ದರು. ವಕ್ಕಂ ಖಾದರರು ಸುಭಾಷ್ಚಂದ್ರಬೋಸರ ಹೋರಾಟದ ವಿಧಾನದಿಂದ ಆಕರ್ಷಿತರಾಗಿ ಐ.ಎನ್.ಎ. ಯಲ್ಲಿ ಸೇರಿಕೊಂಡ ಇನ್ನೊಬ್ಬ ಮಲೆಯಾಳಿಯಾಗಿದ್ದಾರೆ. 26ನೇ ವಯಸ್ಸಿನಲ್ಲಿಯೇ ಬ್ರಿಟಿಷ್ ಸರಕಾರವು ಅವರನ್ನು ನೇಣುಗಂಬಕ್ಕೇರಿಸಿತು. ನೇಣುಗಂಬಕ್ಕೇರುವ ಹಿಂದಿನ ರಾತ್ರಿ ಅವರು ಮನೆಗೆ ಕಳುಹಿಸಿದ ಪತ್ರವನ್ನು ಓದಿರಿ.

ನನ್ನ ಪ್ರೀತಿಯ ಪಿತಾಮಹರೇ,

ನಾನು ಶಾಶ್ವತವಾಗಿ ನಿಮ್ಮನ್ನು ಬಿಟ್ಟು ಹೋಗುತ್ತೇನೆ. ನಾಳೆ ಬೆಳಗ್ಗೆ 6 ಗಂಟೆಗೆ ಮೊದಲು ನನ್ನ ಮರಣ. ಇಂದು ರಾತ್ರಿ 12 ಗಂಟೆ ಬಾರಿಸುವಾಗ ನನ್ನ ಮರಣ ದಿನದ ಆರಂಭದ ಸೂಚನೆಯನ್ನು ನೀಡುತ್ತಾರೆ.

ಹೌದು ರಂಜಾನ್ ತಿಂಗಳ ಏಳನೇ ದಿನವಾದ ಶುಕ್ರವಾರ ಬೆಳಗ್ಗೆ 5 ಮತ್ತು 6 ಗಂಟೆಗಳ ಮಧ್ಯೆ ಮರಣಹೊಂದುವೆನು.

ವಂದನೀಯರಾದ ಪಿತಾಮಹರೇ, ವಾತ್ಸಲ್ಯನಿಧಿಯಾದ ಉಮ್ಮ, ಆತ್ಮೀಯರಾದ ಸಹೋದರಿ, ಸಹೋದರರೇ ನನಗೆ ನಿಮ್ಮನ್ನು ಸಮಾಧಾನಪಡಿಸಲು ಯಾವುದೇ ಮಾತಿಲ್ಲ. ನಾನು ನಿಮ್ಮನ್ನು ಅಗಲುತ್ತಿದ್ದೇನೆ. ನನಗಾಗಿ ದುಃಖಿಸಬೇಡಿ.

ನಾನು ಎಷ್ಟೊಂದು ಧೈರ್ಯ, ಸಂತೋಷ ಹಾಗೂ ಸಮಾಧಾನದಿಂದ ಮರಣ ಹೊಂದಿದೆನೆಂದು ಯಾವುದಾದರೊಂದು ಸಂದರ್ಭದಲ್ಲಿ ಪ್ರತ್ಯಕ್ಷದರ್ಶಿಗಳಿಂದ (Eye witness) ನಿಮಗೆ ತಿಳಿಯಲು ಸಾಧ್ಯವಾದರೆ ನೀವು ಖಂಡಿತವಾಗಿಯೂ ಆನಂದಿಸುವಿರಿ ಹಾಗೂ ಹೆಮ್ಮೆ ಪಡುವಿರಿ. .

ನಾನು ಕೊನೆಗೊಳಿಸುತ್ತೇನೆ.

ವಾತ್ಸಲ್ಯನಿಧಿಯಾದ ಮಗ<br>
ಮುಹಮ್ಮದ್ ಅಬ್ದುಲ್‌ಖಾದರ್

ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡಿದ ಅನೇಕ ವ್ಯಕ್ತಿಗಳಲ್ಲಿ ಒಬ್ಬರಾದ, ಕೇರಳೀಯನಾದ ವಕ್ಕಂ ಖಾದರಿನ ಧೈರ್ಯ ಹಾಗೂ ದೇಶಪ್ರೇಮವು ನಮಗೆ ಆವೇಶವನ್ನುಂಟುಮಾಡುವುದಾಗಿದೆ.

ಸಶಸ್ತ್ರ ಹೋರಾಟದ ಮೂಲಕ ಸ್ವಾತಂತ್ರ್ಯಗಳಿಸಲಿರುವ ಐ.ಎನ್.ಎ.ಯ ಪ್ರಯತ್ನಗಳನ್ನು ಬ್ರಿಟಿಷ್ ಸರಕಾರವು ದಮನಿಸಿತು.



ಸುಭಾಷ್ಚಂದ್ರ ಬೋಸರ ಹೋರಾಟದ ವಿಧಾನಗಳು ಭಾರತದ ಸ್ವಾತಂತ್ರ್ಯ ಹೋರಾಟದ ಮೇಲೆ ಬೀರಿದ ಪ್ರಭಾವದ ಕುರಿತು ವಿವರಿಸಿರಿ.

## ಗಾಂಧೀಜಿಯ ನೇತೃತ್ವದಲ್ಲಿ ನಡೆದ ಹೋರಾಟಗಳಿಗೆ ಸಂಬಂಧಿಸಿದ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಹೋರಾಟಗಳು | ಹೋರಾಟದ ವಿಧಾನಗಳು/ವಿಶೇಷತೆಗಳು |
|---|---|
| ಚಂಪಾರಣ್ ಸತ್ಯಾಗ್ರಹ | • ಸತ್ಯಾಗ್ರಹ ಹೋರಾಟ<br>• ರೈತರ ಸಮಸ್ಯೆಗಳಲ್ಲಿ ಮಧ್ಯಪ್ರವೇಶ ಮಾಡಿದರು<br>• ಬಿಳಿಯರ ಶೋಷಣೆಗೆದುರಾದ ಹೋರಾಟ |
| ಖೇಡಾ ಹೋರಾಟ | •<br>•<br>• |
| ಬಟ್ಟೆಗಿರಣಿಯ ಕಾರ್ಮಿಕರ ಹೋರಾಟ (ಅಹಮ್ಮದಾಬಾದ್) | •<br>•<br>• |
| ರೌಲಟ್ ಆಕ್ಟಿಗೆದುರಾದ ಹೋರಾಟ | •<br>•<br>• |
| ಅಸಹಕಾರ ಚಳುವಳಿ | •<br>•<br>• |
| ಉಪ್ಪು ಸತ್ಯಾಗ್ರಹ | •<br>•<br>• |
| ಕ್ವಿಟ್ ಇಂಡಿಯಾ ಚಳುವಳಿ | •<br>•<br>• |

ಪೂರ್ತಿಗೊಳಿಸಿದ ಪಟ್ಟಿಯನ್ನು ವಿಶ್ಲೇಷಿಸಿ ಗಾಂಧಿಯವರ ಹೋರಾಟ ವಿಧಾನಗಳ ಸಾಮಾನ್ಯ ವಿಶೇಷತೆಗಳನ್ನು ಕಂಡುಹಿಡಿಯಿರಿ.

## ಮುಹಮ್ಮದಾಲಿ ಜಿನ್ನ ಮತ್ತು ಪಾಕಿಸ್ತಾನವಾದ

ಅಖಿಲ ಭಾರತ ಮುಸ್ಲಿಂ ಲೀಗಿನ ರೂಪೀಕರಣದ ಕುರಿತು ಹಿಂದಿನ ಅಧ್ಯಾಯದಲ್ಲಿ ನಾವು ಚರ್ಚಿಸಿದೆವಲ್ಲವೇ. 1940ರಲ್ಲಿ ಮುಸ್ಲಿಂಲೀಗಿನ ಸಮ್ಮೇಳನವು ಲಾಹೋರಿನಲ್ಲಿ ನಡೆಯಿತು. ಬಹುಸಂಖ್ಯಾತ ಮುಸ್ಲಿಂ ಪ್ರದೇಶಗಳನ್ನು ಒಟ್ಟಿಗೆ ಸೇರಿಸಿಕೊಂಡು ಪಾಕಿಸ್ತಾನವೆಂಬ ಹೆಸರಿನಲ್ಲಿ ಒಂದು ರಾಷ್ಟ್ರವನ್ನು ರೂಪೀಕರಿಸಬೇಕೆಂದು ಸಮ್ಮೇಳನವು ಕೇಳಿಕೊಂಡಿತು. ಭಾರತದಲ್ಲಿ ಮುಸ್ಲಿಮರನ್ನು ಪ್ರತಿನಿಧಿಸುವ ಏಕೈಕ ಸಂಘಟನೆ ಮುಸ್ಲಿಂಲೀಗ್ ಎಂದೂ ಕಾಂಗ್ರೆಸಿಗೆ ನೀಡುವಂತೆ ಸಮಾನ ಪರಿಗಣನೆಯನ್ನು ಮುಸ್ಲಿಂಲೀಗಿಗೂ ನೀಡಬೇಕೆಂದೂ ಮುಹಮ್ಮದಾಲಿ ಜಿನ್ನ ಅಭಿಪ್ರಾಯಪಟ್ಟರು. "ವಿಭಜಿಸಿ ಆಳು" ಎಂಬ ತಂತ್ರದ ಭಾಗವಾಗಿ ಬ್ರಿಟಿಷ್ ಸರಕಾರವು ಮುಸ್ಲಿಂಲೀಗಿನ ಚಟುವಟಿಕೆಗಳಿಗೆ ಹೆಚ್ಚಿನ ಬೆಂಬಲವನ್ನು ನೀಡಿತು.

ಭಾರತದ ನೂತನ ವೈಸರಾಯಿಯಾಗಿ ನೇಮಕಗೊಂಡ ಮೌಂಟ್ ಬೇಟನ್ ಪ್ರಭು ಕಾಂಗ್ರೆಸ್ಸಿನ ಹಾಗೂ ಅಖಿಲ ಭಾರತ ಮುಸ್ಲಿಂಲೀಗಿನ ನೇತಾರರಲ್ಲಿ ಸುದೀರ್ಘ ಚರ್ಚೆ ನಡೆಸಿ, ಚರ್ಚೆಗಳ ಕೊನೆಯಲ್ಲಿ ಒಪ್ಪಂದವನ್ನು ಮಾಡಲು ತೀರ್ಮಾನಿಸಿದರು. "ಬ್ರಿಟಿಷ್ ಭಾರತವನ್ನು ವಿಭಜಿಸುವುದು, ಸ್ವತಂತ್ರ ಭಾರತದೊಂದಿಗೆ ಪಾಕಿಸ್ತಾನವೆಂಬ ಹೊಸ ಒಂದು ರಾಷ್ಟ್ರವನ್ನು ರೂಪಿಸುವುದು" ಎಂಬ ತೀರ್ಮಾನವನ್ನು ಮೌಂಟ್ ಬೇಟನ್ ಪ್ರಭು ಘೋಷಿಸಿದರು.

ಭಾರತದ ಸ್ವಾತಂತ್ರ್ಯ ಹೋರಾಟವು ಜಾಗತಿಕ ಚರಿತ್ರೆಯಲ್ಲೇ ಸಮಾನತೆಗಳಿಲ್ಲದ ಏಕೈಕ ಜನಪರ ಚಳುವಳಿಯಾಗಿತ್ತು. ವಿವಿಧ ಜನ ವಿಭಾಗಗಳನ್ನು ಬ್ರಿಟಿಷ್ ಆಡಳಿತಕ್ಕೆದುರಾಗಿ ಅಣಿಗೊಳಿಸಲು ಗಾಂಧೀಜಿಗೆ ಸಾಧ್ಯವಾಯಿತು. ಸತ್ಯ, ಅಹಿಂಸೆ, ಸಾಮರಸ್ಯಗಳಂತಹ ಆದರ್ಶಗಳಲ್ಲಿ ಬೇರೂರಿಕೊಂಡು ತಾಳ್ಮೆಯಿಂದ ಕೂಡಿದ ಹೋರಾಟದ ಮೂಲಕ ಸುದೀರ್ಘವಾದ ಬ್ರಿಟಿಷ್ ಆಡಳಿತವನ್ನು ಕೊನೆಗೊಳಿಸಲು ಗಾಂಧಿಯವರ ನೇತೃತ್ವಕ್ಕೆ ಸಾಧ್ಯವಾಯಿತು.

## ಸ್ವಾತಂತ್ರ್ಯೋದಯದ ಕಡೆಗೆ

1947 ಆಗಸ್ಟ್ 14 ಮಧ್ಯರಾತ್ರಿಯಂದು ಜವಹರ್‌ಲಾಲ್ ನೆಹರೂರವರು ಹೀಗೆ ಘೋಷಿಸಿದರು.

"ಅನೇಕ ವರ್ಷಗಳ ಮೊದಲು ನಾವು ವಿಧಿಯೊಂದಿಗೆ ಮಾತುಕತೆ ನಡೆಸಿದೆವು.
ಆ ಪ್ರತಿಜ್ಞೆಯಲ್ಲಿ ಪೂರ್ಣವಲ್ಲದಿದ್ದರೂ, ಪ್ರಧಾನವಾದುದನ್ನು ನೆರವೇರಿಸುವ ಕಾಲ ಈಗ ಸನ್ನಿಹಿತವಾಗಿದೆ.
ಮಧ್ಯರಾತ್ರಿಯಲ್ಲಿ ಜಗತ್ತು ಮಲಗಿರುವಾಗ ಭಾರತವು ಹೊಸ ಬದುಕಿಗಾಗಿ ಹಾಗೂ ಸ್ವಾತಂತ್ರ್ಯಕ್ಕಾಗಿ ಎದ್ದೇಳುತ್ತಿದೆ.
ಆ ನಿಮಿಷಗಳು ಸಮೀಪಿಸುತ್ತಿವೆ.
ಇದು ಚರಿತ್ರೆಯಲ್ಲೇ ಅಪೂರ್ವವಾದ ನಿಮಿಷವಾಗಿದೆ. ಹಳೆಯ ಜಗತ್ತಿನಿಂದ ಹೊಸ ಜಗತ್ತಿನೆಡೆಗೆ ಸಾಗುತ್ತಿದ್ದೇವೆ. ಒಂದು ಯುಗವು ಕೊನೆಗೊಳ್ಳುತ್ತಿದೆ.


ಜವಹರ್‌ಲಾಲ್ ನೆಹರು

ಬಹುಕಾಲದಿಂದ ತುಳಿತಕ್ಕೊಳಗಾಗಿರುವ ಒಂದು ದೇಶದ ಆತ್ಮವು ಮಾತನಾಡಲು ಪ್ರಾರಂಭಿಸುತ್ತಿದೆ. ಈ ಅಪೂರ್ವ ನಿಮಿಷದಲ್ಲಿ ಭಾರತದ, ಭಾರತೀಯರ ಹಾಗೂ ಎಲ್ಲ ಮಾನವ ರಾಶಿಯ ಸೇವೆಗಾಗಿ ಸ್ವಯಂ ಅರ್ಪಿಸುತ್ತಾ ನಾವು ಪ್ರತಿಜ್ಞೆ ಮಾಡೋಣ."

1947 ಆಗಸ್ಟ್ 15 ರಂದು ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿ ಜವಹರ್‌ಲಾಲ್ ನೆಹರೂರವರು ಅಧಿಕಾರ ಸ್ವೀಕರಿಸಿದರು.

ಒಂದು ಜನತೆಯ ಕನಸು ನನಸಾಯಿತು.

***

## ಕ್ರೋಢೀಕರಣ

- ಭಾರತದ ರಾಷ್ಟ್ರೀಯ ಚಳುವಳಿಯ ಮೂರನೇ ಹಂತವನ್ನು (1919ರಿಂದ 1947ರ ವರೆಗೆ) ಗಾಂಧಿ ಯುಗ ಎಂದು ಕರೆಯುತ್ತಾರೆ.
- ಭಾರತದ ಸ್ವಾತಂತ್ರ್ಯ ಹೋರಾಟವನ್ನು ಜನಪರ ಚಳುವಳಿಯಾಗಿ ಬದಲಾಯಿಸುವುದರಲ್ಲಿ ಗಾಂಧಿಯವರು ಪ್ರಮುಖ ಪಾತ್ರ ವಹಿಸಿದರು.
- ಸತ್ಯ ಮತ್ತು ಅಹಿಂಸೆಯು ಗಾಂಧೀಜಿಯ ಹೋರಾಟದ ಮೂಲತತ್ವಗಳಾಗಿದ್ದುವು.
- ಅಸಹಕಾರ ಚಳುವಳಿ, ನಿಯಮೋಲ್ಲಂಘನ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿಗಳು ಗಾಂಧೀಜಿಯ ನೇತೃತ್ವದಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ನಡೆಸಿದ ಪ್ರಧಾನ ಜನಪರ ಚಳುವಳಿಗಳಾಗಿದ್ದುವು.
- ಅಸ್ಪೃಶ್ಯತೆಯ ನಿವಾರಣೆಯ ಅಂಗವಾಗಿ ಕೇರಳದಲ್ಲಿ ವೈಕ್ಕಂ ಸತ್ಯಾಗ್ರಹ ಮತ್ತು ಗುರುವಾಯೂರು ಸತ್ಯಾಗ್ರಹಗಳು ನಡೆದುವು.
- ಗಾಂಧಿಯವರ ಹೋರಾಟದ ಹಾದಿಯಿಂದ ಭಿನ್ನವಾದ ಅನೇಕ ಹೋರಾಟ ರೀತಿಗಳು ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಅಡಕವಾಗಿದ್ದುವು.
- ಸಶಸ್ತ್ರ ಹೋರಾಟದ ಮೂಲಕ ಭಾರತವು ಸ್ವಾತಂತ್ರ್ಯವನ್ನು ಗಳಿಸಬಹುದೆಂಬ ಗುರಿಯೊಂದಿಗೆ ಸುಭಾಷ್ಚಂದ್ರಬೋಸರು ಇಂಡಿಯನ್ ನ್ಯಾಶನಲ್ ಆರ್ಮಿಯ ನೇತೃತ್ವದಲ್ಲಿ ಚಟುವಟಿಕೆಗಳನ್ನು ಸಂಘಟಿಸಿದರು.
- 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು. ಬ್ರಿಟಿಷ್ ಇಂಡಿಯಾವು ಭಾರತ ಮತ್ತು ಪಾಕಿಸ್ತಾನಗಳೆಂಬ ಎರಡು ರಾಷ್ಟ್ರಗಳಾಗಿ ವಿಭಜಿಸಲ್ಪಟ್ಟಿತು.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- 1919ರಿಂದ 1947ರ ವರೆಗಿನ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟವನ್ನು ಗಾಂಧಿಯುಗವೆಂದು ಸಮರ್ಥಿಸುವುದು
- ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧಿಯವರ ಹೋರಾಟದ ರೀತಿಗಳ ವಿಶೇಷತೆಗಳನ್ನು ಮತ್ತು ಪ್ರಭಾವವನ್ನು ತಿಳಿಯುವುದು.
- ರಾಷ್ಟ್ರೀಯ ಚಳುವಳಿಯ ನೇತೃತ್ವವನ್ನು ಗಾಂಧೀಜಿ ಕೈಗೆತ್ತಿಕೊಂಡ ಬಳಿಕ ಸ್ವಾತಂತ್ರ್ಯ ಹೋರಾಟದಲ್ಲಿ ಜನಸಾಮಾನ್ಯರ ಸಹಭಾಗಿತ್ವವು ಹೆಚ್ಚಾಯಿತೆಂದು ತಿಳಿಯುವುದು.
- ಸ್ವಾತಂತ್ರ್ಯವನ್ನು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ ಎಂದು ತಿಳಿಯುವುದು

## ಮೌಲ್ಯ ನಿರ್ಣಯ ಮಾಡುವ

- 1857ರ ಪ್ರಥಮ ಸ್ವಾತಂತ್ರ್ಯ ಹೋರಾಟದಿಂದ 1942ರ ಕ್ವಿಟ್ ಇಂಡಿಯಾ ಚಳುವಳಿಯ ವರೆಗಿನ ಹೋರಾಟಗಳ ವಿಧಾನಗಳನ್ನು ಅವಲೋಕಿಸಿ ಟಿಪ್ಪಣಿ ತಯಾರಿಸಿರಿ.
- ಕೇರಳದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟಗಳ ಕುರಿತು ಟಿಪ್ಪಣಿ ತಯಾರಿಸಿರಿ.

- ಪಟ್ಟಿಯನ್ನು ಪೂರ್ತಿಗೊಳಿಸಿರಿ

| ಸ್ವಾತಂತ್ರ್ಯ ಹೋರಾಟದ ಪ್ರಧಾನ ಘಟನೆಗಳು | ಸ್ಥಳಗಳು/ಪ್ರದೇಶಗಳು | ರಾಜ್ಯಗಳು |
|---|---|---|
| ಜಲಿಯನ್‌ವಾಲಾಬಾಗ್ ಹತ್ಯಾಕಾಂಡ | ಅಮೃತಸರ | ........................ |
| ........................ | ಮಲಬಾರು | ಕೇರಳ |
| ........................ | ಚಂಪಾರಣ್ | ........................ |
| ಬಟ್ಟೆ ಗಿರಣಿಯ ಕಾರ್ಮಿಕರ ಮುಷ್ಕರ | ........................ | ಗುಜರಾತ್ |
| ಉಪ್ಪು ಸತ್ಯಾಗ್ರಹ | ಪಯ್ಯನ್ನೂರು | ........................ |

## ಮುಂದುವರಿದ ಚಟುವಟಿಕೆಗಳು

- ಗಾಂಧೀಜಿಗೆ ಸಂಬಂಧಿಸಿ ನಾವು ಆಚರಿಸುವ ಕೆಲವು ದಿನಾಂಕಗಳನ್ನು ಕೆಳಗೆ ಕೊಡಲಾಗಿದೆ.




ಈ ದಿನಾಂಕಗಳ ಪ್ರಾಧಾನ್ಯವನ್ನು ಕಂಡುಹಿಡಿಯಿರಿ.

ಪ್ರತಿಯೊಂದು ದಿನಾಚರಣೆಯ ಅಂಗವಾಗಿ ಶಾಲೆಯಲ್ಲಿ ನಡೆಸುವ ಚಟುವಟಿಕೆಗಳ ಪಟ್ಟಿ ತಯಾರಿಸಿರಿ.

- ಸ್ವಾತಂತ್ರ್ಯ ಹೋರಾಟಗಾರರ ಆಲ್ಬಂ ತಯಾರಿಸಿರಿ.
- ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸಿರಿ.
- ಗಾಂಧೀಜಿಯ ಭಾವಚಿತ್ರವಿರುವ ಅಂಚೆ ಚೀಟಿಗಳನ್ನು ಸಂಗ್ರಹಿಸಿ ಅಂಚೆ ಚೀಟಿ ಆಲ್ಬಂ ತಯಾರಿಸಿರಿ.
- ಗಾಂಧೀಜಿಯ ಕುರಿತು ಬರೆದಿರುವ ಕವಿತೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಹಾಡಿರಿ.
- ಗಾಂಧೀಜಿಯ ಮಾತುಗಳನ್ನು ಮತ್ತು ಇತರ ಮಹಾನ್ ವ್ಯಕ್ತಿಗಳು ಗಾಂಧೀಜಿಯ ಕುರಿತು ಹೇಳಿರುವ ಹೇಳಿಕೆಗಳನ್ನು ಸಂಗ್ರಹಿಸಿರಿ.
- ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿ ನಿಮ್ಮ ಪ್ರದೇಶಗಳಲ್ಲಿ ನಡೆದ ಘಟನೆಗಳ ಕುರಿತು ಹಿರಿಯರಲ್ಲಿ ಕೇಳಿ ಮಾಹಿತಿಗಳನ್ನು ಸಂಗ್ರಹಿಸಿರಿ.
- ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸಂದರ್ಶನ ನಡೆಸಿರಿ
- ಸ್ವಾತಂತ್ರ್ಯ ಹೋರಾಟದ ಪ್ರಧಾನ ಘಟನೆಗಳಿಗೆ ದೃಶ್ಯಾವಿಷ್ಕಾರವನ್ನು ಮಾಡಿರಿ.
- ಗಾಂಧಿ ಚಲನಚಿತ್ರಗಳ ಪ್ರದರ್ಶನವನ್ನೇರ್ಪಡಿಸಿರಿ.
- ಗಾಂಧೀಜಿಯ ಕೇರಳ ಸಂದರ್ಶನದ ಕುರಿತು ಮಾಹಿತಿ ಸಂಗ್ರಹಿಸಿರಿ.
- ಗಾಂಧೀಜಿಯ ನೇತೃತ್ವದಲ್ಲಿ ನಡೆದ ಪ್ರಧಾನ ರಾಷ್ಟ್ರೀಯ ಹೋರಾಟಗಳು–ವಿಚಾರಗೋಷ್ಠಿ ನಡೆಸಿರಿ.
- ಸ್ವಾತಂತ್ರ್ಯ ಹೋರಾಟದ ನೇತಾರರ ವಿಶೇಷತೆಗಳನ್ನು ಪಟ್ಟಿ ಮಾಡಿರಿ.

| ಸ್ವಾತಂತ್ರ್ಯ ಹೋರಾಟದ ನೇತಾರರು | ವಿಶೇಷತೆಗಳು |
|---|---|
|  | ಮಹಾತ್ಮ |
|  | |
|  | |
|  | ಭಾರತದ ಕೋಗಿಲೆ |
|  | |



# 10 ನಮ್ಮ ಸಂವಿಧಾನ

## ದೇಶದಲ್ಲಿ ವರ್ಣರಂಜಿತ ಗಣರಾಜ್ಯ ದಿನಾಚರಣೆ

*ನವದೆಹಲಿ: 65ನೇ ಗಣರಾಜ್ಯೋತ್ಸವವನ್ನು ದೇಶವು ವರ್ಣರಂಜಿತವಾಗಿ ಆಚರಿಸಿತು. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸೈನಿಕರಿಗೆ ನಮನಗಳನ್ನು ಸಲ್ಲಿಸುತ್ತಾ ಪ್ರಧಾನ ಮಂತ್ರಿಯವರು ಅಮರ್‌ಜವಾನ್ ಜ್ಯೋತಿಯಲ್ಲಿ ಪುಷ್ಪಚಕ್ರವನ್ನು ಸಮರ್ಪಿಸಿದರು. ವಿಶೇಷ ಅತಿಥಿಗಳೊಂದಿಗೆ ತಲುಪಿದ ರಾಷ್ಟ್ರಪತಿಯವರು ರಾಷ್ಟ್ರಧ್ವಜಾರೋಹಣ ಮಾಡಿದರು. ನಂತರ ಪ್ರಶಸ್ತಿ ಪ್ರಧಾನ ಮಾಡಿದುದಲ್ಲದೆ ಸಶಸ್ತ್ರ ಸೈನಿಕ ವಿಭಾಗಗಳ ವಂದನೆಯನ್ನು ಸ್ವೀಕರಿಸಿದರು. ರಾಜ್‌ಪಥದ ಮೂಲಕ ಸಾಗಿದ ಗಣರಾಜ್ಯೋತ್ಸವ ಮೆರವಣಿಗೆಯು ಭಾರತದ ಶಕ್ತಿ ಸಾಮರ್ಥ್ಯದ ಹಾಗೂ ಸಾಂಸ್ಕೃತಿಕ ವೈವಿಧ್ಯದ ಪ್ರತೀಕವಾಗಿತ್ತು. ಆಧುನಿಕ ಯುದ್ಧೋಪಕರಣಗಳು, ವಿವಿಧ ರಾಜ್ಯಗಳಿಂದ ಬಂದ ಸ್ತಬ್ಧ ಚಿತ್ರಗಳು, ವಿವಿಧ ಸೇನಾ ವಿಭಾಗಗಳ ಕಲಾ ಪ್ರದರ್ಶನಗಳು ಇತ್ಯಾದಿಗಳಿಂದ ಗಣರಾಜ್ಯ ದಿನಾಚರಣೆಯು ಸಂಪನ್ನವಾಗಿತ್ತು.*



*ಗಣರಾಜ್ಯ ದಿನಾಚರಣೆ–ವಿವಿಧ ದೃಶ್ಯಗಳು*

ಭಾರತದ ರಾಜಧಾನಿಯಾದ ನವದೆಹಲಿಯಲ್ಲಿ ನಡೆದ ಆಕರ್ಷಕ ಹಾಗೂ ವೈಭವದಿಂದ ಕೂಡಿದ ಗಣರಾಜ್ಯೋತ್ಸವದ ಚಿತ್ರಗಳನ್ನು ಮತ್ತು ವಾರ್ತೆಗಳನ್ನು ಗಮನಿಸಿದಿರಲ್ಲವೆ. ಯಾವ ದಿನವನ್ನು ನಾವು ಗಣರಾಜ್ಯ ದಿನವನ್ನಾಗಿ ಆಚರಿಸುತ್ತೇವೆ? ಗಣರಾಜ್ಯ ಎಂದರೇನು?



ಡಾ. ರಾಜೇಂದ್ರ ಪ್ರಸಾದ್ ಸಂವಿಧಾನಕ್ಕೆ ಸಹಿ ಹಾಕುವುದು

ಎಲ್ಲಾ ವರ್ಷವೂ ಜನವರಿ 26ನ್ನು ನಾವು ಗಣರಾಜ್ಯ ದಿನವನ್ನಾಗಿ ಆಚರಿಸುತ್ತೇವೆ. 1950 ಜನವರಿ 26ರಂದು ಭಾರತದ ಸಂವಿಧಾನವು ಔಪಚಾರಿಕವಾಗಿ ಜಾರಿಗೆ ಬಂತು. ಸಂವಿಧಾನವು ಜಾರಿಗೆ ಬರುವುದರೊಂದಿಗೆ ಭಾರತವು ಗಣರಾಜ್ಯವಾಯಿತು. ಚುನಾವಣೆಯ ಮೂಲಕ ಆಯ್ಕೆಯಾಗುವ ವ್ಯಕ್ತಿಯು ರಾಷ್ಟ್ರದ ಮುಖ್ಯಸ್ಥನಾಗುವ ವ್ಯವಸ್ಥೆಯೇ ಗಣರಾಜ್ಯವಾಗಿದೆ. ಭಾರತದ ಮುಖ್ಯಸ್ಥನಾದ ರಾಷ್ಟ್ರಪತಿಯು ಚುನಾವಣೆಯ ಮೂಲಕ ಆಯ್ಕೆಯಾದ ವ್ಯಕ್ತಿಯಾಗಿರಬೇಕೆಂದು ನಮ್ಮ ಸಂವಿಧಾನದಲ್ಲಿ ಹೇಳಲಾಗಿದೆ.

## ಸಂವಿಧಾನ (Constitution)

ಸಂವಿಧಾನ ಎಂದರೇನು? ಸಂವಿಧಾನವೆಂದರೆ ಒಂದು ದೇಶದ ಮೂಲಭೂತ ಆಶಯಗಳು ಹಾಗೂ ತತ್ವಗಳನ್ನು ಒಳಗೊಂಡಿರುವ ಅಧಿಕೃತ ದಾಖಲೆಯಾಗಿದೆ. ದೇಶದ ಆಡಳಿತವನ್ನು ನಡೆಸಲಿರುವ ನಿಯಮಗಳು ಸಂವಿಧಾನದಿಂದ ರೂಪುಗೊಳ್ಳುತ್ತವೆ. ಯಾವುದೇ ದೇಶದ ಆಡಳಿತವು ಸಂವಿಧಾನವೊಂದರ ಆಧಾರದಲ್ಲಿ ನಡೆಯುತ್ತದೆ.

**ಭಾರತದ ಸಂವಿಧಾನ ಅನುಕ್ರಮಣಿಕೆ**

- ಪ್ರಸ್ತಾವನೆ (Preamble)
- 395 ಪರಿಚ್ಛೇದಗಳು (Articles)
- 12 ಪರಿಶಿಷ್ಟಗಳು (Schedules)
- 22 ಭಾಗಗಳು (Parts)
- 98 ತಿದ್ದುಪಡಿಗಳು (2013 ಮೇ ತಿಂಗಳಿನ ವರೆಗೆ) (Amendments)

ಪ್ರಜಾಪ್ರಭುತ್ವ ದೇಶಗಳಲ್ಲಿ ಜನರ ಆಸಕ್ತಿಗನುಸಾರವಾಗಿ ಸಂವಿಧಾನವನ್ನು ರೂಪಿಸುವುದು ಹಾಗೂ ತಿದ್ದುಪಡಿಯನ್ನು ಮಾಡಲಾಗುತ್ತದೆ. ಪ್ರಜಾಪ್ರಭುತ್ವ ಪ್ರಕ್ರಿಯೆಯ ಮೂಲಕ ಭಾರತಕ್ಕೊಂದು ಸಂವಿಧಾನವನ್ನು ರೂಪಿಸಿದುದು ನಮಗೆ ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಸ್ವಾತಂತ್ರ್ಯ ಹೋರಾಟದೊಂದಿಗೆ ಭಾರತದಾದ್ಯಂತ ನಡೆದ ಚರ್ಚೆಗಳು ಹಾಗೂ ಸಂವಾದಗಳಿಂದ ಮೂಡಿಬಂದ ಆಶಯಗಳ ಮತ್ತು ಚಿಂತನೆಗಳ ಪ್ರತಿಫಲನವೇ ಭಾರತದ ಸಂವಿಧಾನ.

ಭಾರತದ ಸಂವಿಧಾನವನ್ನು ರೂಪಿಸಲು 2 ವರ್ಷ 11 ತಿಂಗಳುಗಳು ಹಾಗೂ 17 ದಿನಗಳು ಬೇಕಾದುವು.

## ಭಾರತದ ಸಂವಿಧಾನ ರಚನೆ

ಸಂವಿಧಾನ ರಚನಾ ಸಭೆಯನ್ನು ರೂಪಿಸುವ ಮೂಲಕ ಭಾರತದ ಸಂವಿಧಾನ ರಚನೆಯನ್ನು ಆರಂಭಿಸಲಾಯಿತು. 1946 ಡಿಸೆಂಬರ್ 9ರಂದು ಸಂವಿಧಾನ ರಚನೆಯ ಪ್ರಥಮ ಸಭೆ ಜರಗಿತು. ಡಾ. ಸಚ್ಚಿದಾನಂದ ಸಿನ್ಹರು ತಾತ್ಕಾಲಿಕ ಅಧ್ಯಕ್ಷರಾಗಿದ್ದರು. ಅನಂತರ ಡಾ. ರಾಜೇಂದ್ರ ಪ್ರಸಾದರು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು. ಅನೇಕ ಸಮಿತಿಗಳನ್ನು ರೂಪಿಸುವ ಮೂಲಕ ಸಂವಿಧಾನ ರಚನಾ ಸಭೆಯು ತನ್ನ ಕಾರ್ಯಚಟುವಟಿಕೆಗಳನ್ನು ಆರಂಭಿಸಿತು. ಸಂವಿಧಾನದ ಕರಡನ್ನು ತಯಾರಿಸಲು ರೂಪಿಸಿದ ಸಂವಿಧಾನ ಕರಡು ರೂಪ ತಯಾರಿ ಸಮಿತಿಯು ಇಂತಹ ಸಮಿತಿಗಳಲ್ಲಿ ಒಂದಾಗಿತ್ತು. ಡಾ. ಬಿ.ಆರ್. ಅಂಬೇಡ್ಕರ್ ಈ ಸಮಿತಿಯ ಅಧ್ಯಕ್ಷರಾಗಿದ್ದರು. ಆದುದರಿಂದ ಅವರನ್ನು ಭಾರತದ ಸಂವಿಧಾನದ ಶಿಲ್ಪಿ ಎಂದು ಕರೆಯುತ್ತಾರೆ.



ಡಾ. ಬಿ.ಆರ್. ಅಂಬೇಡ್ಕರ್

ಸಂವಿಧಾನ ರಚನಾ ಸಭೆ ಅಂಗೀಕರಿಸಿದ ವಿವಿಧ ಸಮಿತಿಗಳು ನೀಡಿದ ವರದಿಗಳ ಆಧಾರದಲ್ಲಿ ಡಾ. ಅಂಬೇಡ್ಕರರ ನೇತೃತ್ವದಲ್ಲಿದ್ದ ಸಮಿತಿಯು ಸಂವಿಧಾನದ ಕರಡು ರೂಪವನ್ನು ತಯಾರಿಸಿತು. ಸಮಗ್ರವಾದ ಚರ್ಚೆಗಳು ಹಾಗೂ ಸಂವಾದಗಳ ನಂತರ ಸಂವಿಧಾನ ರಚನಾ ಸಭೆಯು 1949 ನವೆಂಬರ್ 26ರಂದು ಸಂವಿಧಾನಕ್ಕೆ ಅಂಗೀಕಾರ ನೀಡಿತು. ನಾವು ಈ ದಿನವನ್ನು ಸಂವಿಧಾನ ದಿನವನ್ನಾಗಿ ಆಚರಿಸುತ್ತೇವೆ.



ಜವಹರಲಾಲ್ ನೆಹರೂರವರು ಸಂವಿಧಾನಕ್ಕೆ ಸಹಿ ಹಾಕುತ್ತಿರುವುದು

ಆದರೆ 1950 ಜನವರಿ 26ರಂದು ಸಂವಿಧಾನವು ಔದ್ಯೋಗಿಕವಾಗಿ ಜಾರಿಗೆ ಬಂತು. ಅಂದಿನಿಂದ ಭಾರತವು ಪರಮಾಧಿಕಾರವಿರುವ ಪ್ರಜಾಪ್ರಭುತ್ವ ಗಣರಾಜ್ಯವಾಯಿತು.

ಯಾವೆಲ್ಲ ಹಂತಗಳ ಮೂಲಕ ಭಾರತದ ಸಂವಿಧಾನವು ರೂಪುಗೊಂಡಿತು?

## ಸಂವಿಧಾನದ ಪ್ರಸ್ತಾವನೆ (Preamble)

ಇನ್ನು ಸಂವಿಧಾನದ ಪ್ರಸ್ತಾವನೆಯನ್ನು ಪರಿಶೀಲಿಸೋಣ.

### ಭಾರತದ ಸಂವಿಧಾನ
### ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1][ಸಾರ್ವಭೌಮ ಸಮಾಜವಾದೀ ಸರ್ವಧರ್ಮ, ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ] ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ,

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ ಸ್ವಾತಂತ್ರ್ಯ,

ಸ್ಥಾನಮಾನ ಹಾಗೂ ಅವಕಾಶದಲ್ಲೂ ಸಮಾನತೆ;

(ದೊರೆಯುವಂತೆ ಮಾಡಲು)ಅವರೆಡೆಯಲ್ಲಿ; ಮತ್ತು ವ್ಯಕ್ತಿ ಗೌರವವನ್ನು, [2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು; (ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;)

ನಮ್ಮ ಸಂವಿಧಾನ ಸಭೆಯಲ್ಲಿ 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

---

1. 1976 ನೇ ಇಸವಿಯ ಭಾರತ ಸಂವಿಧಾನ (ನವಲತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ 'ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ' ಎಂಬ ಪದಗಳ ಬದಲಾಗಿ (3.1.1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ 'ರಾಷ್ಟ್ರದ ಏಕತೆಯನ್ನೂ' ಎಂಬ ಪದಗಳ ಬದಲಾಗಿ (3.1.1977ರಿಂದ ಜಾರಿಗೆ ಬರುವಂತೆ)ಪ್ರತ್ಯಾಯೋಜಿಸಲಾಗಿದೆ.

3/194/2007-4A

ಪ್ರಸ್ತಾವನೆಯು ನಮ್ಮ ಸಂವಿಧಾನದ ಮೂಲಭೂತ ಆದರ್ಶಗಳನ್ನೂ ಮೌಲ್ಯಗಳನ್ನೂ ಪ್ರತಿಫಲಿಸುತ್ತದೆ.

ಸಂವಿಧಾನದ ಪ್ರಸ್ತಾವನೆಯನ್ನು ಕಾವ್ಯಾತ್ಮಕ ಶೈಲಿಯಲ್ಲಿ ಭಾರತದ ಪ್ರಥಮ ಪ್ರಧಾನಮಂತ್ರಿಯೂ ಪ್ರಸಿದ್ಧ ಇತಿಹಾಸಕಾರರೂ ಆದ ಜವಹರಲಾಲ್ ನೆಹರೂರವರು ಬರೆದಿರುವರು. ಪ್ರಸ್ತಾವನೆಯನ್ನು ಭಾರತದ ಸಂವಿಧಾನದ ಸತ್ವ ಹಾಗೂ ಕೀಲಿಕೈ ಎಂದು ಹೇಳಬಹುದು. ಸಂವಿಧಾನದ ಉದ್ದೇಶ ಹಾಗೂ ಗುರಿಗಳನ್ನು ಪ್ರಸ್ತಾವನೆಯಲ್ಲಿ ಸ್ಪಷ್ಟಪಡಿಸಲಾಗಿದೆ ಮತ್ತು ಘೋಷಿಸಲಾಗಿದೆ.

ಸಂವಿಧಾನದ ಪ್ರಸ್ತಾವನೆಯಲ್ಲಿ ಸೂಚಿಸಿರುವ ಮೂಲಭೂತ ಗುರಿಗಳನ್ನು ಸ್ಪಷ್ಟಪಡಿಸುವ ಡಯಗ್ರಾಂನ್ನು ನೋಡಿರಿ.




ಪ್ರಸ್ತಾವನೆಯಿಂದ ಸಂವಿಧಾನದ ಮೂಲಭೂತ ಗುರಿಗಳನ್ನು ಪರಿಚಯಿಸಿಕೊಂಡಿರಲ್ಲವೆ. ಇವುಗಳನ್ನು ತರಗತಿಯಲ್ಲಿ ವಿವರವಾಗಿ ಚರ್ಚಿಸಿರಿ. ಪೌರರಿಗೆ ರಾಷ್ಟ್ರವು ಖಚಿತಪಡಿಸಬೇಕಾದ ಗುರಿಗಳಾದ ನೀತಿ, ಸ್ವಾತಂತ್ರ್ಯ, ಸಮಾನತೆ, ಸಹೋದರತೆ ಮೊದಲಾದವುಗಳನ್ನು ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ.

ಭಾರತದ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ನಮ್ಮ ನಾಯಕರು ಮುಂದಿರಿಸಿದ ಯಾವೆಲ್ಲ ಆಶಯಗಳನ್ನು ಸಂವಿಧಾನದ ಪ್ರಸ್ತಾವನೆಯಲ್ಲಿ ಸೇರಿಸಲಾಗಿದೆ?

## ಭಾರತದ ಸಂವಿಧಾನದ ಪ್ರಧಾನ ವಿಶೇಷತೆಗಳು

ಭಾರತದ ಸಂವಿಧಾನದ ಪ್ರಧಾನ ವಿಶೇಷತೆಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ಗಮನಿಸಿರಿ.




ಪ್ರತಿಯೊಂದು ವಿಶೇಷತೆಯನ್ನು ವಿವರವಾಗಿ ಪರಿಶೀಲಿಸೋಣ.

## ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆ

ಭಾರತೀಯ ಸಂವಿಧಾನವು ನಿರ್ದೇಶಿಸಿದಂತೆ ಭಾರತದಲ್ಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಯಿದೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆ ಎಂದರೇನು? ದೇಶದ ಆಡಳಿತಕ್ಕಾಗಿ ಜನರು ತಮ್ಮ ಪ್ರತಿನಿಧಿಗಳನ್ನು ವಯಸ್ಕ ಮತದಾನದ ಮೂಲಕ ಆಯ್ಕೆ ಮಾಡುತ್ತಾರೆ. ಆಯ್ಕೆಯಾದವರು ಒಟ್ಟು ಸೇರಿ ಜನಪ್ರತಿನಿಧಿ ಸಭೆಯೊಂದನ್ನು ರೂಪಿಸಿ ಕಾರ್ಯನಿರ್ವಹಿಸುತ್ತಾರೆ. ಈ ಜನಪ್ರತಿನಿಧಿ ಸಭೆಯನ್ನು ಪಾರ್ಲಿಮೆಂಟು ಎಂದು ಕರೆಯುತ್ತಾರೆ. ಪಾರ್ಲಿಮೆಂಟು ಕಾನೂನನ್ನು ನಿರ್ಮಿಸುತ್ತದೆ ಹಾಗೂ ಆಡಳಿತದ ಮುಖ್ಯಸ್ಥರನ್ನು ಆಯ್ಕೆಮಾಡುತ್ತದೆ. ಹೀಗೆ ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆಯು ಜನರಿಂದ ಆಯ್ಕೆಯಾದ ಪ್ರತಿನಿಧಿ ಸಭೆಯ ಮೂಲಕ ಆಡಳಿತ ನಡೆಸುವ ವ್ಯವಸ್ಥೆಯಾಗಿದೆ.

ಭಾರತದಲ್ಲಿ ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆಯ ಪ್ರಕಾರ ಕೇಂದ್ರ ಮತ್ತು ರಾಜ್ಯಗಳಲ್ಲಿ ಚುನಾಯಿಸಲ್ಪಟ್ಟ ಪ್ರತಿನಿಧಿ ಸಭೆಗಳಿವೆ. ಕೇಂದ್ರದಲ್ಲಿ ಪಾರ್ಲಿಮೆಂಟು ಇರುವಂತೆ ರಾಜ್ಯಗಳಲ್ಲಿ ರಾಜ್ಯ ಶಾಸನಸಭೆಗಳಿವೆ. ಪ್ರಧಾನ ಮಂತ್ರಿ ಹಾಗೂ ಇತರ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಬಹುಮತವನ್ನು ಕಳೆದುಕೊಂಡರೆ, ಮುಖ್ಯಮಂತ್ರಿ ಹಾಗೂ ಇತರ ಮಂತ್ರಿಗಳು ರಾಜ್ಯ ಶಾಸನ ಸಭೆಯಲ್ಲಿ ಬಹುಮತವನ್ನು ಕಳೆದುಕೊಂಡರೆ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆಯು ಆಡಳಿತಗಾರರ ಮೇಲೆ ಜನತೆಗಿರುವ ಅಧಿಕಾರ ಮತ್ತು ನಿಯಂತ್ರಣವನ್ನು ಅವರು ಆಯ್ಕೆ ಮಾಡುವ ಜನಪ್ರತಿನಿಧಿಗಳ ಮೂಲಕ ಖಾತರಿಪಡಿಸುತ್ತದೆ. ಇದಕ್ಕಿಂತ ಭಿನ್ನವಾಗಿದೆ ಅಧ್ಯಕ್ಷೀಯ ವ್ಯವಸ್ಥೆಯಲ್ಲಿ ಜನರು ನೇರವಾಗಿ ಆಡಳಿತ ಮುಖ್ಯಸ್ಥನನ್ನು ಆಯ್ಕೆ ಮಾಡುತ್ತಾರೆ. ಉದಾ: ಸಂಯುಕ್ತ ಅಮೇರಿಕಾ, ಫ್ರಾನ್ಸ್ ಇತ್ಯಾದಿ.



ಪಾರ್ಲಿಮೆಂಟರಿ ಆಡಳಿತ ವ್ಯವಸ್ಥೆಯು ಅಧ್ಯಕ್ಷೀಯ ವ್ಯವಸ್ಥೆಗಿಂತ ಹೇಗೆ ಭಿನ್ನವಾಗಿದೆ?

## ಮೂಲಭೂತ ಹಕ್ಕುಗಳು (Fundamental Rights)


ಮೂಲಭೂತ ಹಕ್ಕುಗಳೆಂದರೆ ಪ್ರಜಾಪ್ರಭುತ್ವದ ಯಶಸ್ಸಿಗೆ ಹಾಗೂ ಪೌರರ ಸಂಪೂರ್ಣ ವಿಕಾಸಕ್ಕಾಗಿ ಭಾರತೀಯ ಸಂವಿಧಾನವು ಖಾತರಿಪಡಿಸಿದ ಹಕ್ಕುಗಳಾಗಿವೆ. ಪ್ರತಿಯೊಬ್ಬ ಪೌರನಿಗೂ ಹಕ್ಕುಗಳು ದೊರೆಯುವಂತೆ ಮಾಡುವುದು ಸರಕಾರದ ಜವಾಬ್ದಾರಿಯಾಗಿದೆ. ಮೂಲಭೂತ ಹಕ್ಕುಗಳು ಉಲ್ಲಂಘಿಸಲ್ಪಟ್ಟಾಗ ಪೌರರು ಹೈಕೋರ್ಟು ಅಥವಾ ಸುಪ್ರೀಂ ಕೋರ್ಟಿನ ಮೊರೆಹೋಗಬಹುದು. ಇಂತಹ ಸನ್ನಿವೇಶಗಳಲ್ಲಿ ಪೌರರ ಹಕ್ಕುಗಳ ಸಂರಕ್ಷಣೆಗಾಗಿ ಕೆಲವು ಆಜ್ಞೆಗಳನ್ನು ಹೊರಡಿಸುವ ಅಧಿಕಾರವನ್ನು ಸಂವಿಧಾನವು ನ್ಯಾಯಾಲಯಕ್ಕೆ ನೀಡಿದೆ.



**ಮೂಲಭೂತ ಹಕ್ಕುಗಳು**

- ಸಮಾನತೆಯ ಹಕ್ಕು
- ಸ್ವಾತಂತ್ರ್ಯದ ಹಕ್ಕು
- ಶೋಷಣೆಯಿಂದ ರಕ್ಷಣೆ ಪಡೆಯುವ ಹಕ್ಕು
- ಧಾರ್ಮಿಕ ಸ್ವಾತಂತ್ರ್ಯದ ಹಕ್ಕು
- ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು
- ಸಂವಿಧಾನಾತ್ಮಕ ಪರಿಹಾರೋಪಾಯಗಳನ್ನು ಪಡೆಯುವ ಹಕ್ಕು.

ಸಾರ್ವಜನಿಕ ವಿದ್ಯಾಲಯಗಳಲ್ಲಿ ಕಂಡು ಬರುವ ಈ ಕೆಳಗಿನ ಚಿತ್ರವನ್ನು ನೀವು ಗಮನಿಸಿರುವಿರಲ್ಲವೇ.




ಈ ಚಿತ್ರವು ಏನನ್ನು ಸೂಚಿಸುತ್ತದೆ. 6 ರಿಂದ 14 ವರ್ಷ ಪ್ರಾಯದ ವರೆಗಿನ ಎಲ್ಲ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿದೆ. ಪರಿಚ್ಛೇದ 21(a) ಯಲ್ಲಿರುವ ಜೀವಿಸುವ ಹಕ್ಕಿನ ಅಂಗವಾಗಿ ನಮ್ಮ ಸಂವಿಧಾನದಲ್ಲಿ ಇದನ್ನು ಸೇರಿಸಲಾಗಿದೆ. ಎಲ್ಲ ಮಕ್ಕಳಿಗೂ ಗುಣಮಟ್ಟದ ಪ್ರಾಥಮಿಕ ಶಿಕ್ಷಣವನ್ನು ಖಾತರಿಪಡಿಸಬೇಕಾದುದು ರಾಷ್ಟ್ರದ ಜವಾಬ್ದಾರಿಯಾಗಿದೆ. ಮೇಲೆ ಕೊಟ್ಟಿರುವುದು ಈ ಜವಾಬ್ದಾರಿಯನ್ನು ನೆರವೇರಿಸುವುದಕ್ಕಾಗಿರುವ ಸರಕಾರದ ಒಂದು ಯೋಜನೆಯಾಗಿದೆ.

ವಾಚನ ಸಾಮಗ್ರಿಗಳ ಸಹಾಯದಿಂದ ಮೂಲಭೂತ ಹಕ್ಕುಗಳ ಕುರಿತು ತರಗತಿಯಲ್ಲೊಂದು ವಿಚಾರಗೋಷ್ಠಿಯನ್ನು ಏರ್ಪಡಿಸಿರಿ.

## ಮೂಲಭೂತ ಕರ್ತವ್ಯಗಳು (Fundamental Duties)


ಭಾರತದ ಸಂವಿಧಾನದಲ್ಲಿ ಪೌರನ ಹಕ್ಕುಗಳನ್ನು ಖಾತರಿಪಡಿಸಿರುವಂತೆಯೇ ಮೂಲಭೂತ ಕರ್ತವ್ಯಗಳನ್ನು ಪ್ರತಿಪಾದಿಸಲಾಗಿದೆ.

ಪ್ರತಿಯೊಬ್ಬ ಪೌರನು ರಾಷ್ಟ್ರಕ್ಕಾಗಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಮೂಲಭೂತ ಕರ್ತವ್ಯಗಳೆಂದು ಸಂವಿಧಾನದಲ್ಲಿ ಸೇರಿಸಲಾಗಿದೆ. ಆಡಳಿತ ಸಂಸ್ಥೆಗಳನ್ನು ಮಾತ್ರವಲ್ಲ ಪ್ರಕೃತಿ ಹಾಗೂ ಒಡನಾಡಿಗಳನ್ನು ಪ್ರೀತಿಸಲು ಮತ್ತು ಭಾರತದ ಮಹತ್ತಾದ ಸಾಂಸ್ಕೃತಿಕ ಪರಂಪರೆಯನ್ನು ಜಾಗ್ರತೆಯಿಂದ ರಕ್ಷಿಸಲು ಮೂಲಭೂತ ಕರ್ತವ್ಯಗಳು ಪೌರನನ್ನು ಪ್ರೇರೇಪಿಸುತ್ತವೆ. ಪ್ರತಿಯೊಬ್ಬ ಪೌರನು ಹಕ್ಕುಗಳನ್ನು ಅನುಭವಿಸುವುದರೊಂದಿಗೆ ಕರ್ತವ್ಯಗಳನ್ನು ನಿರ್ವಹಿಸುವಾಗ ಸಮಾಜವು ಸುಗಮವಾಗಿ ಮುನ್ನಡೆಯುತ್ತದೆ. ಹಕ್ಕುಗಳು ಹಾಗೂ ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ಕರ್ತವ್ಯಗಳಿಲ್ಲದೆ ಹಕ್ಕುಗಳಿಗೆ ಅಸ್ತಿತ್ವವಿಲ್ಲ.

ಭಾರತದ ಸಂವಿಧಾನದಲ್ಲಿರುವ ಮೂಲಭೂತ ಕರ್ತವ್ಯಗಳನ್ನು ಅವುಗಳ ಪೂರ್ಣ ರೂಪದಲ್ಲಿ ನಿಮ್ಮ ವಿವಿಧ ಪಠ್ಯಪುಸ್ತಕಗಳಲ್ಲಿ ನೀಡಲಾಗಿದೆ. ಅವುಗಳನ್ನು ಕಂಡುಹಿಡಿದು ವಿಶ್ಲೇಷಿಸಿ ಟಿಪ್ಪಣಿ ತಯಾರಿಸಿರಿ.

## ನಿರ್ದೇಶಕ ತತ್ವಗಳು (Directive Principles of State Policy)

ಕೆಳಗೆ ಕೊಟ್ಟಿರುವ ಕೊಲಾಜ್‌ನ್ನು ಗಮನಿಸಿರಿ.




ಈ ಕೊಲಾಷನ್ನು ವಿಶ್ಲೇಷಿಸಿದಾಗ ಯಾವೆಲ್ಲ ನಿರ್ದೇಶಕ ತತ್ವಗಳನ್ನು ಕಂಡುಹಿಡಿಯಬಹುದು ಎಂದು ನೋಡೋಣ.

- ಸ್ತ್ರೀ-ಪುರುಷ ವ್ಯತ್ಯಾಸವಿಲ್ಲದೆ ಎಲ್ಲರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.
- ದೇಶದ ಅರಣ್ಯಗಳನ್ನು, ವನ್ಯಮೃಗಗಳನ್ನು ಸಂರಕ್ಷಿಸಿಕೊಂಡು ಪರಿಸರವನ್ನು ಸಂರಕ್ಷಿಸಬೇಕು.
- ರಾಷ್ಟ್ರೀಯ ಪ್ರಾಧಾನ್ಯ ಹಾಗೂ ಐತಿಹಾಸಿಕ ಮೌಲ್ಯವಿರುವ ಎಲ್ಲ ಸ್ಮಾರಕಗಳನ್ನು ರಕ್ಷಿಸಬೇಕು.
- ಆರ್ಥಿಕ, ಸಾಮಾಜಿಕ, ರಾಜಕೀಯ ನೀತಿಯಲ್ಲಿ ಆಧಾರಿತವಾದ ವ್ಯವಸ್ಥೆಯನ್ನು ಬೆಳೆಸಿಕೊಂಡು ಜನರ ಸುರಕ್ಷೆಯನ್ನು ಖಾತರಿಪಡಿಸಬೇಕು.

ಸಾಮಾಜಿಕ ನ್ಯಾಯವನ್ನು ಖಾತರಿಪಡಿಸಲು ಬೇಕಾದ ಒಂದಷ್ಟು ತತ್ವಗಳನ್ನು ಆಡಳಿತಾಧಿಕಾರಿಗಳಿಗೆ ಇರುವ ನಿರ್ದೇಶಗಳಾಗಿ ನಮ್ಮ ಸಂವಿಧಾನದಲ್ಲಿ ಸೇರಿಸಲಾಗಿದೆ. ಇವುಗಳನ್ನು ನಿರ್ದೇಶಕ ತತ್ವಗಳೆನ್ನುತ್ತೇವೆ. ಮೇಲೆ ಸೂಚಿಸಿರುವವುಗಳು ಸಂವಿಧಾನದಲ್ಲಿ ಒಳಪಟ್ಟಿರುವ ಕೆಲವು ನಿರ್ದೇಶಕ ತತ್ವಗಳಾಗಿವೆ.

ಜನರ ಕ್ಷೇಮ, ಅಭಿವೃದ್ಧಿ ಹಾಗೂ ರಾಷ್ಟ್ರದ ಪ್ರಗತಿಗಾಗಿ ನಿರ್ದೇಶಕ ತತ್ವಗಳನ್ನು ಅನುಸರಿಸಬೇಕು. ಕಾನೂನು ರಚನಾ ಪ್ರಕ್ರಿಯೆಯ ಮೂಲಕ ಸರಕಾರವು ನಿರ್ದೇಶಕ ತತ್ವಗಳನ್ನು ಜಾರಿಗೊಳಿಸಲು ಪ್ರಯತ್ನಿಸುತ್ತದೆ. ಮೂಲಭೂತ ಹಕ್ಕುಗಳು ನಿಷೇಧಿಸಲ್ಪಟ್ಟಾಗ ನ್ಯಾಯಾಲಯದ ಮೂಲಕ ಅವುಗಳನ್ನು ಗಳಿಸಬಹುದೆಂಬುದನ್ನು ಈ ಹಿಂದೆಯೇ ಸೂಚಿಸಲಾಗಿದೆ. ಆದರೆ ನಿರ್ದೇಶಕ ತತ್ವಗಳನ್ನು ಜಾರಿಗೊಳಿಸಲು ನ್ಯಾಯಾಲಯದ ಮೊರೆ ಹೋಗುವಂತಿಲ್ಲ. ಸರಕಾರದ ಹಾಗೂ ಜನರ ಇಚ್ಛಾಶಕ್ತಿಯ ಆಧಾರದಲ್ಲಿ ಇವುಗಳನ್ನು ಜಾರಿಗೊಳಿಸಲಾಗುತ್ತದೆ. ಮೂಲಭೂತ ಹಕ್ಕುಗಳು ವ್ಯಕ್ತಿಯೊಬ್ಬನ ಜೀವನಕ್ಕೆ ಅನಿವಾರ್ಯವಾಗಿದೆ. ನಿರ್ದೇಶಕ ತತ್ವಗಳು ಜೀವನವನ್ನು ಇನ್ನೂ ಹೆಚ್ಚು ಉತ್ತಮಗೊಳಿಸುವುದಕ್ಕಿರುವ ಅವಕಾಶಗಳನ್ನು ಒದಗಿಸುತ್ತವೆ.


ಭಾರತದ ಜನರ ಕ್ಷೇಮ ಹಾಗೂ ಅಭಿವೃದ್ಧಿಯನ್ನು ಖಾತರಿಪಡಿಸಲು ನಿರ್ದೇಶಕ ತತ್ವಗಳು ಎಷ್ಟರ ಮಟ್ಟಿಗೆ ಸೂಕ್ತವಾಗಿವೆ?

## ಕಾನೂನಿನ ಆಡಳಿತ

'ಕಾನೂನಿನ ಮುಂದೆ ಎಲ್ಲರೂ ಸಮಾನರು.'

ಇದರ ಅರ್ಥವೇನು. ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯರು, ಆಡಳಿತಾಧಿಕಾರಿಗಳು ಎಂಬ ಭೇದಭಾವವಿಲ್ಲ. ಯಾರೂ ಕಾನೂನಿಗೆ ಅತೀತರಲ್ಲ. ಎಲ್ಲರೂ ಕಾನೂನಿಗೆ ವಿಧೇಯರೆಂಬ ದೃಷ್ಟಿಕೋನವನ್ನು ಇದು ಹೊಂದಿದೆ. ಪ್ರಜಾಪ್ರಭುತ್ವ ಚಿಂತನೆಯ ಬೆಳವಣಿಗೆಯೊಂದಿಗೆ ಕಾನೂನಿನ ಆಡಳಿತವೆಂಬ ಆಶಯವು ಮೂಡಿಬಂತು.

ಕಾನೂನಿನ ಆಡಳಿತವು ಬ್ರಿಟೀಷ್ ಸಂವಿಧಾನದ ಮೂಲಭೂತ ವಿಶೇಷತೆಯಾಗಿ ಅದರ ಸುಧಾರಿತ ಹಾಗೂ ಆಧುನಿಕ ರೂಪದಲ್ಲಿ ವಿಕಾಸಗೊಂಡಿತು. ಆದುದರಿಂದಲೇ ಇಂದು ಎಲ್ಲ ಆಧುನಿಕ ಪ್ರಜಾಪ್ರಭುತ್ವ ದೇಶಗಳೂ ಈ ಕಾನೂನಿನ ಆಡಳಿತವನ್ನು ಆಧಾರವಾಗಿಸಿಕೊಂಡಿವೆ. ನಮ್ಮ ಸಂವಿಧಾನವು ಕಾನೂನು ಆಡಳಿತವನ್ನು ಸಂಪೂರ್ಣವಾಗಿ ಒಳಗೊಳ್ಳುವುದರೊಂದಿಗೆ ಜಾರಿಗೊಳಿಸಲು ಪ್ರಯತ್ನಿಸುತ್ತಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಕಾನೂನಿನ ಆಡಳಿತವು ನಮ್ಮ ಸಂವಿಧಾನ ಹಾಗೂ ದೇಶದ ಅಡಿಪಾಯವಾಗಿದೆ.

## ಸಂಯುಕ್ತ ವ್ಯವಸ್ಥೆ (Federal System)

### ಆಹಾರ ಸುರಕ್ಷೆ ಮಸೂದೆಯ ಅಂಗೀಕಾರ

ತಿರು: ಆಹಾರ ಸುರಕ್ಷೆ ಮಸೂದೆಗೆ ಪಾರ್ಲಿಮೆಂಟ್ ಅಂಗೀಕಾರ ನೀಡಿತು. ರಾಜ್ಯ ಸರಕಾರಗಳ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ಸಹಭಾಗಿತ್ವವನ್ನು ಖಾತರಿಪಡಿಸಲಿರುವ ರೂಪುರೇಖೆಯನ್ನು ತಯಾರಿಸಿದರು.

ವಾರ್ತೆಯನ್ನು ಗಮನಿಸಿದಿರಲ್ಲವೇ.

'ಆಹಾರ ಸುರಕ್ಷೆ ಮಸೂದೆ' ಯು 2013ರಲ್ಲಿ ಪಾರ್ಲಿಮೆಂಟಿನ ಅಂಗೀಕಾರ ಪಡೆದು ಕಾನೂನಾದ ಒಂದು ಪ್ರಧಾನ ಮಸೂದೆಯಾಗಿದೆ. ಭಾರತದಲ್ಲಿರುವ ಎಲ್ಲ ಜನ ವಿಭಾಗಗಳಿಗೂ ಆಹಾರ ಲಭ್ಯತೆಯನ್ನು ಖಾತರಿಪಡಿಸುವುದು ಇದರ ಉದ್ದೇಶವಾಗಿದೆ. ಕೇಂದ್ರ ಸರಕಾರದ ಈ ನಿಯಮವನ್ನು ರಾಜ್ಯಗಳ ಸಹಾಯದಿಂದ ಜಾರಿಗೊಳಿಸಲಾಗುತ್ತದೆ. ರಾಜ್ಯ ಸರಕಾರಗಳು ಇದನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿವೆ. ಈ ರೀತಿಯಲ್ಲಿ ಕೇಂದ್ರ, ರಾಜ್ಯ ಸರಕಾರಗಳು ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳು ಅಧಿಕಾರವನ್ನು ಹಂಚಿಕೊಂಡು ಆಡಳಿತ ನಡೆಸುವ ವಿಧಾನವು ಇಂದು ಭಾರತದಲ್ಲಿದೆ.

ಇದನ್ನು ಸಂಯುಕ್ತ ಆಡಳಿತ ವ್ಯವಸ್ಥೆ ಎನ್ನುತ್ತಾರೆ. ಉದಾ : ಅಮೇರಿಕಾ ಸಂಯುಕ್ತ ಪ್ರಾಂತ್ಯಗಳು, ಸ್ವಿಝರ್ಲೇಂಡ್, ಆಸ್ಟ್ರೇಲಿಯಾ. ಸಂಯುಕ್ತ ಆಡಳಿತ ವ್ಯವಸ್ಥೆಗಿಂತ ಭಿನ್ನವಾಗಿ ಎಲ್ಲ ಅಧಿಕಾರಗಳು ಕೇಂದ್ರ ಸರಕಾರದ ಕೈಯಲ್ಲಿ ನಿಕ್ಷಿಪ್ತವಾಗಿರುವ ಆಡಳಿತ ವ್ಯವಸ್ಥೆಯನ್ನು ಕೇಂದ್ರೀಕೃತ ಆಡಳಿತ ವ್ಯವಸ್ಥೆ (Unitary System) ಎಂದು ಕರೆಯುತ್ತಾರೆ. ಭಾರತವು ವಿಶಾಲ ಹಾಗೂ ಪ್ರಾದೇಶಿಕ ವೈವಿಧ್ಯಗಳಿಂದೊಡಗೂಡಿದ ದೇಶವಾಗಿದೆ. ಈ ವೈವಿಧ್ಯವನ್ನು ಒಳಪಡಿಸಿಕೊಂಡು ದೇಶವನ್ನು ಒಂದಾಗಿಸಲು ಫೆಡರಲ್ ವ್ಯವಸ್ಥೆಯು ಸಹಾಯ ಮಾಡುತ್ತದೆ.

## ಲಿಖಿತ ಸಂವಿಧಾನ (Written Constitution)

ನಮ್ಮ ಸಂವಿಧಾನವನ್ನು ಪುಸ್ತಕ ರೂಪದಲ್ಲಿ ಬರೆದು ತಯಾರಿಸಲಾಗಿದೆ. ಇದು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಲಿಖಿತ ಸಂವಿಧಾನವಾಗಿದೆ. ಜಗತ್ತಿನಲ್ಲಿ ಲಿಖಿತ ಹಾಗೂ ಅಲಿಖಿತ ಸಂವಿಧಾನಗಳು ಅಸ್ತಿತ್ವದಲ್ಲಿವೆ. ಅಲಿಖಿತ ಸಂವಿಧಾನವೆಂದರೆ ಪುಸ್ತಕ ರೂಪದಲ್ಲಿ ತಯಾರಿಸದ ಒಂದು ದಾಖಲೆಯೆಂದು ಅರ್ಥೈಸಬಹುದು. ಇಂತಹ ಸಂವಿಧಾನಗಳು ಸಂವಿಧಾನಾತ್ಮಕವಾದ ನಿಯಮ ಹಾಗೂ ನಿಬಂಧನೆಗಳು, ರಾಜಶಾಸನ, ನ್ಯಾಯಾಲಯದ ತೀರ್ಪು, ಆಚಾರ, ಅನುಷ್ಠಾನ ಎಂಬೀ ರೂಪಗಳಲ್ಲಿ ಹಲವೆಡೆಗಳಲ್ಲಿ ಅಸ್ತಿತ್ವದಲ್ಲಿರುತ್ತವೆ.

| ಲಿಖಿತ ಸಂವಿಧಾನ | ಅಲಿಖಿತ ಸಂವಿಧಾನ |
|---|---|
| • ಭಾರತ | • ಬ್ರಿಟನ್ |
| • ಅಮೇರಿಕ ಸಂಯುಕ್ತ ಸಂಸ್ಥಾನ | • ಇಸ್ರೇಲ್ |
| • ಆಸ್ಟ್ರೇಲಿಯಾ | • ಫ್ರಾನ್ಸ್ |
| • ಬ್ರೆಝಿಲ್ | • ನ್ಯೂಝಿಲೇಂಡ್ |
| • ದಕ್ಷಿಣ ಆಫ್ರಿಕಾ | |
| • | |
| • | |

ಪಟ್ಟಿಯನ್ನು ಗಮನಿಸಿರಿ.


ಜಾಗತಿಕ ಭೂಪಟದಲ್ಲಿ ಈ ದೇಶಗಳನ್ನು ಗುರುತಿಸಲು ಪ್ರಯತ್ನಿಸಿರಿ.

## ಸ್ವತಂತ್ರ ನ್ಯಾಯಾಂಗ ವ್ಯವಸ್ಥೆ (Independent Judiciary)

ಪೌರರ ಹಕ್ಕುಗಳನ್ನು ಸಂರಕ್ಷಿಸುವುದಕ್ಕಾಗಿ ಸ್ವತಂತ್ರವಾದ ಒಂದು ನ್ಯಾಯಾಂಗ ವ್ಯವಸ್ಥೆಯು ನಮ್ಮ ದೇಶದಲ್ಲಿದೆ. ಅಪರಾಧಿಗಳನ್ನು ಶಿಕ್ಷಿಸುವುದು ಹಾಗೂ ನಿರಪರಾಧಿಗಳನ್ನು ರಕ್ಷಿಸುವುದು ನ್ಯಾಯಾಂಗದ ಪ್ರಧಾನ ಜವಾಬ್ದಾರಿಯಾಗಿದೆ. ನ್ಯಾಯಾಂಗವು (Judiciary) ಆಡಳಿತದ ಇತರ ಎರಡು ವಿಭಾಗಗಳಾದ ಶಾಸಕಾಂಗ (Legislature) ಮತ್ತು ಕಾರ್ಯಾಂಗ (Executive) ಗಳ ಪ್ರಭಾವಕ್ಕೆ ಒಳಪಡದ ವಿಭಾಗವಾಗಿದೆ. ಇಂತಹ ಒಂದು ಸ್ವತಂತ್ರವಾದ ನ್ಯಾಯಾಂಗ ವಿಭಾಗವು ಭಾರತೀಯ ಸಂವಿಧಾನದ ವಿಶೇಷತೆಯಾಗಿದೆ.



ಭಾರತದ ನ್ಯಾಯಾಂಗದ ಅಧಿಕಾರ ಶ್ರೇಣಿಯನ್ನು ಕೆಳಗೆ ನೀಡಲಾಗಿದೆ. ಅದನ್ನು ಗಮನಿಸಿರಿ.




ಭಾರತದ ಸರ್ವೋಚ್ಚ ನ್ಯಾಯಾಲಯ ಯಾವುದು?
ರಾಜ್ಯದ ಸರ್ವೋಚ್ಚ ನ್ಯಾಯಾಲಯ ಯಾವುದು?
ಸಿವಿಲ್ ದಾವೆಗಳನ್ನು ವಿಚಾರಣೆ ನಡೆಸುವ ಅತ್ಯಂತ ಕೆಳಗಿನ ನ್ಯಾಯಾಲಯ ಯಾವುದು?
ಕ್ರಿಮಿನಲ್ ದಾವೆಗಳಿಗೆ ಸಂಬಂಧಿಸಿದ ಅತ್ಯಂತ ಕೆಳಗಿನ ನ್ಯಾಯಾಲಯ ಯಾವುದು?

ನ್ಯಾಯಾಲಯಗಳ ಕುರಿತು ಇನ್ನೂ ಹೆಚ್ಚಿನ ಮಾಹಿತಿಗಳನ್ನು ತಿಳಿದುಕೊಳ್ಳಲು ನಿಮ್ಮ ಊರಿನಲ್ಲಿರುವ ವಕೀಲರೊಬ್ಬರೊಂದಿಗೆ ಸಂದರ್ಶನವನ್ನು ಏರ್ಪಡಿಸಿರಿ. ಸಂದರ್ಶನಕ್ಕೆ ಅಗತ್ಯವಾದ ಪ್ರಶ್ನಾವಳಿಗಳನ್ನು ಮುಂಚಿತವಾಗಿ ತಯಾರಿಸಲು ಗಮನಿಸುವಿರಲ್ಲವೇ.

## ಸಂವಿಧಾನದ ತಿದ್ದುಪಡಿ (Constitutional Amendment)

**ಶಿಕ್ಷಣದ ಹಕ್ಕು**

ಆರರಿಂದ ಹದಿನಾಲ್ಕು ವರ್ಷ ಪ್ರಾಯದ ವರೆಗಿನ ಎಲ್ಲ ಮಕ್ಕಳಿಗೂ ದೇಶವು ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ಒದಗಿಸಬೇಕೆಂಬುದು ಮೂಲಭೂತ ಹಕ್ಕುಗಳ ಭಾಗವಾಯಿತು.

ಪತ್ರಿಕಾ ವಾರ್ತೆಯನ್ನು ಗಮನಿಸಿದಿರಲ್ಲವೇ? ಭಾರತದ ಸಂವಿಧಾನವು ಜಾರಿಗೆ ಬಂದಾಗ ಶಿಕ್ಷಣದ ಹಕ್ಕು ಮೂಲಭೂತ ಹಕ್ಕು ಆಗಿತ್ತೇ? ಇದು ಮೊದಲು ಮೂಲಭೂತ ಹಕ್ಕುಗಳಲ್ಲಿ ಸೇರಿರದೆ ಅನಂತರ ಆ ವಿಭಾಗಕ್ಕೆ ಸೇರಿಸಲ್ಪಟ್ಟಿತೆಂಬುದನ್ನು ಈ ಮೊದಲು ನಾವು ಕಲಿತೆವಲ್ಲವೇ? ಹಾಗಿದ್ದರೆ ಶಿಕ್ಷಣಕ್ಕೆ ಸಂಬಂಧಿಸಿದ ಪರಾಮರ್ಶೆಯು ಸಂವಿಧಾನದ ಯಾವ ವಿಭಾಗದಲ್ಲಿತ್ತು? 2002ರಲ್ಲಿ ಪಾರ್ಲಿಮೆಂಟ್‌ನಲ್ಲಿ ಮಂಡಿಸಿದ ಸಂವಿಧಾನ ತಿದ್ದುಪಡಿಯ ಮೂಲಕ ಶಿಕ್ಷಣದ ಹಕ್ಕು ಮೂಲಭೂತ ಹಕ್ಕುಗಳಲ್ಲಿ ಸೇರಿಕೊಂಡಿತು.

ಸಂವಿಧಾನದಲ್ಲಿ ಒಳಪಡಿಸುವುದು ಹಾಗೂ ಸಂವಿಧಾನದಿಂದ ಹೊರತುಪಡಿಸುವ ಪ್ರಕ್ರಿಯೆಗಳು ನಡೆಯುತ್ತಿರುತ್ತವೆ. ಇದನ್ನು ಸಂವಿಧಾನದ ತಿದ್ದುಪಡಿಯೆಂದು ಕರೆಯುತ್ತಾರೆ. ಕಾಲಕ್ಕನುಸಾರವಾಗಿ ಸಂವಿಧಾನದಲ್ಲಿ ಬದಲಾವಣೆಯನ್ನು ಮಾಡುವ ಅಧಿಕಾರವು ಪಾರ್ಲಿಮೆಂಟಿಗಿದೆ. ಆದರೆ ಸಂವಿಧಾನದ ಮೂಲಭೂತ ತತ್ವಗಳನ್ನು ಎಂದಿಗೂ ಬದಲಾಯಿಸಲು ಸಾಧ್ಯವಿಲ್ಲ. ಸೊತ್ತಿನ ಹಕ್ಕು ಸಂವಿಧಾನ ರಚನೆಯ ಸಂದರ್ಭದಲ್ಲಿ ಮೂಲಭೂತ ಹಕ್ಕುಗಳಲ್ಲಿ ಒಳಪಟ್ಟಿತ್ತು. ಆದರೆ ಅನಂತರ ಸಂವಿಧಾನದ 44ನೇ ತಿದ್ದುಪಡಿಯ ಮೂಲಕ ಅದನ್ನು ಮೂಲಭೂತ ಹಕ್ಕುಗಳಿಂದ ಹೊರತುಪಡಿಸಲಾಯಿತು.



ಕಾಲಕ್ಕನುಸಾರವಾಗಿ ಬದಲಾವಣೆಗಳನ್ನು ಉಂಟುಮಾಡಲು ಸಂವಿಧಾನ ತಿದ್ದುಪಡಿಯು ಎಷ್ಟರ ಮಟ್ಟಿಗೆ ಸೂಕ್ತವಾಗಿದೆ?

ಭಾರತದ ಎಲ್ಲಾ ಪೌರರೂ ಸಂಘಟನೆಗಳೂ ಸಂಸ್ಥೆಗಳೂ ಸಂವಿಧಾನಕ್ಕೆ ಅನುಸಾರವಾಗಿ ಕಾರ್ಯನಿರ್ವಹಿಸಬೇಕು. ಸಂವಿಧಾನಬದ್ಧವಾಗಿ ಜೀವಿಸಬೇಕಾದುದು ಹಾಗೂ ಸಂವಿಧಾನವನ್ನು ಸಂರಕ್ಷಿಸಬೇಕಾದುದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯವಾಗಿದೆ.

## ಕ್ರೋಢೀಕರಣ

- ಸಂವಿಧಾನವೆಂದರೆ ಒಂದು ದೇಶದ ಆಡಳಿತಕ್ಕೆ ಸಂಬಂಧಿಸಿದ ಮೂಲಭೂತ ಆಶಯಗಳು ಹಾಗೂ ತತ್ವಗಳನ್ನು ಒಳಗೊಂಡಿರುವ ಸಂಹಿತೆಯಾಗಿದೆ.
- ನಮ್ಮ ಸಂವಿಧಾನವು ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಲಿಖಿತ ಸಂವಿಧಾನವಾಗಿದೆ.
- ಜಗತ್ತಿನಲ್ಲಿ ಲಿಖಿತ (written) ಹಾಗೂ ಅಲಿಖಿತ (unwritten) ಸಂವಿಧಾನ (Constitutions)ಗಳಿವೆ.
- ಸಂವಿಧಾನ ರಚನಾ ಸಭೆಯು (Constituent Assembly)ನಿರಂತರವಾದೊಂದು ಪ್ರಕ್ರಿಯೆಯ ಮೂಲಕ ಭಾರತದ ಸಂವಿಧಾನಕ್ಕೆ ರೂಪು ನೀಡಿತು.
- ಭಾರತೀಯ ಸಂಸ್ಕೃತಿಯ ಹಾಗೂ ಸ್ವಾತಂತ್ರ್ಯ ಚಳುವಳಿಯ ಉದ್ದೇಶಗಳನ್ನೂ ಮೌಲ್ಯಗಳನ್ನೂ ಸಂವಿಧಾನವು ಒಳಗೊಂಡಿದೆ.
- ಪೌರರ ಮೂಲಭೂತ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ.
- ಸಂವಿಧಾನದಲ್ಲಿ ಹೊಸದನ್ನು ಸೇರಿಸುವುದು ಅಥವಾ ಸಂವಿಧಾನದಿಂದ ಬಿಟ್ಟುಬಿಡುವುದನ್ನು ತಿದ್ದುಪಡಿಯೆಂದು ಕರೆಯುತ್ತಾರೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಸಂವಿಧಾನವೆಂಬ ಆಶಯವನ್ನು ಗುರುತಿಸುತ್ತಾರೆ.
- ಭಾರತೀಯ ಸಂವಿಧಾನದ ರಚನೆ, ಹಂತ ಇತ್ಯಾದಿಗಳನ್ನು ತಿಳಿಯುತ್ತಾರೆ.
- ಪ್ರಸ್ತಾವನೆ ಮತ್ತು ಅದರಂತೆ ಇರುವ ಮೂಲಭೂತ ಉದ್ದೇಶಗಳನ್ನು ವಿಶ್ಲೇಷಿಸುತ್ತಾರೆ.
- ನಮ್ಮ ಸಂವಿಧಾನದ ಮೂಲಭೂತ ವಿಶೇಷತೆಗಳನ್ನು ವಿಶ್ಲೇಷಿಸುತ್ತಾರೆ.

## ಮೌಲ್ಯನಿರ್ಣಯ ಮಾಡುವ

- 'ಪ್ರಸ್ತಾವನೆಯು ಸಂವಿಧಾನದ ಕೀಲಿಕೈಯಾಗಿದೆ.' ಈ ಹೇಳಿಕೆಯ ಪ್ರಾಧಾನ್ಯವನ್ನು ಸ್ಪಷ್ಟಪಡಿಸಿರಿ.
- ಕೆಳಗೆ ನೀಡಿರುವ ಹೇಳಿಕೆಗಳನ್ನು ಓದಿರಿ.

  ಕೊಟ್ಟಿರುವ ಆಯ್ಕೆಗಳಿಂದ ಸರಿಯಾದುದನ್ನು ಕಂಡುಹಿಡಿಯಿರಿ.

  A. ಸಂವಿಧಾನವು ಭಾರತದ ಪರಮೋನ್ನತ ಕಾನೂನು ಆಗಿದೆ.

  B. ಸಂವಿಧಾನಕ್ಕೆ ವಿರುದ್ಧವಾಗಿ ಹೊಸ ಕಾನೂನುಗಳನ್ನು ರೂಪಿಸಲು ಸಾಧ್ಯವಿಲ್ಲ.

I. B ಮಾತ್ರ ಸರಿಯಾಗಿದೆ.

II. A ಮಾತ್ರ ಸರಿಯಾಗಿದೆ.

III. A ಹಾಗೂ B ಸರಿಯಲ್ಲ

IV. A ಹಾಗೂ B ಸರಿಯಾಗಿದೆ.

- ಭಾರತದ ಸಂವಿಧಾನ ರಚನಾ ಪ್ರಕ್ರಿಯೆಯನ್ನು ಒಂದು ಕಾಲರೇಖೆಯ (Timeline) ರೂಪದಲ್ಲಿ ಮಂಡಿಸಿರಿ.
- ಗಣರಾಜ್ಯ ಎಂಬ ಆಶಯವು ಯಾವುದನ್ನು ಸೂಚಿಸುತ್ತದೆ ಎಂಬುವುದನ್ನು ಕಂಡುಹಿಡಿದು ಸ್ನೇಹಿತರ ಉತ್ತರದೊಂದಿಗೆ ಹೋಲಿಸಿ ಪರಿಶೋಧಿಸಿರಿ.
- ಸಮಾಜದ ಅವಶ್ಯಕತೆಗಳಿಗನುಸಾರವಾಗಿ ಸಂವಿಧಾನದಲ್ಲಿ ಬದಲಾವಣೆಯನ್ನು ಉಂಟುಮಾಡುವುದು ಉತ್ತಮವಾದುದಾಗಿದೆ. ನಿಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರಿ.
- ನಮ್ಮ ನ್ಯಾಯಾಂಗ ವ್ಯವಸ್ಥೆಯ ರಚನೆಯನ್ನು ಸ್ಪಷ್ಟಪಡಿಸುವ ಟಿಪ್ಪಣಿಯೊಂದನ್ನು ತಯಾರಿಸಿರಿ.
- ವ್ಯಕ್ತಿ ಹಾಗೂ ಅವರ ಕಾರ್ಯಗಳು ಪರಸ್ಪರ ಸರಿ ಹೊಂದುವಂತೆ ಜೋಡಿಸಿ ಬರೆಯಿರಿ

| | | |
|---|---|---|
| A. ಡಾ. ಬಿ.ಆರ್. ಅಂಬೇಡ್ಕರ್ | - | ಸಂವಿಧಾನ ರಚನಾ ಸಭೆಯ ಅಧ್ಯಕ್ಷ |
| B. ಡಾ. ರಾಜೇಂದ್ರಪ್ರಸಾದ್ | - | ಪ್ರಸ್ತಾವನೆಯನ್ನು ಬರೆದರು |
| C. ಸಚ್ಚಿದಾನಂದ ಸಿನ್ಹ | - | ಕರಡು ಸಮಿತಿಯ ಅಧ್ಯಕ್ಷ |
| D. ಜವಹರಲಾಲ್ ನೆಹರು | - | ಸಂವಿಧಾನ ರಚನಾ ಸಭೆಯ ತಾತ್ಕಾಲಿಕ ಅಧ್ಯಕ್ಷ |



## ಮುಂದುವರಿದ ಚಟುವಟಿಕೆಗಳು

- ಸಂವಿಧಾನ ರಚನಾ ಪ್ರಕ್ರಿಯೆಯಲ್ಲಿ ಭಾಗವಹಿಸಿದವರು, ಪ್ರಧಾನ ಹಂತಗಳು ಇತ್ಯಾದಿಗಳಿಗೆ ಸಂಬಂಧಿಸಿದ ಚಿತ್ರಗಳನ್ನೂ ವಾರ್ತೆಗಳನ್ನೂ ಸಂಗ್ರಹಿಸಿ ಸಂಚಿಕೆಯೊಂದನ್ನು ತಯಾರಿಸಿರಿ.
- ಶಿಕ್ಷಣ ಹಕ್ಕು ನಿಯಮ, ಆಹಾರ ಸುರಕ್ಷೆ ಕಾನೂನು ಇವುಗಳ ಕುರಿತಾದ ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸಿ ಆಲ್ಬಂನ್ನು ತಯಾರಿಸಿರಿ.
- ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ನಡೆಯುವ ಪ್ರಧಾನ ಕಾರ್ಯಕ್ರಮಗಳು ಹಾಗೂ ಅವುಗಳ ಚಿತ್ರಗಳನ್ನು ಸಂಗ್ರಹಿಸಿ ಭಿತ್ತಿಪತ್ರಿಕೆ ತಯಾರಿಸಿರಿ.
- ಭಾರತೀಯ ಸಂವಿಧಾನ ರೂಪೀಕರಣ, ಪ್ರಸ್ತಾವನೆಯಲ್ಲಿ ಹೇಳಿರುವ ಮೂಲಭೂತ ಉದ್ದೇಶಗಳು ಹಾಗೂ ಸಂವಿಧಾನದ ವಿಶೇಷತೆಗಳನ್ನು ಒಳಪಡಿಸಿಕೊಂಡು ರಸಪ್ರಶ್ನೆ ಸ್ಪರ್ಧೆಗಿರುವ ಪ್ರಶ್ನಾವಳಿಯನ್ನು ತಯಾರಿಸಿರಿ.



# 11 ವ್ಯಕ್ತಿ ಮತ್ತು ಸಮಾಜ

SATURDAY
12
JANUARY

ಎಂದಿನಂತೆಯೇ ಇಂದೂ ಕೂಡಾ ಅಮ್ಮ ನನ್ನನ್ನು ಕರೆದು ಎಬ್ಬಿಸಿದರು. ಹಲ್ಲು ಉಜ್ಜಿ ಮುಖ ತೊಳೆದು ನಾನು ಮತ್ತು ಅಣ್ಣ ಓದಲು ಕುಳಿತೆವು.

ಅಷ್ಟರಲ್ಲಿ ಹಾಲಿನವನು ಬಂದನು. ಅಮ್ಮ ನಮಗೆ ಚಾ ಕೊಟ್ಟರು. ಪೇಪರಿನವನು ಬಂದನು. ನಾನು ತಂದೆಯ ಹತ್ತಿರ ಕುಳಿತು ಪೇಪರು ಓದಿದೆನು.ನಾನು ಶಾಲೆಗೆ ಹೊರಡಲು ತಯಾರಾದಾಗ ಅಜ್ಜಿ ಉಪಹಾರವನ್ನು ತಂದಿರಿಸಿದರು. ನಾವೆಲ್ಲರೂ ಒಟ್ಟಿಗೆ ಕುಳಿತು ಸೇವಿಸಿದೆವು. ಅಷ್ಟರಲ್ಲಿ ರಮಾ ಮತ್ತು ಆಯಿಷ ಅಲ್ಲಿಗೆ ತಲುಪಿದರು. ಅವರು ನನ್ನ ಗೆಳತಿಯರು. ನಾನು ಚೀಲವನ್ನು ತೆಗೆದುಕೊಂಡು ಹೊರಗೆ ಓಡಿದೆನು.

ಶಾಲೆಗೆ ಹೋಗುವಾಗ ವೇಗದಿಂದ ಬರುವ ವಾಹನಗಳಿಗೆ ದಾರಿ ನೀಡುವುದಕ್ಕಾಗಿ ರಸ್ತೆಯ ಬದಿಗೆ ಸರಿದಾಗ ಕಲ್ಲು ತಾಗಿ ನಾನು ಕೆಳಗೆ ಬಿದ್ದೆನು.

ಆಯಿಷ ಬೊಬ್ಬಿಟ್ಟಳು. ಅನೇಕರು ಓಡಿ ಬಂದರು. ಅವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಔಷಧಿ ಹಚ್ಚಿ ಪ್ಲಾಸ್ಟರ್ ಅಂಟಿಸಿದರು. ನಾನು ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಂಡ ನಂತರ ಶಾಲೆಗೆ ಹೋದೆನು.

ತರಗತಿಗೆ ತಲುಪಿದಾಗ ಗೆಳೆಯರು ಸುತ್ತಲೂ ನಿಂತು ಒಂದೊಂದನ್ನು ಕೇಳಿದರು. ರಮಾಳು ಅವರಿಗೆಲ್ಲ ಉತ್ತರಿಸಿದಳು.


ಗಂಟೆ ಬಡಿಯಿತು. ಮೊದಲ ಪೀರಿಯಡ್ ಇಂಗ್ಲಿಷ್ ಆಗಿತ್ತು. ಪಾಠ ಮಾಡಿದ್ದು ಶಿಲ್ಪ ಟೀಚರು. ಟೀಚರು ಎಷ್ಟು ಸುಂದರವಾಗಿ ಪಾಠ ಮಾಡುತ್ತಾರೆ! 'ನಾನು ನನ್ನ ಮಂಡಿಯಲ್ಲಾದ ಗಾಯವನ್ನೂ ನೋವನ್ನೂ ಮರೆತೆನು.'

ಇದು ಆರನೇ ತರಗತಿಯ ಮೀನಳು ಬರೆದ ಡೈರಿ. ಒಂದು ದಿನ ಬೆಳಗ್ಗೆಯೇ ಒಂದೊಂದು ಕೆಲಸಕ್ಕಾಗಿ ಎಷ್ಟು ಜನರನ್ನು ಮೀನ ಆಶ್ರಯಿಸಿದಳು ಎಂಬುದನ್ನು ನೋಡಿದಿರಲ್ಲವೇ. ಒಂದು ದಿನದಲ್ಲಿ ನೀವು ಯಾರೊಂದಿಗೆಲ್ಲಾ ವ್ಯವಹರಿಸುತ್ತೀರಿ?

- ಅಮ್ಮ
- 
- 

ಅಮ್ಮ, ಅಪ್ಪ, ಸಹೋದರ ಸಹೋದರಿ, ನೆರೆಹೊರೆಯವರ, ಅಧ್ಯಾಪಕರ, ಗೆಳೆಯರೊಂದಿಗಿನ ಸಂಬಂಧಗಳು ನಿಮ್ಮ ಜೀವನದಲ್ಲಿ ಎಷ್ಟೊಂದು ಅಮೂಲ್ಯವಾದುದು! ಹೀಗೆ ಎಷ್ಟೋ ಜನರು ನಮ್ಮ ಜೀವನಕ್ಕೆ ಸಂಬಂಧಿಸಿದವರಾಗಿದ್ದಾರೆ.

## ಒಗ್ಗಟ್ಟಿನ ನೆರಳು



ಚಿತ್ರವನ್ನು ವೀಕ್ಷಿಸಿ ಸಾಮಾಜಿಕ ಸಂಬಂಧಗಳು ರೂಪುಗೊಳ್ಳುವ ವಿವಿಧ ಸನ್ನಿವೇಶಗಳನ್ನು ಕಂಡುಹಿಡಿಯಿರಿ.

- ಗೆಳೆಯರೊಂದಿಗೆ ಆಟವಾಡುವುದು.
- 
- 
- 

- 
- 
- 
- 

ಒಬ್ಬ ವ್ಯಕ್ತಿಯ ಜನನದಿಂದಲೇ ಇತರರೊಂದಿಗಿನ ಆಶ್ರಯವು ಆರಂಭವಾಗುತ್ತದೆ. ಕುಟುಂಬ, ನೆರೆಕರೆಯವರು, ಗೆಳೆಯರು, ಅಧ್ಯಾಪಕರು ನಮ್ಮ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಭಾಷೆ, ವೇಷ, ಸಂಸ್ಕೃತಿ, ನಡತೆಯ ವಿಧಾನಗಳನ್ನು ನಾವು ಸಮಾಜದಿಂದ ಮನೋಗತ ಮಾಡಿಕೊಳ್ಳುತ್ತೇವೆ. ಜೀವನದ ಪ್ರತಿಯೊಂದು ಹಂತದಲ್ಲಿಯೂ ವ್ಯಕ್ತಿಯು ಹಲವರನ್ನು ಸಂಪರ್ಕಿಸುತ್ತಾನೆ. ಈ ರೀತಿಯ ವಿವಿಧ ಸಂಬಂಧಗಳ ವಿಶಾಲವಾದ ಶೃಂಖಲೆಯೇ ಸಮಾಜವಾಗಿದೆ. ವ್ಯಕ್ತಿಯ ಅಸ್ತಿತ್ವ ಹಾಗೂ ಬೆಳವಣಿಗೆಯ ಅಡಿಪಾಯವೇ ಸಮಾಜ.

ಸಮಾಜವೆಂದರೆ ವ್ಯಕ್ತಿಗಳು ಒಳಗೊಂಡಿರುವ ದೊಡ್ಡ ಸಂಘವಾಗಿದೆ

– ಗ್ರೀನ್



### ಏಕಾಂಗಿಯಾದರೆ......

ಮಾನವ ಸಂಪರ್ಕವಿಲ್ಲದೆ ಒಂದು ಮಗು ಜೀವಿಸುವುದನ್ನು ಊಹಿಸಲು ನಿಮಗೆ ಸಾಧ್ಯವೇ? ಆ ರೀತಿಯಲ್ಲಾದರೆ ಆ ಮಗುವಿನ ಸ್ಥಿತಿ ಏನಾಗಬಹುದು?

ವಿಕ್ಟರನ ಕಥೆಯನ್ನು ಓದಿರಿ...





ವಿಕ್ಟರ್

ಫ್ರಾನ್ಸಿನ ಎವಿರೋನ್ (Aveyron) ಗ್ರಾಮಕ್ಕೆ ಹೊಂದಿಕೊಂಡಿರುವ ಕಾಡಿಗೆ ಬೇಟೆಯಾಡಲು ಹೋದ ಕೆಲವರು ತೋಳಗಳೊಂದಿಗೆ ಅಂದಿನವರೆಗೆ ಕಾಣದಿದ್ದಂತಹ 'ಜೀವಿ'ಯೊಂದನ್ನು ನೋಡಿದರು. ಅವರಿಗೆ ಕೌತುಕ ಹಾಗೂ ಹಂಬಲವುಂಟಾಯಿತು. ಅವರು ಗುಂಡು ಹೊಡೆದು ತೋಳಗಳನ್ನು ಓಡಿಸಿದರು. ಗುಂಪಿನಿಂದ ಬೇರ್ಪಟ್ಟ ಆ ಜೀವಿಯನ್ನು ಹಿಂಬಾಲಿಸಿ ಸೆರೆಹಿಡಿದರು. ಆ ಜೀವಿಯು ಮನುಷ್ಯರೂಪವನ್ನು ಹೊಂದಿತ್ತು. ಆದರೆ ಕೈಗಳನ್ನೂ ಕಾಲುಗಳನ್ನೂ ಉಪಯೋಗಿಸಿ ಆ ಜೀವಿಯು ವೇಗವಾಗಿ ಓಡುತ್ತಿತ್ತು. ಗುರುಗುಟ್ಟಲು, ಕೈಯಿಂದ ಅಗೆಯಲು ಪ್ರಯತ್ನಿಸಿತಲ್ಲದೆ ಕಚ್ಚಿ ಹರಿಯಲೂ ಬರುತ್ತಿದ್ದ ಆ ಜೀವಿಯನ್ನು ಅವರು ಬಹಳ ಕಷ್ಟಪಟ್ಟು ನಾಡಿಗೆ ತಂದರು. ಅದೊಂದು ಮಗುವಾಗಿತ್ತು. ಆದರೆ ಅವನಿಗೆ ಮಾನವರಂತೆ ಮಾತನಾಡಲೋ ಬಟ್ಟೆಗಳನ್ನು ಧರಿಸಲೋ ಕೈಯಿಂದ ಆಹಾರ ಸೇವಿಸಲೋ ತಿಳಿದಿರಲಿಲ್ಲ. ಮಾನವರ ಯಾವುದೇ ಸ್ವಭಾವವೂ ಅವನಲ್ಲಿರಲಿಲ್ಲ. ಹೆಚ್ಚಿನ ಅಧ್ಯಯನಕ್ಕಾಗಿ ಆ ಮಗುವನ್ನು ಪ್ಯಾರಿಸ್‌ಗೆ ಕರೆದುಕೊಂಡು ಹೋದರು. ಆ ಪಟ್ಟಣದಲ್ಲಿ ಜೀನ್ ಮಾರ್ಕ್ ಇಟಾರ್ಡ್ (Jean Marc Itard) ಎಂಬ ವೈದ್ಯರು ಆ ಮಗುವಿನ ಜವಾಬ್ದಾರಿಯನ್ನು ತೆಗೆದುಕೊಂಡರು. ಡಾಕ್ಟರ್ ಹಾಗೂ ಸಹಾಯಕಿಯಾದ ನರ್ಸ್ ಸೇರಿಕೊಂಡು ಮಗುವಿಗೆ ವಿಕ್ಟರ್ ಎಂದು ನಾಮಕರಣ ಮಾಡಿದರು. ಅವನಿಗೆ 12 ವರ್ಷ ವಯಸ್ಸಾಗಿತ್ತು. ಸಾಧಾರಣ ಮಕ್ಕಳಂತೆ ಬಟ್ಟೆ ಧರಿಸಲೂ ಆಹಾರ ಸೇವಿಸಲೂ ಮಾತನಾಡಲೂ ಅವರು ವಿಕ್ಟರನಿಗೆ ತರಬೇತಿ ನೀಡಿದರು. ವಿಕ್ಟರನಿಗೆ ಯಾವುದನ್ನೂ ಸುಲಭದಲ್ಲಿ ಕಲಿಯಲು ಸಾಧ್ಯವಾಗಲಿಲ್ಲ. ಪಾತ್ರೆಯಲ್ಲಿ ಆಹಾರವನ್ನು ಹೊರಕ್ಕೆ ಚೆಲ್ಲಿ ನಾಯಿಗಳಂತೆ ನೆಕ್ಕಿ ತಿನ್ನಲು ಅವನು ಪ್ರಯತ್ನಿಸಿದನು. ಹಾಸಿಗೆ ಹಾಗೂ ಹೊದಿಕೆಯನ್ನು ಉಪಯೋಗಿಸದೆ ಕೋಣೆಯ ಮೂಲೆಯಲ್ಲಿ ಮುದುಡಿ ಮಲಗುವುದು ಅವನಿಗೆ ಇಷ್ಟವಾಗಿತ್ತು. ಎಷ್ಟೋ ದಿನಗಳ ನಂತರ ಕೆಲವು ಶಬ್ದಗಳನ್ನು ಉಚ್ಚರಿಸಲು ವಿಕ್ಟರ್ ಕಲಿತನು.

ಮಾನವ ಸಮಾಜದ ನಡತೆಯ ವಿಧಾನಗಳೋ ಆಚಾರಗಳೋ ವಿಕ್ಟರ್‌ಗೆ ತಿಳಿದಿರಲಿಲ್ಲ. ಒಬ್ಬ ವ್ಯಕ್ತಿಯು ಸಮಾಜದಿಂದ ಕಲಿಯುವ ಯಾವ ಪಾಠಗಳನ್ನೂ ಮನೋಗತಮಾಡಿಕೊಳ್ಳಲು ವಿಕ್ಟರನಿಗೆ ಸಾಧ್ಯವಾಗುತ್ತಿರಲಿಲ್ಲ. ವಿಕ್ಟರನಿಗೆ ಇತರ ಮಾನವರೊಂದಿಗೆ ವಾಸಮಾಡಲು ಸಾಧ್ಯವಾಗಲಿಲ್ಲ ಎಂಬುದೇ ಅತ್ಯಂತ ದುಃಖದ ವಿಚಾರವಾಗಿದೆ.

1920ರಲ್ಲಿ ಬಂಗಾಳದ ಮಿಡ್ನಾಪುರ ಗ್ರಾಮದಿಂದ ಕಾಡು ಪ್ರಾಣಿಗಳೊಂದಿಗೆ ಪತ್ತೆಯಾದ ಇಬ್ಬರು ಹುಡುಗಿಯರ (ಕಮಲ, ಅಮಲ) ಜೀವನವು ಕೂಡ ವಿಕ್ಟರನ ಹಾಗಿತ್ತು. 1938ರಲ್ಲಿ ಅಮೇರಿಕಾದ ಒಂದು ಮನೆಯ ಕತ್ತಲು ಕೋಣೆಯ ಒಳಗೆ ಕೂಡಿ ಹಾಕಿದ್ದ ಅನ್ನಾಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ತನ್ನ ಆರನೆಯ ವರ್ಷದಲ್ಲಿ ಏಕಾಂತವಾಸ ಶಿಕ್ಷೆಯಿಂದ ಬಿಡುಗಡೆಗೊಳಿಸಿದಾಗ ಅನ್ನಾಳಿಗೆ ಮಾತನಾಡಲೋ, ನಡೆದಾಡಲೋ ಸಾಧ್ಯವಾಗುತ್ತಿರಲಿಲ್ಲ. ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಯಾವುದೇ ಲಕ್ಷಣಗಳನ್ನು ಇವರಲ್ಲೊಬ್ಬರೂ ವ್ಯಕ್ತಪಡಿಸುತ್ತಿರಲಿಲ್ಲ.

ಸಮಾಜದೊಂದಿಗೆ ಬೆಳೆಯದ ಒಬ್ಬ ವ್ಯಕ್ತಿಗೆ ಸಮಾಜ ಜೀವಿಯಾಗಿ ಬದಲಾಗಲು ಕಷ್ಟಸಾಧ್ಯವೆಂದೂ ಸಾಮಾಜಿಕ ವರ್ತನೆಯನ್ನು ಹಾಗೂ ಭಾಷೆಯನ್ನು ಸುಲಭವಾಗಿ ಕಲಿಯಲೋ ಅಭ್ಯಸಿಸಲೋ ಸಾಧ್ಯವಿಲ್ಲವೆಂದೂ ತಿಳಿಯಿತಲ್ಲವೆ?

ಸಮಾಜವಿಲ್ಲದಿದ್ದರೆ ಒಬ್ಬ ವ್ಯಕ್ತಿಯ ಬೆಳವಣಿಗೆ ಹೇಗಿರಬಹುದು? ಚರ್ಚೆಯ ಮೂಲಕ ಟಿಪ್ಪಣಿ ತಯಾರಿಸಿರಿ. ಕೆಳಗೆ ನೀಡಿರುವವುಗಳನ್ನು ಚರ್ಚಾ ಸೂಚಕಗಳಾಗಿ ಉಪಯೋಗಿಸಿರಿ.

- ಶಾರೀರಿಕ ಬೆಳವಣಿಗೆ
- ಬೌದ್ಧಿಕ ವಿಕಾಸ
- ವರ್ತನೆ

## ಸಮುದಾಯ ಹಾಗೂ ಸಮಾಜ

ಸಮುದಾಯದೊಂದಿಗೆ ಸಂಬಂಧ ಹೊಂದಿರುವಂತೆಯೇ ಮಾನವರು ವಿವಿಧ ಸಾಮಾಜಿಕ ಸಂಘಟನೆಗಳೊಂದಿಗೂ ಸಂಬಂಧವನ್ನು ಹೊಂದಿರುವರು. ನೀವು ಯಾವೆಲ್ಲ ಸಾಮಾಜಿಕ ಒಕ್ಕೂಟಗಳಲ್ಲಿ ಸದಸ್ಯರಾಗಿರುವಿರಿ?

- ಕ್ಲಬ್ಬುಗಳು
- 
- 

ಸಮಾಜ ಎಂಬುದು ಹಲವು ರೀತಿಯ ಸಾಮಾಜಿಕ ಸಂಘಟನೆಗಳು ಒಳಗೊಂಡಿರುವುದಾಗಿದೆ ಎಂದು ತಿಳಿಯಿತಲ್ಲವೇ? ಸಮುದಾಯ (Community), ಒಕ್ಕೂಟಗಳು (Association) ಮೊದಲಾದವುಗಳು ಸಮಾಜದ ಭಾಗಗಳಾಗಿವೆ.

### ಸಮುದಾಯ (Community)

ಸಮುದಾಯ ಎಂಬುದು ಒಂದು ನಿಶ್ಚಿತ ಪ್ರದೇಶದಲ್ಲಿ ನಾವೆಲ್ಲರೂ ಒಂದೇ ಎಂಬ ಭಾವನೆಯೊಂದಿಗೆ ಜೀವಿಸುವ ಜನರ ಕೂಟವಾಗಿದೆ. ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುವುದು, ಒಟ್ಟಾಗಿ ಕಾರ್ಯನಿರ್ವಹಿಸುವುದು, ಸದೃಢವಾದ ಸಂಬಂಧಗಳು ಹಾಗೂ ಸಮಾನವಾದ ಸಾಂಸ್ಕೃತಿಕ ಮೌಲ್ಯಗಳು ಸಮುದಾಯದ ವಿಶೇಷತೆಗಳಾಗಿವೆ. ಸಮಾಜದೊಂದಿಗೆ ಹೋಲಿಸಿದರೆ ಸಮುದಾಯದ ವ್ಯಾಪ್ತಿ ಕಿರಿದು. ಆದರೂ ಸಮಾಜದಲ್ಲಿರುವುದಕ್ಕಿಂತಲೂ ಹೆಚ್ಚಿನ ಭಾವನಾತ್ಮಕ ಸಂಬಂಧವು ಸಮುದಾಯದಲ್ಲಿ ನೆಲೆ ನಿಂತಿರುತ್ತದೆ. ಒಬ್ಬ ವ್ಯಕ್ತಿಯನ್ನು ಸಾಮಾಜಿಕ ಜೀವಿಯಾಗಿ ಬದಲಾಯಿಸುವುದರಲ್ಲಿ ಸಮುದಾಯವು ಪ್ರಮುಖ ಪಾತ್ರ ವಹಿಸುತ್ತದೆ.



ಒಂದೇ ಗ್ರಾಮದಲ್ಲಿ ವಾಸಿಸುವವರನ್ನು ಒಂದು ಸಮುದಾಯವಾಗಿ ಪರಿಗಣಿಸಲು ಕಾರಣಗಳೇನಾಗಿರಬಹುದು?

- ನಾವೆಲ್ಲರೂ ಒಂದೇ ಎನ್ನುವ ಭಾವನೆ.
- 
- 

### ಒಕ್ಕೂಟಗಳು (Association)

ನಿಮ್ಮ ಶಾಲೆಯಲ್ಲಿ ವಿವಿಧ ಕ್ಲಬ್ಬುಗಳು ಕಾರ್ಯನಿರ್ವಹಿಸುತ್ತಿವೆಯಲ್ಲವೆ. ಅವು ಯಾವುವೆಂದೂ ಅವುಗಳ ಉದ್ದೇಶಗಳೇನೆಂದೂ ಪಟ್ಟಿ ಮಾಡಿರಿ.

| ಕ್ಲಬ್ಬುಗಳು | ಉದ್ದೇಶಗಳು |
|---|---|
| • ವಿದ್ಯಾರಂಗ | • ಕಲೆ, ಸಾಹಿತ್ಯ ಮುಂತಾದವುಗಳನ್ನು ಪ್ರೋತ್ಸಾಹಿಸುವುದು |
| • | • |
| • | • |

ಪ್ರತಿಯೊಂದು ಕ್ಲಬ್ ಬೇರೆ ಬೇರೆ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿಯಿತಲ್ಲವೆ. ಹೀಗೆ ವಿಭಿನ್ನ ಉದ್ದೇಶಗಳನ್ನು ಈಡೇರಿಸಲು ಪ್ರಯತ್ನಿಸುವ ಜನರ ಕೂಟಗಳೇ ಒಕ್ಕೂಟಗಳಾಗಿವೆ.

ಒಕ್ಕೂಟಗಳು ಜನರ ಸಾಮರ್ಥ್ಯಗಳನ್ನು ವಿಕಾಸಗೊಳಿಸುವ ಉದ್ದೇಶದೊಂದಿಗೆ ಸಾರ್ವಜನಿಕ ಒಳಿತಿಗಾಗಿ ರೂಪುಗೊಳ್ಳುವವುಗಳಾಗಿವೆ. ರೆಸಿಡೆನ್ಸ್ ಅಸೋಸಿಯೇಶನ್‌ಗಳು, ಕಾರ್ಮಿಕ ಸಂಘಟನೆಗಳು, ವಿದ್ಯಾರ್ಥಿ ಸಂಘಟನೆಗಳು ಮೊದಲಾದವು ಒಕ್ಕೂಟಗಳಿಗೆ ಉದಾಹರಣೆಗಳಾಗಿವೆ.

ಒಬ್ಬ ವ್ಯಕ್ತಿಯನ್ನು ಸಮಾಜದ ಸಮರ್ಥ ಸದಸ್ಯನನ್ನಾಗಿ ಬದಲಾಯಿಸುವುದರಲ್ಲಿ ಸಮುದಾಯಕ್ಕೂ ಒಕ್ಕೂಟಗಳಿಗೂ ಪ್ರಮುಖ ಪಾತ್ರವಿದೆ.

> ಕೆಲವು ಉದ್ದೇಶಗಳನ್ನು ಸಾಧಿಸಲಿಕ್ಕಾಗಿ ಜನರು ಒಟ್ಟಾಗಿ ಕಾರ್ಯಾಚರಿಸುವುದನ್ನು ಒಕ್ಕೂಟ ಎಂದು ಕರೆಯುತ್ತಾರೆ.
>
> – ಬೊಗಾರ್ಡ್ಸ್

### ನಾವು ಬೆಳಕಾಗಬಹುದು...

ಸಮಾಜವು ವ್ಯಕ್ತಿಗಳ ಒಕ್ಕೂಟಗಳಿಂದಾಗಿ ರೂಪುಗೊಳ್ಳುತ್ತದೆ. ಉತ್ತಮ ವ್ಯಕ್ತಿಗಳು ಸಮಾಜದ ಅಭಿವೃದ್ಧಿಯಲ್ಲೂ ಬದಲಾವಣೆಯಲ್ಲೂ ಪ್ರಮುಖ ಪಾತ್ರವಹಿಸುತ್ತಾರೆ. ಸಮಾಜದ ಮೇಲೆ ಪ್ರಭಾವ ಬೀರಿದ ಕೆಲವು ವ್ಯಕ್ತಿಗಳನ್ನು ನಾವು ಪರಿಚಯಿಸಿಕೊಳ್ಳೋಣ.



ಚಿತ್ರವನ್ನು ನೋಡಿದಿರಲ್ಲವೆ. ಸಮಾಜದ ಒಳಿತಿಗಾಗಿ ಇವರು ಏನೆಲ್ಲ ಕೊಡುಗೆಗಳನ್ನು ನೀಡಿದ್ದಾರೆ?

| ಗಾಂಧೀಜಿ | ರಾಜಾರಾಂ ಮೋಹನರಾಯ್ | ಶ್ರೀನಾರಾಯಣಗುರು |
|---|---|---|
| • | • | • ಅಸ್ಪೃಶ್ಯತೆಯ ನಿವಾರಣೆ |
| • | • | • |
| • | • | • |
| | • ಮಹಿಳಾ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಿದರು. | • |

ಸಮಾಜದ ಅಭಿವೃದ್ಧಿ ಹಾಗೂ ಉಳಿವಿಗೋಸ್ಕರ ಹಲವು ರೀತಿಯಲ್ಲಿ ಜನರು ಭಾಗಿಗಳಾಗುತ್ತಾರೆ ಎಂದು ತಿಳಿಯಿತಲ್ಲವೆ. ಕುಟುಂಬ, ನೆರೆಹೊರೆಯವರು, ಶಾಲೆ, ಒಕ್ಕೂಟಗಳು ಮೊದಲಾದವುಗಳಲ್ಲಿ ಜನರ ಸಕ್ರಿಯವಾದ ಭಾಗವಹಿಸುವಿಕೆಯು ಬದಲಾವಣೆಗೆ ಕಾರಣವಾಗುತ್ತದೆ. ಸಮಾಜ ಇಲ್ಲದಿದ್ದರೆ ವ್ಯಕ್ತಿ ಇಲ್ಲ ಎಂಬಂತೆ ವ್ಯಕ್ತಿ ಇಲ್ಲದಿದ್ದರೆ ಸಮಾಜವೂ ಇಲ್ಲ. ವ್ಯಕ್ತಿ ಹಾಗೂ ಸಮಾಜಗಳು ಪರಸ್ಪರ ಸಂಬಂಧವನ್ನು ಹೊಂದಿವೆ.

## ಸಾಮಾಜೀಕರಣ (Socialisation)

ಒಬ್ಬ ವ್ಯಕ್ತಿ ಸಮಾಜದ ಭಾಗವಾಗಿ ಹೇಗೆ ಬದಲಾಗುತ್ತಾನೆ? ನೀವು ಪುಟ್ಟ ಮಕ್ಕಳನ್ನು ಗಮನಿಸಿದ್ದೀರಲ್ಲವೇ. ಬೇರೆಯವರ ಸಹಾಯವಿಲ್ಲದೆ ಆಹಾರ ಸೇವಿಸಲೋ ನೀರು ಕುಡಿಯಲೋ ಅವರಿಗೆ ಸಾಧ್ಯವಾಗುತ್ತದೆಯೇ? ಕುಟುಂಬದ ಸದಸ್ಯರನ್ನು ಗುರುತಿಸಲು ಕೂಡ ಅವರಿಗೆ ಎಷ್ಟು ತಿಂಗಳುಗಳು ಬೇಕಾಗುತ್ತವೆ! ಮಾತನಾಡಲು ಹಾಗೂ ನಡೆದಾಡಲು ಮಗು ಕ್ರಮೇಣ ಕಲಿಯುತ್ತದೆ. ಮಗು ಬೆಳೆದಂತೆ ಸಂಸ್ಕೃತಿ, ಆಚಾರ-ವಿಚಾರ ಹಾಗೂ ವರ್ತನೆಗಳನ್ನು ಅರಿತುಕೊಳ್ಳುತ್ತದೆ ಮತ್ತು ತನ್ನ ಜೀವನದಲ್ಲಿ ಅದನ್ನು ಅಳವಡಿಸಿಕೊಳ್ಳುತ್ತದೆ. ಈ ರೀತಿಯಲ್ಲಿ ಒಬ್ಬ ವ್ಯಕ್ತಿಯನ್ನು ಸಮಾಜದಲ್ಲಿ ಜೀವಿಸಲು ಸಮರ್ಥನನ್ನಾಗಿಸುವ ಪ್ರಕ್ರಿಯೆಯನ್ನು ಸಾಮಾಜೀಕರಣ (Socialisation) ಎನ್ನುವರು.

> ಸಾಮಾಜೀಕರಣ ಎಂಬುದು ಜನರು ಸಮಾಜದ ಆಚಾರವಿಚಾರಗಳೊಂದಿಗೆ ಹೊಂದಿಕೊಳ್ಳಲು ಕಲಿಯುವ ಪ್ರಕ್ರಿಯೆಯಾಗಿದೆ.
>
> – ಒಗ್ಬೆರ್ನ್

**ಕೆಳಗೆ ಕೊಟ್ಟಿರುವ ಚೆಕ್‌ಲಿಸ್ಟ್ ಪೂರ್ತಿಗೊಳಿಸಿ ನಿಮ್ಮ ಸಾಮಾಜಿಕ ಸಂಬಂಧವನ್ನು ಮೌಲ್ಯಮಾಪನ ಮಾಡಿರಿ.**

| | ಹೌದು | ಇಲ್ಲ |
|---|---|---|
| 1. ಅನೇಕ ಗೆಳೆಯರನ್ನು ಹೊಂದಲು ನಾನು ಆಸಕ್ತನಾಗಿರುತ್ತೇನೆ. | | |
| 2. ಬಿಡುವಿನ ಸಮಯವನ್ನು ಗೆಳೆಯರೊಂದಿಗೆ ಕಳೆಯಲು ನಾನು ಇಷ್ಟಪಡುತ್ತೇನೆ. | | |
| 3. ನಾನು ಇತರರ ಅಭಿಪ್ರಾಯಗಳನ್ನು ಗೌರವಿಸುತ್ತೇನೆ. | | |
| 4. ಸ್ನೇಹಿತರ ಸಮಸ್ಯೆಗಳನ್ನು ನಾನು ತಾಳ್ಮೆಯಿಂದ ಕೇಳುತ್ತೇನೆ. | | |
| 5. ಸ್ನೇಹಿತರ ಸಮಸ್ಯೆಗಳನ್ನು ಪರಿಹರಿಸಲು ನಾನು ಆಸಕ್ತಿಯನ್ನು ತಾಳುತ್ತೇನೆ. | | |
| 6. ನನ್ನ ಸಮಸ್ಯೆಗಳನ್ನು ಇತರರೊಂದಿಗೆ ಹಂಚಿಕೊಳ್ಳುತ್ತೇನೆ. | | |
| 7. ನಾನು ಟೀಕೆಗಳನ್ನು ಸ್ವೀಕರಿಸುತ್ತೇನೆ. | | |
| 8. ಗುಂಪು ಚಟುವಟಿಕೆಗಳನ್ನು ನಾನು ಇಷ್ಟ ಪಡುತ್ತೇನೆ. | | |
| 9. ಆಚರಣೆಗಳಲ್ಲಿ ನಾನು ಸಕ್ರಿಯವಾಗಿ ಭಾಗಿಯಾಗುತ್ತೇನೆ. | | |
| 10. ನಾನು ಶಾಲೆಯ ಕಲೆ, ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಲು ಇಷ್ಟ ಪಡುತ್ತೇನೆ. | | |

ಚೆಕ್‌ಲಿಸ್ಟ್ ಪೂರ್ತಿ ಮಾಡಿದಿರಲ್ಲವೇ? ಪ್ರತಿಯೊಂದು ಹೇಳಿಕೆಗೂ 'ಹೌದು' ಎಂದು ಉತ್ತರಿಸಿದ್ದಾದಲ್ಲಿ ಒಂದೊಂದು ಅಂಕಗಳನ್ನು ನೀಡಿರಿ. ನಿಮಗೆ ಲಭಿಸಿದ ಅಂಕಗಳನ್ನು ಪರಿಶೋಧಿಸಿ ನಿಮಗಿರುವ ಸಾಮಾಜಿಕ ಸಂಬಂಧವನ್ನು ವಿಶ್ಲೇಷಿಸಿರಿ.

## ಸಾಮಾಜೀಕರಣದ ಘಟಕಗಳು

ಸಾಮಾಜೀಕರಣ ಸಾಧ್ಯವಾಗದ ಒಬ್ಬ ವ್ಯಕ್ತಿ ಸಮಾಜ ಜೀವಿಯಾಗಿ ಬದಲಾಗುವುದಿಲ್ಲ ಎಂದು ನಾವು ತಿಳಿದೆವಲ್ಲವೇ. ಸಾಮಾಜೀಕರಣ ಎಂಬುದು ಜೀವನದುದ್ದಕ್ಕೂ ನಡೆಯುವ ಪ್ರಕ್ರಿಯೆಯಾಗಿದೆ. ಇದಕ್ಕೆ ಹಲವು ಘಟಕಗಳು ನಮಗೆ ಸಹಾಯ ಮಾಡುತ್ತದೆ. ಇವು ಯಾವುವು ಎಂದು ನೋಡುವ.

- ಕುಟುಂಬ
- ಸ್ನೇಹಿತರು
- ಶಾಲೆ
- ವಾರ್ತಾ ಮಾಧ್ಯಮಗಳು
- 
- 

### ಕುಟುಂಬ


ಕುಟುಂಬದಿಂದ ನೀವು ಯಾವುದನ್ನೆಲ್ಲ ಕಲಿಯುತ್ತೀರಿ?

- ಶಿಸ್ತು
- ಸಮಯ ಪ್ರಜ್ಞೆ
- ಹಿರಿಯರೊಂದಿಗೆ ಗೌರವ/ಸ್ನೇಹ
- 
- 
- 

ನಾವು ನಮ್ಮ ಹೆತ್ತವರಿಂದ ವರ್ತನೆಯ ರೀತಿ ನೀತಿಗಳನ್ನು ಕಲಿಯುತ್ತೇವೆ. ಆದುದರಿಂದ ಸಾಮಾಜೀಕರಣ ಪ್ರಕ್ರಿಯೆಯಲ್ಲಿ ಕುಟುಂಬವು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಬಹುದು. ತಂದೆ ತಾಯಂದಿರು ಮಗುವಿಗೆ ಸಾಮಾಜೀಕರಣದ ಮೊದಲ ಪಾಠಗಳನ್ನು ನೀಡುತ್ತಾರೆ. ಕುಟುಂಬದಿಂದ ನಾವು ಒಳ್ಳೆಯದು, ಕೆಟ್ಟದು, ಸರಿ, ತಪ್ಪುಗಳನ್ನು ಗುರುತಿಸಲು ಕಲಿಯುತ್ತೇವೆ.



ಸಾಮಾಜೀಕರಣದ ಘಟಕ ಎಂಬ ನೆಲೆಯಲ್ಲಿ ಕುಟುಂಬಗಳಿಂದ ನಾವು ಯಾವೆಲ್ಲ ವಿಚಾರಗಳನ್ನು ಕಲಿಯುತ್ತೇವೆ? ಪದಸೂರ್ಯವನ್ನು ಪೂರ್ತಿಗೊಳಿಸಿರಿ.




### ಸಮವಯಸ್ಕರು/ಸ್ನೇಹಿತರು

ನಾವು ಸ್ನೇಹಿತರೊಂದಿಗೆ ವ್ಯವಹರಿಸುವಾಗ ನಮಗರಿವಿಲ್ಲದೆ ಅನೇಕ ವಿಚಾರಗಳನ್ನು ಕಲಿಯುತ್ತೇವೆ. ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಾಗ ಸಾಮೂಹಿಕ ಪ್ರಜ್ಞೆ ಉಂಟಾಗುವುದರೊಂದಿಗೆ ಜಯ ಹಾಗೂ ಪರಾಜಯಗಳನ್ನು ಅಂಗೀಕರಿಸಲು

ಮತ್ತು ಅವುಗಳಿಂದ ಪ್ರಚೋದನೆಯನ್ನು ಪಡೆದುಕೊಂಡು ಮುನ್ನಡೆಯಲು ನಾವು ಸಮರ್ಥರಾಗುತ್ತೇವೆ. ಉತ್ತಮ ಅಭ್ಯಾಸಗಳನ್ನು ರೂಢಿಸಿಕೊಳ್ಳುವಲ್ಲಿ ಸ್ನೇಹಿತರು ಮುಖ್ಯ ಪಾತ್ರ ವಹಿಸುತ್ತಾರೆ.



ಉತ್ತಮ ಅಭ್ಯಾಸಗಳನ್ನು ಬೆಳೆಸುವಲ್ಲಿ ನಿಮಗೆ ಸಹಾಯ ಮಾಡಿದ ಗೆಳೆಯ/ಗೆಳತಿಯೊಂದಿಗಿನ ಉತ್ತಮ ಅನುಭವಗಳನ್ನು ಹಂಚಿಕೊಳ್ಳುವಿರಾ?

## ಶಾಲೆ

ಮಗುವಿನ ಸಾಮಾಜೀಕರಣದಲ್ಲಿ ಶಾಲೆಯು ಹೇಗೆ ಸಹಾಯಕವಾಗುತ್ತದೆ ಎಂದು ನೋಡುವ

- ಕಾನೂನುಗಳನ್ನು ಪಾಲಿಸಲು ಕಲಿಯುತ್ತಾರೆ.
- ಜ್ಞಾನವನ್ನು ಪಡೆಯುತ್ತಾರೆ.
- ಮೌಲ್ಯಗಳನ್ನು ತನ್ನದಾಗಿಸಿಕೊಳ್ಳುತ್ತಾರೆ.
- ವಿಭಿನ್ನ ಹಿನ್ನೆಲೆಗಳಿಂದ ಬರುವ ಮಕ್ಕಳೊಂದಿಗೆ ವ್ಯವಹರಿಸುತ್ತಾರೆ.
- ಉತ್ತಮ ಅಭ್ಯಾಸಗಳನ್ನು ಬೆಳೆಸುತ್ತಾರೆ.

ಶಾಲೆಯಿಂದ ಪಡೆಯುವ ತಿಳುವಳಿಕೆಗಳು, ಸಾಮರ್ಥ್ಯಗಳು, ಮೌಲ್ಯಗಳು ನಮ್ಮನ್ನು ಜವಾಬ್ದಾರಿಯುತ ಸಮಾಜ ಜೀವಿಯಾಗಲು ಸಮರ್ಥರನ್ನಾಗಿಸುತ್ತವೆ.

## ವಾರ್ತಾ ಮಾಧ್ಯಮಗಳು

ಪ್ರಮುಖ ವಾರ್ತಾ ಮಾಧ್ಯಮಗಳು ಯಾವುವು?

- ದಿನ ಪತ್ರಿಕೆಗಳು
- ವಾರ ಪತ್ರಿಕೆಗಳು
- ದೂರದರ್ಶನ ವಾಹಿನಿಗಳು
- 

ವಾರ್ತಾ ಮಾಧ್ಯಮಗಳು ನಮ್ಮ ದೃಷ್ಟಿಕೋನದಲ್ಲಿ ಮನೋಭಾವದಲ್ಲಿ ಹಾಗೂ ಜೀವನ ರೀತಿಯಲ್ಲಿ ಪ್ರಭಾವ ಬೀರುತ್ತವೆ. ಪ್ರಪಂಚದ ವಿವಿಧ ಭಾಗಗಳಲ್ಲಿರುವ ಜನರನ್ನು ಒಂದುಗೂಡಿಸಲು ಹಾಗೂ ಜಾಗತಿಕ ಸಮಾಜವನ್ನು ರೂಪಿಸಲು ವಾರ್ತಾಮಾಧ್ಯಮಗಳು ಸಹಾಯ ಮಾಡುತ್ತವೆ.

ಕಳೆದ ವಾರದ ಪತ್ರಿಕಾ ವಾರ್ತೆಗಳಲ್ಲಿ ನಿಮ್ಮ ಗಮನ ಸೆಳೆದ ವಿಚಾರದ ಕುರಿತು ಚರ್ಚೆ ನಡೆಸಿರಿ.

ಸಾಮಾಜೀಕರಣ ಪ್ರಕ್ರಿಯೆಗೆ ಸಹಾಯ ಮಾಡುವ ಮೇಲೆ ಹೇಳಿದ ಘಟಕಗಳಲ್ಲಿ ಯಾವುದಾದರೊಂದು ಘಟಕವು ಪ್ರಯೋಜನಕರವಲ್ಲದ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವುದು ನಿಮ್ಮ ಗಮನಕ್ಕೆ ಬಂದಿದೆಯೇ?

ಕೆಲವು ಉದಾಹರಣೆಗಳನ್ನು ಗಮನಿಸಿರಿ.

- ಸ್ನೇಹಿತರು ಸೇರಿಕೊಂಡು ಸಾರ್ವಜನಿಕ ಸೊತ್ತುಗಳನ್ನು ನಾಶ ಮಾಡುತ್ತಾರೆ.
- ಮದ್ಯಪಾನ, ಮಾದಕ ವಸ್ತು ಸೇವನೆ ಮೊದಲಾದ ದುಶ್ಚಟಗಳಿಗೆ ಗೆಳೆಯರು ಪ್ರೋತ್ಸಾಹಿಸುತ್ತಾರೆ.
- ಅಂತರ್ಜಾಲದ ದುರುಪಯೋಗವು ನಮ್ಮನ್ನು ತಪ್ಪು ದಾರಿಗೆ ಕೊಂಡೊಯ್ಯುತ್ತದೆ.
- ದೃಶ್ಯ ಮಾಧ್ಯಮಗಳ ಎದುರು ಹೆಚ್ಚಿನ ಸಮಯವನ್ನು ಕಳೆಯುವುದು ಸಾಮಾಜಿಕ ಸಂಬಂಧಗಳನ್ನು ಪರಿಮಿತಗೊಳಿಸುತ್ತದೆ.

ಸಾಮಾಜೀಕರಣದ ಮೂಲಕ ಇಂತಹ ಅಭ್ಯಾಸಗಳನ್ನು ಹೇಗೆ ಎದುರಿಸಬಹುದು? ಚರ್ಚಿಸಿರಿ.

## ಕ್ರೋಢೀಕರಣ

- ಜೀವನದ ಪ್ರತಿಯೊಂದು ಹಂತದಲ್ಲೂ ವ್ಯಕ್ತಿಯು ಸಮಾಜದಲ್ಲಿರುವ ಹಲವು ಸಂಘಟನೆಗಳಿಗೆ ಋಣಿಯಾಗಿರಬೇಕು.
- ಸಮಾಜವು ಪ್ರತಿಯೊಬ್ಬ ವ್ಯಕ್ತಿಯ ಬೆಳವಣಿಗೆ ಹಾಗೂ ಅಸ್ತಿತ್ವಕ್ಕೆ ಆಧಾರವಾಗಿದೆ.
- ಸಮಾಜವು ಸಾಮಾಜಿಕ ಸಂಬಂಧಗಳ ಜಾಲವಾಗಿದೆ. ವ್ಯಕ್ತಿ ಹಾಗೂ ಸಮಾಜವು ಪರಸ್ಪರ ಪೂರಕ ಸಂಬಂಧವನ್ನು ಹೊಂದಿದೆ.
- ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ನಡೆಯುವ ಬದಲಾವಣೆ ಹಾಗೂ ಪ್ರಗತಿಯಲ್ಲಿ ಪ್ರಭಾವ ಬೀರುತ್ತಾರೆ.
- ಸಮಾಜದೊಂದಿಗೆ ಬೆಳೆಯದ ಒಬ್ಬ ವ್ಯಕ್ತಿಗೆ ಸಮಾಜ ಜೀವಿಯಾಗಲು ಸಾಧ್ಯವಿಲ್ಲ.
- ಸಮುದಾಯ (Community), ಒಕ್ಕೂಟ (Association) ಮುಂತಾದ ಸಾಮಾಜಿಕ ಸಂಸ್ಥೆಗಳಿಗೆ ಒಬ್ಬ ವ್ಯಕ್ತಿಯ ವಿಕಾಸದಲ್ಲಿ ಪ್ರಧಾನ ಪಾತ್ರವಿದೆ.
- ಸಾಮಾಜೀಕರಣವು ಜನರ ಒಕ್ಕೂಟಗಳ ರೀತಿನೀತಿಗಳೊಂದಿಗೆ ಹೊಂದಿಕೊಳ್ಳಲು ಕಲಿಯುವ ಪ್ರಕ್ರಿಯೆಯಾಗಿದೆ. ಕುಟುಂಬ, ಗೆಳೆಯರು, ಶಾಲೆ, ವಾರ್ತಾಮಾಧ್ಯಮ ಇತ್ಯಾದಿಗಳು ಸಾಮಾಜೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

1. ವ್ಯಕ್ತಿ ಹಾಗೂ ಸಮಾಜದ ನಡುವಿನ ಸಂಬಂಧವನ್ನು ತಿಳಿದುಕೊಳ್ಳುತ್ತಾರೆ.
2. ಸಮಾಜವು ಪ್ರತಿಯೊಬ್ಬ ವ್ಯಕ್ತಿಯ ಪ್ರಗತಿಯಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಅರಿತುಕೊಳ್ಳುತ್ತಾರೆ.
3. ಸಮಾಜ, ಸಮುದಾಯ, ಒಕ್ಕೂಟ ಮುಂತಾದವುಗಳು ಜನರ ಅಸ್ತಿತ್ವ ಹಾಗೂ ಬೆಳವಣಿಗೆಗೆ ಅನಿವಾರ್ಯವಾಗಿದೆ ಎಂದು ತಿಳಿದುಕೊಳ್ಳುತ್ತಾರೆ.
4. ಒಬ್ಬ ವ್ಯಕ್ತಿಯನ್ನು ಸಮಾಜದ ಭಾಗವಾಗಿ ಬದಲಾಯಿಸುವಲ್ಲಿ ಸಾಮಾಜೀಕರಣದ ಪಾತ್ರವನ್ನು ತಿಳಿದುಕೊಳ್ಳುತ್ತಾರೆ.

## ಮೌಲ್ಯ ನಿರ್ಣಯ ಮಾಡುವ

1. ಸಮುದಾಯ, ಸಮಾಜ ಇವು ಸಾಮಾಜಿಕ ಒಕ್ಕೂಟಗಳಾಗಿವೆ. ಇವುಗಳ ವಿಶೇಷತೆಗಳನ್ನು ಪಟ್ಟಿ ಮಾಡಿರಿ.

| ಸಮುದಾಯ | ಸಮಾಜ |
| --- | --- |
| | |

2. ಸಾಮಾಜೀಕರಣಕ್ಕೆ ಸಹಾಯ ಮಾಡುವ ವಿವಿಧ ಘಟಕಗಳನ್ನು ಪರಿಚಯಿಸಿದಿರಲ್ಲವೆ. ಇವುಗಳಲ್ಲಿ ಪ್ರತಿಯೊಂದು ಯಾವೆಲ್ಲ ರೀತಿಯಲ್ಲಿ ಸಾಮಾಜೀಕರಣಕ್ಕೆ ಸಹಾಯ ಮಾಡುತ್ತವೆ? ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿ.

| ಕುಟುಂಬ | ಶಾಲೆ | ಸಮಾನ ವಯಸ್ಕರು | ಸಮೂಹ ಮಾಧ್ಯಮಗಳು |
|---|---|---|---|
| • ಸ್ನೇಹ | • | • ವಿಶಾಲ ದೃಷ್ಟಿಕೋನ | • ದೃಷ್ಟಿಕೋನ |
| • | • | • ಸಾಮೂಹಿಕ ಪ್ರಜ್ಞೆ | • |
| • | • ಕರ್ತವ್ಯ ನಿಷ್ಠೆ | • | • |




## ಮುಂದುವರಿದ ಚಟುವಟಿಕೆಗಳು

1. 'ವ್ಯಕ್ತಿ ಇಲ್ಲದೆ ಸಮಾಜಕ್ಕೂ ಸಮಾಜವಿಲ್ಲದೆ ವ್ಯಕ್ತಿಗೂ ಅಸ್ತಿತ್ವವಿಲ್ಲ.' ಈ ಹೇಳಿಕೆಯ ಆಧಾರದಲ್ಲಿ ನಿಮ್ಮ ಒಂದು ದಿನದ ಅನುಭವಗಳನ್ನು ಸೇರಿಸಿಕೊಂಡು ಟಿಪ್ಪಣಿ ತಯಾರಿಸಿರಿ.

2. ಸಾಮಾಜಿಕ ಸಂಬಂಧದ ಅಭಾವವು ವ್ಯಕ್ತಿತ್ವ ವಿಕಾಸವನ್ನು ಯಾವೆಲ್ಲಾ ರೀತಿಯಲ್ಲಿ ಬಾಧಿಸುತ್ತದೆ? ಟಿಪ್ಪಣಿ ಬರೆಯಿರಿ.

3. ಸಮಾಜದ ಮೇಲೆ ಪ್ರಭಾವ ಬೀರಿದ ಕೆಲವು ಸಮಾಜ ಸುಧಾರಕರನ್ನು ಪರಿಚಯಿಸಿದಿರಲ್ಲವೇ. ಈ ರೀತಿಯಲ್ಲಿ ಸಾಮಾಜಿಕ ಬದಲಾವಣೆಗೆ ನೇತೃತ್ವ ನೀಡಿದ ಮಹಾನ್ ವ್ಯಕ್ತಿಗಳ ಚಿತ್ರಗಳು, ಜೀವನ ಚರಿತ್ರೆ ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆಗಳನ್ನು ಸೇರಿಸಿ ಸಂಚಿಕೆಯೊಂದನ್ನು ತಯಾರಿಸಿರಿ.

# 12 ಸೌರತಾಪ ಹಾಗೂ ವಾತಾವರಣದ ಸ್ಥಿತಿಗತಿ




ವಾರ್ತಾ ತುಣುಕುಗಳನ್ನು ಗಮನಿಸಿದಿರಲ್ಲವೇ? ಇಂತಹ ಘಟನೆಗಳಲ್ಲಿ ಕೆಲವು ನಿಮಗೆ ಪರಿಚಿತವಾದವುಗಳಲ್ಲವೇ? ಈ ರೀತಿ ಉಂಟಾಗಲು ಕಾರಣವೇನೆಂದು ನೀವು ಚಿಂತಿಸಿರುವಿರಾ? ಹವಾಮಾನದಲ್ಲಿ ಉಂಟಾಗುವ ಕೆಲವು ಬದಲಾವಣೆಗಳು ಇದಕ್ಕೆ ಕಾರಣವಾಗಿವೆ. ಹವಾಮಾನದ ಮೇಲೆ ಪ್ರಭಾವ ಬೀರುವ ಘಟಕಗಳು ಯಾವುವೆಲ್ಲಾ ಎಂದೂ ಅವು ಯಾವೆಲ್ಲಾ ರೀತಿಯಲ್ಲಿ ಪ್ರಭಾವ ಬೀರುತ್ತವೆಯೆಂದೂ ಈ ಅಧ್ಯಾಯದಿಂದ ನಾವು ತಿಳಿದುಕೊಳ್ಳೋಣ.

## ಸೂರ್ಯ– ಚೈತನ್ಯದ ಮೂಲ

ಸೂರ್ಯನು ಭೂಮಿಗೆ ಅಗತ್ಯವಾದ ಸಂಪೂರ್ಣ ಉಷ್ಣ ಚೈತನ್ಯವನ್ನು ನೀಡುತ್ತಾನೆ ಎಂಬುದು ನಿಮಗೆಲ್ಲಾ ತಿಳಿದಿರುವ ವಿಚಾರವಾಗಿದೆಯಲ್ಲವೆ? ಸೂರ್ಯನ ಉಷ್ಣ ಚೈತನ್ಯವು ಸೌರ ಕಿರಣಗಳಾಗಿ ಭೂಮಿಗೆ ತಲುಪುತ್ತದೆ. ಇದನ್ನು ಸೌರವಿಕಿರಣ(Insolation)ಎಂದು ಕರೆಯುವರು. ಹಗಲು ಹೊತ್ತಿನಲ್ಲಿ ಸೌರವಿಕಿರಣದ ಮೂಲಕ ಭೂಮಿಯ ಮೇಲ್ಮೈ ಬಿಸಿಯಾಗುತ್ತದೆ. ಬಿಸಿಯಾದ ಭೂಮೇಲ್ಮೈಯಿಂದ ವಿವಿಧ ಪ್ರಕ್ರಿಯೆಗಳ ಮೂಲಕ ತಾಪವು ವಾತಾವರಣಕ್ಕೆ ವ್ಯಾಪಿಸುತ್ತದೆ. ಈ ಮೂಲಕ ಭೂಮೇಲ್ಮೈ ತಣ್ಣಗಾಗುತ್ತದೆಯಾದರೂ ವಾತಾವರಣದಲ್ಲಿರುವ ಮೋಡಗಳು, ಕಾರ್ಬನ್ ಡೈಓಕ್ಸೈಡ್ ನಂತಹ ಅನಿಲಗಳು ಭೂಮಿಯಿಂದ ಬರುವ

### ಗರಿಷ್ಠ ತಾಪಮಾನ ಮತ್ತು ಕನಿಷ್ಠ ತಾಪಮಾನ

ಸೂರ್ಯೋದಯಕ್ಕಿಂತ ಸ್ವಲ್ಪ ಮೊದಲು ಅನುಭವಕ್ಕೆ ಬರುವ ತಾಪಮಾನವನ್ನು ಒಂದು ದಿನದ ಕನಿಷ್ಠ ತಾಪಮಾನವಾಗಿ ಹವಾಮಾನ ತಜ್ಞರು ಪರಿಗಣಿಸುತ್ತಾರೆ. ಅಪರಾಹ್ನ 2 ಗಂಟೆಗೆ ಅನುಭವಕ್ಕೆ ಬರುವ ತಾಪಮಾನವು ಒಂದು ದಿನದ ಗರಿಷ್ಠ ತಾಪಮಾನವಾಗಿರುತ್ತದೆ.

ಉಷ್ಣತೆಯನ್ನು ಹೀರಿಕೊಳ್ಳುತ್ತವೆ. ಹೀಗೆ ಭೂಮಿಯಲ್ಲಿ ಜೀವದ ಅಸ್ತಿತ್ವಕ್ಕೆ ಸಹಾಯಕವಾಗುವ ರೀತಿಯಲ್ಲಿ ವಾತಾವರಣದ ಉಷ್ಣತೆಯು ಸ್ಥಿತಿಗೊಳ್ಳುತ್ತದೆ.

ಸೂರ್ಯ ತಾಪವು ಭೂಮಿಯ ಮೇಲ್ಮೈಯಲ್ಲಿ ಎಲ್ಲಾ ಕಡೆಯಲ್ಲೂ ಸಮಾನವಾಗಿ ಲಭ್ಯವಾಗುವುದಿಲ್ಲ. ಭೂಮಧ್ಯ ರೇಖಾ ಪ್ರದೇಶದಲ್ಲಿ ಸೂರ್ಯ ಕಿರಣಗಳು ಲಂಬವಾಗಿ ಬೀಳುವುದರಿಂದ ಇಲ್ಲಿ ಉಷ್ಣತೆಯು ಅಧಿಕವಾಗಿರುತ್ತದೆ. ಧ್ರುವ ಪ್ರದೇಶಗಳಿಗೆ ಸಮೀಪಿಸುತ್ತಿದ್ದಂತೆ ಸೂರ್ಯಕಿರಣಗಳು ಓರೆಯಾಗಿ ಬೀಳುವುದರಿಂದ ಉಷ್ಣತೆಯು ಅಲ್ಲಿ ಕಡಿಮೆಯಾಗಿರುತ್ತದೆ. ಆದುದರಿಂದ ಪ್ರತಿಯೊಂದು ಪ್ರದೇಶದ ಉಷ್ಣತೆಯ ಲಭ್ಯತೆಯು ಆಯಾ ಪ್ರದೇಶದ ಅಕ್ಷಾಂಶಕ್ಕೆ ಅನುಗುಣವಾಗಿರುತ್ತದೆ. ಆದುದರಿಂದ




ಚಿತ್ರ 12.1

ಪ್ರತಿಯೊಂದು ಸ್ಥಳದ ಅಕ್ಷಾಂಶ ಸ್ಥಾನಕ್ಕನುಗುಣವಾಗಿ ಲಭಿಸುವ ಉಷ್ಣತೆ (ಚಿತ್ರ 12.1) ಅಲ್ಲದೆ ಸಮುದ್ರಮಟ್ಟದಿಂದ ಇರುವ ಎತ್ತರ, ಸಮುದ್ರ ಸಾಮೀಪ್ಯ ಮೊದಲಾದ ಘಟಕಗಳೂ ಸ್ಥಳೀಯ ಉಷ್ಣಾಂಶ ವ್ಯತ್ಯಾಸಗಳಿಗೆ ಕಾರಣವಾಗುತ್ತವೆ. ಅದು ಹೇಗೆಂದು ನೋಡುವ.

ಸಮುದ್ರ ಮಟ್ಟದಿಂದ ಎತ್ತರಕ್ಕೆ ಹೋದ ಹಾಗೆ ವಾತಾವರಣದ ಉಷ್ಣಾಂಶವು ಕಡಿಮೆಯಾಗುತ್ತಾ ಬರುತ್ತದೆ.

ಮುನ್ನಾರ್, ವಯನಾಡು ಮೊದಲಾದ ಉನ್ನತ ಪ್ರದೇಶಗಳಲ್ಲಿ ನಮಗೆ ಚಳಿಯ ಅನುಭವವು ಉಂಟಾಗುವುದು ಹೇಗೆಂದು ತಿಳಿಯಿತಲ್ಲವೇ?

ಹಗಲು ಹೊತ್ತಿನಲ್ಲಿ ಸಮುದ್ರದಿಂದ ನೆಲಭಾಗಕ್ಕೂ ರಾತ್ರಿ ಹೊತ್ತಿನಲ್ಲಿ ನೆಲದಿಂದ ಸಮುದ್ರ ಭಾಗಕ್ಕೂ ಬೀಸುವ ಗಾಳಿಯು ಕರಾವಳಿ ಪ್ರದೇಶಗಳ ಉಷ್ಣತೆಯನ್ನು ನಿಯಂತ್ರಿಸುತ್ತದೆ.

**ಉಷ್ಣತೆಯನ್ನು ಅಳತೆ ಮಾಡುವುದು ಹೇಗೆ?**

ಉಷ್ಣತಾ ಮಾಪಕ (Thermometer) ದ ಸಹಾಯದಿಂದ ವಾತಾವರಣದ ಉಷ್ಣತೆಯನ್ನು ಅಳತೆ ಮಾಡಲಾಗುತ್ತದೆ.

**ಸೌರ ಚೈತನ್ಯ**

ಸೌರ ಚೈತನ್ಯವು ಯಾವುದೇ ಅಡೆತಡೆಗಳಿಲ್ಲದೆ ಭೂಮಿಗೆ ಲಭಿಸುತ್ತದೆ. ಉಷ್ಣ ವಲಯದ ದೇಶವಾದ ಭಾರತದಲ್ಲಿ ಈ ಪರಂಪರಾಗತ ಚೈತನ್ಯದ ಉಪಯೋಗ ಸಾಧ್ಯತೆಯು ತುಂಬಾ ಹೆಚ್ಚು. ಸೋಲಾರ್ ಪ್ಯಾನೆಲ್‌ಗಳನ್ನು ಉಪಯೋಗಿಸಿ ಸೂರ್ಯಪ್ರಕಾಶವನ್ನು ವಿದ್ಯುತ್ ಚೈತನ್ಯವಾಗಿ ಬದಲಾಯಿಸುವ ತಂತ್ರಜ್ಞಾನದ ಉಪಯೋಗ ಹೆಚ್ಚಿಸುವುದರೊಂದಿಗೆ ಚೈತನ್ಯದ ಕೊರತೆಯ ಸಮಸ್ಯೆಗೆ ಬಹುದೊಡ್ಡ ಪರಿಹಾರವಾಗಬಹುದು.






ಚಿತ್ರ 12.2 ಉಷ್ಣತಾಮಾಪಕ

(ಚಿತ್ರ 12.2) ಇದು ಡಿಗ್ರಿ ಸೆಲ್ಸಿಯಸ್ ($^0$C), ಡಿಗ್ರಿ ಫೆರನ್‌ಹೀಟ್ ($^0$F) ಎಂಬೀ ಮಾನಗಳಲ್ಲಿ ಸೂಚಿಸಲಾಗುತ್ತದೆ.

ಒಂದು ಉಷ್ಣತಾ ಮಾಪಕದ ಸಹಾಯದಿಂದ ನಿಮಗೆ ವಾತಾವರಣದ ಉಷ್ಣತೆಯನ್ನು ಅಳತೆ ಮಾಡಬಹುದು. ಎಲ್ಲಾ ದಿನಗಳಲ್ಲೂ ನಿರ್ದಿಷ್ಟ ಸಮಯದಲ್ಲಿ ವಾತಾವರಣದ ಉಷ್ಣತೆಯನ್ನು ಅಳತೆ ಮಾಡಿ ತರಗತಿ ಕೋಣೆಯಲ್ಲಿ ಪ್ರದರ್ಶಿಸುವಿರಲ್ಲವೆ.

ಪ್ರತಿಯೊಂದು ಪ್ರದೇಶದ ಉಷ್ಣತೆಯಲ್ಲಿನ ಏರುಪೇರುಗಳು ವಾತಾವರಣದ ವಿದ್ಯಮಾನಗಳಿಗೆ ಹೇಗೆ ಕಾರಣವಾಗುತ್ತವೆ ಎಂಬುದನ್ನು ನೋಡುವ.

## ಉಷ್ಣತೆ ಹಾಗೂ ವಾಯುವಿನ ಚಲನೆ

ಎಲ್ಲಾ ವಸ್ತುಗಳಿಗೂ ಭಾರವಿರುವಂತೆ ವಾಯುವಿಗೂ ಭಾರವಿದೆ. ವಾತಾವರಣದ ವಾಯುವು ಭೂಮಿಯ ಮೇಲ್ಮೈಯ ಮೇಲೆ ಹಾಕುವ ಭಾರವನ್ನು ವಾತಾವರಣದ ಒತ್ತಡ (Atmospheric Pressure) ಎನ್ನುತ್ತೇವೆ.

ವಾಯುಭಾರ ಮಾಪಕ (Barometer) ಎಂಬುದು ವಾತಾವರಣದ ಒತ್ತಡವನ್ನು ಅಳೆಯಲು ಉಪಯೋಗಿಸುವ ಉಪಕರಣವಾಗಿದೆ (ಚಿತ್ರ 12.3). ಹೆಕ್ಟೋಪಾಸ್ಕಲ್, ಮಿಲ್ಲೀಬಾರ್ ಎಂಬೀ ಮಾನಗಳಲ್ಲಿ ವಾತಾವರಣದ ಒತ್ತಡವನ್ನು ಅಳೆಯುತ್ತಾರೆ.




ಚಿತ್ರ 12.3 ಒತ್ತಡ ಮಾಪಕ

ಗಾಳಿ ಬೀಸುವಾಗ ನಾವು ವಾಯುವಿನ ಇರುವಿಕೆಯನ್ನು ತಿಳಿಯಬಹುದು. ಹಾಗಾದರೆ ವಾತಾವರಣದಲ್ಲಿ ವಾಯುವಿನ ಚಲನೆಯು ಹೇಗೆ ಉಂಟಾಗುತ್ತದೆ ಎಂಬುದನ್ನು ನೋಡುವ. ವಾತಾವರಣದ ವಾಯು ಬಿಸಿಯಾದಾಗ ಸಾಂದ್ರತೆ ಕಡಿಮೆಯಾಗಿ ವಿಕಾಸಗೊಂಡು ಮೇಲಕ್ಕೆ ಏರುತ್ತದೆ. ವಾಯುವಿನ ಸಾಂದ್ರತೆ ಕಡಿಮೆಯಾಗುವುದರಿಂದ ಆ ಪ್ರದೇಶದ ವಾಯುವಿನ ಒತ್ತಡವೂ ಕಡಿಮೆಯಾಗುತ್ತದೆ. ಆಗ ವಾಯುವಿನ ಒತ್ತಡ ಅಧಿಕವಿರುವ ಪ್ರದೇಶದಿಂದ ಒತ್ತಡ ಕಡಿಮೆ ಇರುವ ಪ್ರದೇಶಗಳಿಗೆ ವಾಯು ಚಲಿಸುತ್ತದೆ. ವಾಯುವಿನ ಈ ರೀತಿಯಲ್ಲಿರುವ ಚಲನೆಯನ್ನು ಮಾರುತ (wind) ಎನ್ನುವರು.

ನಮಗೆ ಹಿತಕರವಾದ ಮಂದ ಮಾರುತಗಳೂ ತುಂಬಾ ನಾಶನಷ್ಟಗಳನ್ನು ಉಂಟು ಮಾಡುವ ಬಿರುಗಾಳಿಗಳೂ ಭೂಮಿಯಲ್ಲಿ ಅನುಭವಕ್ಕೆ ಬರುತ್ತವೆ.

### ಗಾಳಿಯಂತ್ರಗಳು

ವೇಗವಾಗಿಯೂ ನಿರಂತರವಾಗಿಯೂ ಗಾಳಿ ಬೀಸುವ ಪ್ರದೇಶಗಳಲ್ಲಿ ಗಾಳಿಯಂತ್ರಗಳನ್ನು ಸ್ಥಾಪಿಸಿ ವಿದ್ಯುತ್ತನ್ನು ಉತ್ಪಾದಿಸಬಹುದು. ಈ ಪರಂಪರಾಗತ ಚೈತನ್ಯದ ಮೂಲವನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿದಲ್ಲಿ ಹೆಚ್ಚುತ್ತಿರುವ ಇಂಧನ ಕೊರತೆಯನ್ನು ಸ್ವಲ್ಪ ಪ್ರಮಾಣದಲ್ಲಿ ನೀಗಿಸಬಹುದು. ಇಡುಕ್ಕಿ ಜಿಲ್ಲೆಯ ರಾಮಕ್ಕಲ್‌ಮೇಡ್, ಪಾಲಕ್ಕಾಡ್ ಜಿಲ್ಲೆಯ ಕಂಜಿಕ್ಕೋಡ್ ಮೊದಲಾದ ಸ್ಥಳಗಳಲ್ಲಿ ಗಾಳಿಯಂತ್ರಗಳನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ.





ಚಿತ್ರ 12.4
ಅನಿಮೋಮೀಟರ್

ಅನಿಮೋಮೀಟರ್ ಎಂಬುದು ಗಾಳಿಯ ವೇಗವನ್ನು ಅಳೆಯುವ ಉಪಕರಣವಾಗಿದೆ (ಚಿತ್ರ 12.4). ವಿಂಡ್‌ವೇಯ್ನ್ (ಮಾರುತ ದಿಕ್ಸೂಚಿ) (ಚಿತ್ರ 12.5) ಗಾಳಿಯ ದಿಕ್ಕನ್ನು ಸೂಚಿಸುವ ಉಪಕರಣವಾಗಿದೆ.



ಚಿತ್ರ 12.5
ವಿಂಡ್‌ವೇಯ್ನ್

## ಉಷ್ಣತೆ ಹಾಗೂ ವಾತಾವರಣದ ಆರ್ದ್ರತೆ



ಚಿತ್ರ 12.6

ಚಿತ್ರ 12.6ನ್ನು ಗಮನಿಸಿರಿ. ನೀರು ಕುದಿಯುವಾಗ ಅದು ನೀರಾವಿಯಾಗಿ ಮೇಲೆ ಹೋಗುವುದನ್ನು ಕಾಣುವಿರಲ್ಲವೇ? ಇದೇ ರೀತಿ ಭೂಮಿಯ ಮೇಲ್ಮೈಯಲ್ಲಿರುವ ನೀರು ಬಿಸಿಯಾದಾಗ ನೀರಾವಿಯಾಗಿ ವಾತಾವರಣವನ್ನು ಸೇರುತ್ತದೆ.

ವಾತಾವರಣದ ವಾಯುವಿನಲ್ಲಿ ಅಡಕವಾಗಿರುವ ನೀರಾವಿ ಅಥವಾ ತೇವಾಂಶವೇ ಆರ್ದ್ರತೆ (Humidity) ಯಾಗಿದೆ. ವಾತಾವರಣದ ಉಷ್ಣತೆ, ಭೂಮಿಯಲ್ಲಿನ ಜಲಲಭ್ಯತೆ ಮೊದಲಾದ ಘಟಕಗಳು ಒಂದು ಪ್ರದೇಶದ ಆರ್ದ್ರತೆಯ ಮೇಲೆ ಪ್ರಭಾವ ಬೀರುತ್ತವೆ.

ಆರ್ದ್ರತೆಯನ್ನು ಅಳೆಯಲು ಆರ್ದ್ರತಾ ಮಾಪಕ (Hygrometer) ಎಂಬ ಉಪಕರಣವನ್ನು ಉಪಯೋಗಿಸಲಾಗುತ್ತದೆ (ಚಿತ್ರ 12.7).





ಚಿತ್ರ 12.7
ಆರ್ದ್ರತಾ ಮಾಪಕ

ಆವಿಯಾಗಿ ವಾತಾವರಣವನ್ನು ಸೇರುವ ನೀರು ಅನಂತರ ಏನಾಗುತ್ತದೆಯೆಂದು ನೋಡುವ.



ಚಿತ್ರ 12.8

ಒಂದು ಗಾಜಿನ ಲೋಟದಲ್ಲಿ ಮಂಜುಗಡ್ಡೆಯ ತುಂಡುಗಳನ್ನು ತುಂಬಿಸಿರಿ (ಚಿತ್ರ 12.8). ಲೋಟದ ಹೊರ ಭಾಗದಲ್ಲಿ ಚಿಕ್ಕ ನೀರಿನ ಹನಿಗಳು ಅಂಟಿರುವುದು ಕಂಡಿರಲ್ಲವೇ? ಲೋಟವು ಮತ್ತಷ್ಟು ತಣ್ಣಗಾದಾಗ ಈ ನೀರಿನ ಹನಿಗಳ ಗಾತ್ರವು ದೊಡ್ಡದಾಗುತ್ತದೆ ಹಾಗೂ ಅದು ಒಟ್ಟಾಗಿ ಕೆಳಭಾಗಕ್ಕೆ ಹರಿಯಲು ಆರಂಭಿಸುತ್ತದೆ. ಈ ನೀರಿನ ಹನಿಗಳು ಎಲ್ಲಿಂದ ಬಂದವು?

ವಾತಾವರಣದ ವಾಯುವಿನಲ್ಲಿ ಅಡಕವಾಗಿರುವ ನೀರಾವಿ ಲೋಟದ ತಂಪಾದ ಹೊರ ಭಾಗಕ್ಕೆ ತಾಗಿ ತಣಿದಾಗ ಅದು ನೀರಿನ ಹನಿಗಳಾಗಿ ಮಾರ್ಪಟ್ಟು ಅಲ್ಲಿ ಸಂಗ್ರಹವಾಗುತ್ತದೆ. ನೀರಾವಿಯು ತಣಿದು ಜಲಕಣಗಳಾಗಿ ಮಾರ್ಪಡುವ ಈ ಪ್ರಕ್ರಿಯೆಯನ್ನು ಘನೀಕರಣ(Condensation) ಎನ್ನುವರು. ಭೂಮಿಯಿಂದ ವಾತಾವರಣಕ್ಕೆ ತಲುಪುವ ನೀರಾವಿಯು ಘನರೂಪ ಹೊಂದಿ ಚಿಕ್ಕ ನೀರಿನ ಹನಿಗಳಾಗಿ ಮಾರ್ಪಡುತ್ತವೆ. ವಾತಾವರಣದ ಉಷ್ಣಾಂಶವು ಕಡಿಮೆಯಾಗುವಾಗ ಘನೀಕರಣ ಪ್ರಕ್ರಿಯೆಯು ಬಹಳ ವೇಗವಾಗಿ ನಡೆಯುತ್ತದೆ. ವಾತಾವರಣವನ್ನು ಸೇರಿಕೊಂಡಿರುವ ಚಿಕ್ಕ ಧೂಳಿನ ಕಣಗಳನ್ನು (Aerosoles) ಕೇಂದ್ರವಾಗಿರಿಸಿ ನೀರಾವಿಯು ಘನೀಕರಿಸಲ್ಪಡುತ್ತದೆ. ಈ ನೀರ ಹನಿಗಳು ಒಟ್ಟು ಸೇರಿ ಮೋಡಗಳು (Clouds) ರೂಪುಗೊಳ್ಳುತ್ತವೆ (ಚಿತ್ರ 12.9).



ಚಿತ್ರ 12.9 ಮೋಡಗಳು

ಆಕಾಶವನ್ನು ವೀಕ್ಷಿಸಿ ವಿವಿಧ ಆಕೃತಿಯಲ್ಲಿರುವ ಮೋಡಗಳನ್ನು ಗುರುತಿಸಲು ಪ್ರಯತ್ನಿಸಿರಿ.



ಚಿತ್ರ 12.10
ದಟ್ಟಮಂಜು

ವಾತಾವರಣದಲ್ಲಿರುವ ನೀರಾವಿ ಘನೀಕರಿಸುವುದರೊಂದಿಗೆ ಮೋಡಗಳು ಮಾತ್ರವಲ್ಲ ದಟ್ಟಮಂಜು, ತುಷಾರ ಮೊದಲಾದವುಗಳು ರೂಪುಗೊಳ್ಳುತ್ತವೆ. ಕಣಿವೆ ಪ್ರದೇಶಗಳಲ್ಲೂ, ಜಲಾಶಯಗಳ ಮೇಲೂ ಹೊಗೆಯ ಹಾಗೆ ಸೂಕ್ಷ್ಮ ನೀರಿನ ಹನಿಗಳು ತಂಗಿ ನಿಂತಿರುವುದನ್ನು ನೀವು ಕಂಡಿರುವಿರಲ್ಲವೇ? ನೀರಾವಿಯು ಘನೀಕರಣಗೊಂಡು ಈ ರೀತಿ ತಂಗಿ ನಿಲ್ಲುವ ಸ್ಥಿತಿಯನ್ನು ದಟ್ಟಮಂಜು (Fog) ಎಂದು ಕರೆಯುತ್ತಾರೆ (ಚಿತ್ರ 12.10).

ತುಂಬಾ ಚಳಿ ಇರುವ ಮುಂಜಾವಿನಲ್ಲಿ ಹುಲ್ಲುಗಳಲ್ಲೂ ಇತರ ತಂಪಗಿನ ಮೇಲ್ಮೈಗಳಲ್ಲೂ ನೀರಿನ ಹನಿಗಳು ನಿಂತಿರುವುದನ್ನು ನೀವು ಕಂಡಿರುವಿರಲ್ಲವೇ? ಇದುವೇ ತುಷಾರ (Dew) (ಚಿತ್ರ 12.11).



ಚಿತ್ರ 12.11
ತುಷಾರ

ಮಂಜುಗಡ್ಡೆ ತುಂಡುಗಳನ್ನು ಇಟ್ಟಿರುವ ಲೋಟದ ಹೊರಭಾಗದಲ್ಲಿ ನೀರಿನ ಕಣಗಳ ಗಾತ್ರ ದೊಡ್ಡದಾಗುತ್ತಾ ಮುಂದುವರಿದು ಕೆಳಕ್ಕೆ ಹರಿಯುವುದನ್ನು ನೀವು ಗಮನಿಸಿದ್ದೀರಲ್ಲವೇ. ಘನೀಕರಣ ಪ್ರಕ್ರಿಯೆ ಹೆಚ್ಚಾದಾಗ ನೀರಿನ ಹನಿಗಳ ಗಾತ್ರವೂ ಭಾರವೂ ಹೆಚ್ಚಾಗುವುದರಿಂದ ಭೂಮಿಯ ಗುರುತ್ವಾಕರ್ಷಣ ಬಲದ ಪ್ರಭಾವಕ್ಕೆ ಒಳಗಾಗಿ ಕೆಳಭಾಗಕ್ಕೆ ಚಲಿಸುತ್ತದೆ. ಇದೇ ರೀತಿ ಮೋಡಗಳಲ್ಲಿರುವ ನೀರಿನ ಹನಿಗಳ ಗಾತ್ರವು ಹೆಚ್ಚಾದಾಗ ವಾತಾವರಣದಲ್ಲಿ ತಂಗಿನಿಲ್ಲಲು ಸಾಧ್ಯವಾಗದೆ ಅವು ಭೂಮಿಗೆ ಬೀಳುತ್ತವೆ. ಈ ಪ್ರಕ್ರಿಯೆಯೇ ವರ್ಷಪಾತ (Precipitation) ಎಂದು ಕರೆಯಲ್ಪಡುತ್ತದೆ. ವಾತಾವರಣದ ಉಷ್ಣಾಂಶದ ವ್ಯತ್ಯಾಸಗಳು ವಿವಿಧ ರೀತಿಯ ವರ್ಷಪಾತಕ್ಕೆ ಕಾರಣವಾಗುತ್ತದೆ (ಚಿತ್ರ 12.12).

ವರ್ಷಪಾತ

| ಮಳೆ | ಹಿಮಪಾತ | ಆಲಿಕಲ್ಲು ಮಳೆ |
|---|---|---|
| ನೀರಿನ ಹನಿಗಳ ರೂಪದಲ್ಲಿರುವ ವರ್ಷಪಾತ | ಚಿಕ್ಕ ಹಿಮಕಣಗಳಿಂದ ಕೂಡಿದ ವರ್ಷಪಾತ | ಮಂಜುಗಡ್ಡೆಯ ರೂಪದಲ್ಲಿರುವ ವರ್ಷಪಾತ |





ಚಿತ್ರ 12.12 ವರ್ಷಪಾತದ ವಿವಿಧ ರೂಪಗಳು

ಮಳೆಯನ್ನು ಅಳತೆ ಮಾಡಲು ಉಪಯೋಗಿಸುವ ಉಪಕರಣವನ್ನು ಮಳೆಮಾಪಕ (Rain guage) ಎನ್ನುವರು (ಚಿತ್ರ 12.13). ಸೆಂಟಿಮೀಟರ್, ಇಂಚು ಎಂಬೀ ಮಾನಗಳಲ್ಲಿ ಮಳೆಯನ್ನು ಅಳತೆ ಮಾಡಲಾಗುತ್ತದೆ.

ಸೌರಶಕ್ತಿಯ ವಿತರಣೆಯ ವ್ಯತ್ಯಾಸವು ಒತ್ತಡ ವ್ಯತ್ಯಾಸಗಳು, ಮಾರುತಗಳು, ಆರ್ದ್ರತೆ, ಘನೀಕರಣ, ವರ್ಷಪಾತ ಮೊದಲಾದ ವಾತಾವರಣದ ವಿದ್ಯಮಾನಗಳಿಗೆ ಕಾರಣವಾಗಿದೆ ಎಂಬುದನ್ನು ನೀವು ತಿಳಿದುಕೊಂಡಿರಲ್ಲವೆ.



(ಚಿತ್ರ 12.13)
ಮಳೆಮಾಪಕ

## ಹವಾಮಾನ ಮತ್ತು ಹವಾಗುಣ

ಒಂದು ನಿಶ್ಚಿತ ಕಾಲದಲ್ಲಿ ಒಂದು ಪ್ರದೇಶದಲ್ಲಿ ಅನುಭವಕ್ಕೆ ಬರುವ ವಾತಾವರಣದ ಸ್ಥಿತಿಯೆ ಹವಾಮಾನ (Weather). ಕಳೆದ ಹಲವು ವರ್ಷಗಳಲ್ಲಿ ಒಂದು ಪ್ರದೇಶದಲ್ಲಿ ಅನುಭವಕ್ಕೆ ಬಂದ ಹವಾಮಾನದ ಸರಾಸರಿಯೇ ಹವಾಗುಣ (Climate).

ಭೂಮಿಯಲ್ಲಿ ಮಾನವನು ನಡೆಸುವ ಅನೇಕ ಚಟುವಟಿಕೆಗಳು ಹವಾಗುಣದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತವೆ. ಕಲ್ಲಿದ್ದಲು, ಪೆಟ್ರೋಲಿಯಂನಂತಹ ಅವಶಿಷ್ಟ ಇಂಧನಗಳ ಅಮಿತ ಉಪಯೋಗದ ಮೂಲಕ ವಾತಾವರಣದಲ್ಲಿ ಹೆಚ್ಚುತ್ತಿರುವ ಕಾರ್ಬನ್ ಡೈ ಓಕ್ಸೈಡ್, ಕಾರ್ಬನ್ ಮೋನೋಕ್ಸೈಡ್ ಮೊದಲಾದ ಅನಿಲಗಳು ವಾತಾವರಣದ ಸರಾಸರಿ ಉಷ್ಣತೆಯ ಹೆಚ್ಚಳಕ್ಕೆ ಕಾರಣವಾಗುತ್ತದೆ ಎಂಬುದು ಅಧ್ಯಯನಗಳಿಂದ ತಿಳಿದು ಬರುತ್ತದೆ. ಅವಶಿಷ್ಟ ಇಂಧನಗಳ ಬದಲಾಗಿ ಸೌರ

ಚೈತನ್ಯ, ಗಾಳಿಯಿಂದ ವಿದ್ಯುತ್ ಮೊದಲಾದ ಪರಂಪರಾಗತ ಇಂಧನ ಮೂಲಗಳ ಉಪಯೋಗವು ಈ ಸಮಸ್ಯೆಗೆ ಒಂದು ಪರಿಹಾರವಾಗಿದೆ.

ಕೆಳಗೆ ನೀಡಿರುವುದು ವಾತಾವರಣದ ಉಷ್ಣತೆಯ ಹೆಚ್ಚಳಕ್ಕೆ ಕಾರಣವಾಗುವ ಅನಿಲಗಳ ಮೂಲಗಳನ್ನು ಸೂಚಿಸುವ ಚಿತ್ರಗಳಾಗಿವೆ (ಚಿತ್ರ 12.14).



ಚಿತ್ರ 12.14

ಈ ರೀತಿಯ ಹೆಚ್ಚಿನ ಚಿತ್ರಗಳನ್ನು ಸಂಗ್ರಹಿಸಿ ಒಂದು ಭಿತ್ತಿ ಪತ್ರಿಕೆಯನ್ನು ತಯಾರಿಸುವಿರಲ್ಲವೆ. ಹವಾಗುಣ ಬದಲಾವಣೆಗಳಿಗೆ ಕಾರಣವಾಗುವ ಮಾನವನ ವಿವಿಧ ಚಟುವಟಿಕೆಗಳ ಕುರಿತು ವಾಚನಾ ಸಾಮಗ್ರಿಗಳಿಂದ ಮಾಹಿತಿಗಳನ್ನು ಸಂಗ್ರಹಿಸಿ ಒಂದು ಸೆಮಿನಾರ್ ಪೇಪರ್ ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.

ಹವಾಗುಣದಲ್ಲಿ ಉಂಟಾಗುವ ಚಿಕ್ಕ ಬದಲಾವಣೆಯು ಕೂಡ ಜೀವ ಜಾಲಗಳ ಉಳಿವಿಗೆ ಬೆದರಿಕೆಯಾಗಿದೆ. ಹವಾಗುಣ ಬದಲಾವಣೆಯ ಪರಿಣಾಮವಾಗಿ ಹಲವು ಜೀವಜಾಲಗಳ ವಂಶನಾಶವಾದುದರ ಕುರಿತು ನೀವು ಕೇಳಿರಬಹುದಲ್ಲವೆ. ಮಾನವ ಸಮೂಹಕ್ಕೂ ಈ ದುರ್ಗತಿ ಉಂಟಾಗದ ಹಾಗೆ ವಾತಾವರಣದ ಸಮತೋಲನವನ್ನು ಕಾಪಾಡಬೇಕಾದುದು ನಮ್ಮೆಲ್ಲರ ಕರ್ತವ್ಯವಾಗಿದೆ.



## ಕ್ರೋಡೀಕರಣ

- ನಮ್ಮ ಪ್ರಧಾನ ಚೈತನ್ಯದ ಮೂಲವಾದ ಸೂರ್ಯನಿಂದ ಸೌರಕಿರಣ ರೂಪದಲ್ಲಿ ಭೂಮಿಗೆ ತಲುಪುವ ಸೌರಚೈತನ್ಯವು ಭೂಮೇಲ್ಮೈಯನ್ನು ಬಿಸಿ ಮಾಡುತ್ತದೆ.
- ಬಿಸಿಯಾದ ಭೂ ಮೇಲ್ಮೈಯಿಂದ ವಿವಿಧ ಪ್ರಕ್ರಿಯೆಗಳ ಮೂಲಕ ವಾತಾವರಣಕ್ಕೆ ಉಷ್ಣತೆಯು ವ್ಯಾಪಿಸುತ್ತದೆ.
- ವಾತಾವರಣದ ಉಷ್ಣತೆಯು ಎಲ್ಲಾ ಕಡೆಗಳಲ್ಲೂ ಒಂದೇ ರೀತಿಯಾಗಿರುವುದಿಲ್ಲ.
- ವಾತಾವರಣದ ಉಷ್ಣತೆಯ ಏರಿಳಿತಗಳು ಒತ್ತಡದ ವ್ಯತ್ಯಾಸ, ಮಾರುತ, ಆರ್ದ್ರತೆ, ಘನೀಕರಣ, ವರ್ಷಪಾತ ಮೊದಲಾದ ವಾತಾವರಣದ ವಿದ್ಯಮಾನಗಳಿಗೆ ಕಾರಣವಾಗುತ್ತದೆ.
- ದೀರ್ಘಕಾಲದಲ್ಲಿ ಹವಾಮಾನದ ಸರಾಸರಿಯು ಹವಾಗುಣವಾಗಿದೆ.
- ಮಾನವನ ವಿವಿಧ ಚಟುವಟಿಕೆಗಳು ಹವಾಗುಣದ ಮೇಲೆ ದುಷ್ಪರಿಣಾಮವನ್ನು ಬೀರುತ್ತವೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಭೂಮಿಯ ಚೈತನ್ಯದ ಮೂಲ ಸೂರ್ಯನಾಗಿದ್ದಾನೆ ಎಂದು ತಿಳಿದುಕೊಳ್ಳುತ್ತಾರೆ.
- ವಾತಾವರಣದ ಉಷ್ಣತೆಯ ಏರಿಳಿತಗಳಿಗಿರುವ ಕಾರಣಗಳನ್ನು ಅರಿತುಕೊಳ್ಳುತ್ತಾರೆ.
- ಉಷ್ಣಾಂಶ ವ್ಯತ್ಯಾಸವು ವಾತಾವರಣದ ವಿದ್ಯಮಾನಗಳಿಗೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ವಿಶ್ಲೇಷಿಸುತ್ತಾರೆ.
- ಉಷ್ಣತೆ, ಒತ್ತಡ, ವಾಯುವಿನ ಚಲನೆಗಳೊಳಗಣ ಪರಸ್ಪರ ಸಂಬಂಧಗಳನ್ನು ಚಿತ್ರೀಕರಿಸುತ್ತಾರೆ.
- ವಾತಾವರಣದಲ್ಲಿ ನೀರಾವಿಯಿದೆಯೆಂಬುದನ್ನು ತಿಳಿಯಲು ಹಾಗೂ ಘನೀಕರಣ ಪ್ರಕ್ರಿಯೆಯನ್ನು ತಿಳಿಯಲು ಲಘು ಪ್ರಯೋಗಗಳನ್ನು ನಡೆಸುತ್ತಾರೆ.
- ಹವಾಮಾನ ಹಾಗೂ ಹವಾಗುಣಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳುತ್ತಾರೆ.
- ವಾತಾವರಣದ ಸಮತೋಲನದ ಅವಶ್ಯಕತೆಯನ್ನು ಅರಿತುಕೊಳ್ಳುವುದು ಹಾಗೂ ಪರಿಸರ ಸಂರಕ್ಷಣೆಯ ಚಟುವಟಿಕೆಗಳಲ್ಲಿ ಭಾಗಿಗಳಾಗುತ್ತಾರೆ.

## ಮೌಲ್ಯನಿರ್ಣಯ ಮಾಡುವ

1. ಸೂರ್ಯ ಪ್ರಕಾಶವು ಭೂಮಿಗೆ ನಿರಂತರವಾಗಿ ಲಭಿಸುತ್ತಿದ್ದರೂ ಭೂಮಿಯ ಮೇಲ್ಮೈಉಷ್ಣತೆಯು ಕ್ರಮಾನುಗತವಾಗಿ ಹೆಚ್ಚುವುದಿಲ್ಲ. ಇದಕ್ಕೆ ಕಾರಣಗಳೇನು?
2. ಮೋಡ ಕವಿದ ವಾತಾವರಣದ ದಿವಸಗಳಲ್ಲಿ ಉಷ್ಣಾಂಶವು ಹೆಚ್ಚಲು ಕಾರಣವೇನು?
3. ಕೆಳಗೆ ನೀಡಿರುವ ವಾತಾವರಣದ ವಿದ್ಯಮಾನಗಳಿಗೆ ಉಷ್ಣತೆಯೊಂದಿಗೆ ಇರುವ ಸಂಬಂಧಗಳೇನು?
   - ಮಾರುತಗಳು
   - ಆರ್ದ್ರತೆ
4. ವಾತಾವರಣದ ಉಷ್ಣತೆ ಅಧಿಕವಾಗಲು ಕಾರಣವಾಗುವ ಮಾನವ ಚಟುವಟಿಕೆಗಳಿಗೆ ಉದಾಹರಣೆಗಳನ್ನು ಕಂಡು ಹಿಡಿಯಿರಿ.

## ಮುಂದುವರಿದ ಚಟುವಟಿಕೆಗಳು


- ಸಮಾಜ ವಿಜ್ಞಾನ ಪ್ರಯೋಗಾಲಯದಲ್ಲಿರುವ ಉಷ್ಣತಾಮಾಪಕವನ್ನು ಉಪಯೋಗಿಸಿ ಎಲ್ಲಾ ದಿವಸಗಳಲ್ಲೂ ಒಂದು ನಿಶ್ಚಿತ ಸಮಯದಲ್ಲಿ ವಾತಾವರಣದ ಉಷ್ಣತೆಯನ್ನು ಅಳೆದು ಪಟ್ಟಿಮಾಡಿರಿ.
- ಉಷ್ಣತಾಮಾಪಕ, ಒತ್ತಡಮಾಪಕ ಎಂಬಿವುಗಳನ್ನು ಉಪಯೋಗಿಸಿ ವಿವಿಧ ಸಮಯಗಳ ಉಷ್ಣತೆ, ಒತ್ತಡಗಳನ್ನು ಅಳೆದು ಪಟ್ಟಿ ಮಾಡಿರಿ. ಪಟ್ಟಿಯನ್ನು ವಿಶ್ಲೇಷಣೆ ಮಾಡಿ ಉಷ್ಣತೆ ಮತ್ತು ಒತ್ತಡಗಳ ನಡುವಣ ಸಂಬಂಧವನ್ನು ಕಂಡುಹಿಡಿಯಿರಿ.
- ಸಮಾಜ ವಿಜ್ಞಾನ ಅಧ್ಯಾಪಕರ ಸಹಾಯದಿಂದ ಮಳೆಮಾಪಕವೊಂದನ್ನು ತಯಾರಿಸಿರಿ. ಮುಂದಿನ ಮಳೆಗಾಲದಲ್ಲಿ ಅದನ್ನು ಉಪಯೋಗಿಸಿ ಒಂದು ದಿನ ಲಭಿಸಿದ ಮಳೆಯನ್ನು ಅಳತೆ ಮಾಡಿರಿ.
- ನಿಮ್ಮ ಕಲಿಕಾ ಪ್ರವಾಸದ ಭಾಗವಾಗಿ ಹವಾಮಾನ ನಿರೀಕ್ಷಣಾ ಕೇಂದ್ರವನ್ನು ಸಂದರ್ಶಿಸಿ ಅಲ್ಲಿನ ವಿವಿಧ ಉಪಕರಣಗಳು ಹಾಗೂ ಅವುಗಳ ಕಾರ್ಯವೈಖರಿಯನ್ನು ತಿಳಿದುಕೊಳ್ಳಿರಿ.




# 13 ಭಾರತದೊಂದಿಗೆ...

ವರ್ಷದ ಹೆಚ್ಚಿನ ದಿನಗಳೂ ಹಿಮದಿಂದ ಆವೃತವಾದ ದುರ್ಗಮವಾದ ಪರ್ವತ ಶ್ರೇಣಿಗಳು, ದೊಡ್ಡ ನದಿಗಳು, ಹಗಲು $50^{\circ}$ ಸೆಲ್ಸಿಯಸ್‌ಗಿಂತಲೂ ಹೆಚ್ಚು ಉಷ್ಣತೆ ಅನುಭವಕ್ಕೆ ಬರುವ ಮರುಭೂಮಿ, ಜಗತ್ತಿನಲ್ಲೇ ಅತ್ಯಧಿಕ ಮಳೆ ಬೀಳುವ ಪ್ರದೇಶ........ ಭೂ ಪ್ರಕೃತಿ ಹವಾಮಾನಗಳಲ್ಲಿ ಮಾತ್ರವಲ್ಲ ಕೃಷಿಯಲ್ಲೂ ವೈವಿಧ್ಯವಿದೆ. ಗೋಧಿ, ಜೋಳ,ಕಬ್ಬು ಮುಂತಾದವುಗಳನ್ನು ಕೃಷಿ ಮಾಡುವ ವಿಶಾಲವಾದ ಬಯಲುಗಳು, ಏಲಕ್ಕಿ, ಕರಿಮೆಣಸು ಮೊದಲಾದ ಸುಗಂಧ ದ್ರವ್ಯಗಳು ಬೆಳೆಯುವ ಮಲೆನಾಡುಗಳು, ತೆಂಗು, ಭತ್ತ ಬೆಳೆಯುವ ವಿಶಾಲವಾದ ಕರಾವಳಿ. ನಾಡಿನ ಈ ವೈವಿಧ್ಯಗಳಿಗೆ ಹೊಂದಿಕೊಂಡು ಜೀವನವನ್ನು ಕ್ರಮೀಕರಿಸಿದ ವಿವಿಧ ಜನವರ್ಗಗಳು. ಅವರಲ್ಲಿ ವ್ಯತ್ಯಸ್ತ ಧಾರ್ಮಿಕ ನಂಬಿಕೆಗಳು , ಆಚಾರಗಳು, ಆಚರಣೆಗಳು, ಭಾಷೆ, ಆಹಾರ, ವೇಷಭೂಷಣಗಳು, ಮನೆ ಎಂಬಿವುಗಳಲ್ಲೂ ವೈವಿಧ್ಯಗಳಿವೆ. ಇವುಗಳೆಲ್ಲಾ ಸೇರಿದುದೇ ನಮ್ಮ ಭಾರತ. ಭಾರತದ ಭೂಪ್ರಕೃತಿ, ನದಿಗಳು, ಹವಾಮಾನ, ಮಣ್ಣು, ಸಸ್ಯ–ಜೀವಜಾಲಗಳು ಎಂಬಿವುಗಳಲ್ಲಿರುವ ವೈವಿಧ್ಯಗಳ ಕುರಿತು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಭಾರತವು ಭೂಮಧ್ಯರೇಖೆಯ ಉತ್ತರದಲ್ಲಿ $8^{0}4'$ ಉತ್ತರ ಅಕ್ಷಾಂಶದಿಂದ $37^{0}6'$ ಉತ್ತರ ಅಕ್ಷಾಂಶದ ವರೆಗೆ ಹಾಗೂ ಪೂರ್ವ ರೇಖಾಂಶ $68^{0}7'$ ರಿಂದ $97^{0}25'$ ರ ವರೆಗೆ ಚಾಚಿಕೊಂಡಿದೆ. 3.28 ದಶಲಕ್ಷ ಚದರ ಕಿಲೋಮೀಟರ್ ವಿಸ್ತಾರವುಳ್ಳ ಭಾರತಕ್ಕೆ ಗಾತ್ರದಲ್ಲಿ ಪ್ರಪಂಚದಲ್ಲೇ ಏಳನೇ ಸ್ಥಾನವಿದೆ.



## ಹಿಮಾಲಯದ ಮಡಿಲಲ್ಲಿ



ಚಿತ್ರವನ್ನು ನೋಡಿದಿರಲ್ಲವೆ. ಚಿತ್ರದಲ್ಲಿರುವುದು ಜಮ್ಮು ಕಾಶ್ಮೀರದ ಕುಗ್ರಾಮದಲ್ಲಿರುವ ಒಂದು ಮನೆಯಾಗಿದೆ. ಸ್ಥಳೀಯವಾಗಿ ಲಭ್ಯವಾಗುವ ಸಾಮಗ್ರಿಗಳನ್ನು ಉಪಯೋಗಿಸಿಕೊಂಡು ನಿರ್ಮಿಸಿರುವ ಈ ಮನೆಯ ಹಿನ್ನೆಲೆಯಲ್ಲಿ ನಾವು ಕಾಣುವುದು ಹಿಮಾವೃತವಾದ ಹಿಮಾಲಯದ ಪರ್ವತ ಸಾಲುಗಳಾಗಿವೆ.

ಜಮ್ಮು ಕಾಶ್ಮೀರದ ವಾಯುವ್ಯ ದಿಕ್ಕಿನಿಂದ ಭಾರತದ ಈಶಾನ್ಯ ರಾಜ್ಯವಾದ ಅರುಣಾಚಲ ಪ್ರದೇಶದ ವರೆಗೆ ವ್ಯಾಪಿಸಿರುವ ಈ ಪರ್ವತ ಶ್ರೇಣಿಗಳ ಉದ್ದವು ಸಮಾರು 2400 ಕಿ.ಮೀ. ಆಗಿದೆ. ಜಮ್ಮು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಸಿಕ್ಕಿಂ, ಅರುಣಾಚಲಪ್ರದೇಶ, ನಾಗಾಲ್ಯಾಂಡ್, ಮಣಿಪುರ, ಮೇಘಾಲಯ, ಮಿಜೋರಾಂ, ತ್ರಿಪುರ ಎಂಬೀ ರಾಜ್ಯಗಳ ಹೆಚ್ಚಿನ ಪ್ರದೇಶಗಳೂ ಈ ಪರ್ವತ ಶ್ರೇಣಿಯ ಭಾಗವಾಗಿದೆ. ಈ ಭೂಪ್ರಕೃತಿ ವಿಭಾಗವನ್ನು ಸಾಮಾನ್ಯವಾಗಿ ಉತ್ತರದ ಪರ್ವತ ವಲಯ ಎಂದು ಕರೆಯತ್ತಾರೆ.

ಹಿಮಾಲಯ ಪರ್ವತದ ಅತೀ ಎತ್ತರದ ಪ್ರದೇಶಗಳು ವರ್ಷವಿಡೀ ಹಿಮದಿಂದ ಮುಚ್ಚಿಕೊಂಡಿರುತ್ತವೆ. ಇಲ್ಲಿ ಸ್ಥಿರ ಜನವಾಸವಿಲ್ಲ. ಕಾಂಚನ ಜಂಗ, ನಂಗಪರ್ವತ ಮೊದಲಾದ ಉನ್ನತ ಶಿಖರಗಳು ಹಿಮಾಲಯ ಪರ್ವತ ಶ್ರೇಣಿಯ ಭಾಗವಾಗಿವೆ. ಎವರೆಸ್ಟ್ ಪರ್ವತವು ಈ ಶಿಖರ ಶ್ರೇಣಿಗಳಲ್ಲಿ ಅತ್ಯಧಿಕ ಎತ್ತರವಿರುವ ಶಿಖರವಾಗಿದೆ. ಇದು ನೇಪಾಳದಲ್ಲಿದೆ. ಸಿಂಧೂ, ಗಂಗಾ, ಬ್ರಹ್ಮಪುತ್ರ ಇತ್ಯಾದಿ ನದಿಗಳು ಹಿಮಾಲಯ ಪರ್ವತ ಶ್ರೇಣಿಗಳಿಂದ ಹುಟ್ಟಿ ಹರಿಯುವವುಗಳಾಗಿವೆ.



ಎವರೆಸ್ಟ್ ಶಿಖರ

ಹಿಮಾಲಯದ ಹಿಮಾವೃತ ಪರ್ವತ ಶ್ರೇಣಿಗಳ ಅತ್ಯಂತ ದಕ್ಷಿಣ ಭಾಗದಲ್ಲಿ ಚಳಿಯ ತೀವ್ರತೆಯು ಕಡಿಮೆ. ಪ್ರಕೃತಿ ರಮಣೀಯವಾದ ಪ್ರದೇಶದಲ್ಲಿ ಸಿಮ್ಲಾ, ಡಾರ್ಜಿಲಿಂಗ್, ಕುಲು, ಮನಾಲಿ ಮೊದಲಾದ ಹಲವಾರು ಸುಖವಾಸ ಕೇಂದ್ರಗಳಿವೆ.


ಆಲೂಗಡ್ಡೆ, ಬಾರ್ಲಿ, ಕುಂಕುಮ ಕೇಸರಿ ಅಲ್ಲದೆ ಹಲವು ವಿಧದ ಹೂವುಗಳು ಇಲ್ಲಿನ ಪ್ರಮುಖ ಕೃಷಿ ಬೆಳೆಗಳಾಗಿವೆ.



ಹಿಮಾಚಲ ಪ್ರದೇಶದ ಸೇಬಿನ ತೋಟ

ಸೇಬು, ಕಿತ್ತಳೆ ಮೊದಲಾದ ಹಣ್ಣುಹಂಪಲುಗಳು, ಚಾ ಸೊಪ್ಪು ಇತ್ಯಾದಿಗಳನ್ನೂ ಇಲ್ಲಿ ಬೆಳೆಸುತ್ತಾರೆ.

ಹಿಮಾಲಯ ಪರ್ವತ ಶ್ರೇಣಿಯ ಅತ್ಯಂತ ದಕ್ಷಿಣ ಭಾಗದಲ್ಲಿರುವ ಬೆಟ್ಟಗಳಿಗೆ ಎತ್ತರವು ಕಡಿಮೆ. ಈ ಪ್ರದೇಶದಲ್ಲಿ ವಿವಿಧ ರೀತಿಯ ಬೆಳೆಗಳನ್ನು ಕೃಷಿ ಮಾಡುತ್ತಾರೆ. ಇದು ಉತ್ತರದ ಪರ್ವತ ವಲಯದಲ್ಲಿ ಅತ್ಯಧಿಕ ಜನಸಾಂದ್ರತೆಯನ್ನು ಹೊಂದಿದ ಪ್ರದೇಶವಾಗಿದೆ. ಈ ಕಣಿವೆ ಪ್ರದೇಶವು ಹಿಮ ಆವೃತವಾದ ಹಿಮಾಲಯ ಪರ್ವತಗಳಿಂದ ಉದ್ಭವಿಸುವ ನದಿಗಳು ಹೊತ್ತು ತಂದ ಹೊಗೆ, ಕೆಸರು, ಉರುಟು ಕಲ್ಲು ಎಂಬಿವುಗಳ ನಿಕ್ಷೇಪಗಳಿಂದ ತುಂಬಿಕೊಂಡಿದೆ.




ಜಮ್ಮು ಕಾಶ್ಮೀರದ ಕುಂಕುಮ ಕೇಸರಿ ಕೃಷಿ

## ಉತ್ತರದ ಪರ್ವತ ವಲಯದ ಪ್ರಾಧಾನ್ಯ

ಉತ್ತರದ ಪರ್ವತ ಪ್ರದೇಶವು ನಮಗೆ ಹೇಗೆಲ್ಲಾ ಪ್ರಯೋಜನಕಾರಿಯಾಗಿದೆ ಎಂದು ತಿಳಿಯಬೇಡವೇ?

- ಹವಾಮಾನದ ಮೇಲೆ ಪ್ರಭಾವ ಬೀರುತ್ತದೆ.

ಚಳಿಗಾಲದಲ್ಲಿ ಮಧ್ಯ ಏಷ್ಯಾದಿಂದ ಬೀಸುವ ಶೀತ ಗಾಳಿಯನ್ನು ಭಾರತಕ್ಕೆ ಪ್ರವೇಶಿಸದಂತೆ ತಡೆದು ನಮ್ಮನ್ನು ಸಂರಕ್ಷಿಸುತ್ತದೆ. ಉತ್ತರದ ಪರ್ವತ ಶಿಖರಗಳು ಮುನ್ಸೂನ್ ಮಳೆಗಾಳಿಗಳನ್ನು ತಡೆದು ಉತ್ತರ ಭಾರತದ ಎಲ್ಲಾ ಭಾಗಗಳಲ್ಲೂ ಮಳೆ ಬೀಳುವಂತೆ ಮಾಡುತ್ತದೆ.



ಈ ಪರ್ವತಗಳು ಇಲ್ಲದೆ ಇರುತ್ತಿದ್ದರೆ?

- ಪ್ರಕೃತಿದತ್ತವಾದ ಕೋಟೆ

  ಪುರಾತನ ಕಾಲದಿಂದಲೇ ವಿದೇಶೀಯರ ಆಕ್ರಮಣಗಳಿಂದ ಒಂದು ಹಂತದ ವರೆಗೆ ನಮ್ಮನ್ನು ಸಂರಕ್ಷಿಸಿದ್ದು ಈ ಪರ್ವತ ಶಿಖರಗಳಾಗಿವೆ.

- ನದಿಗಳ ಉಗಮ ಸ್ಥಾನ

  ಈ ಪರ್ವತ ಶ್ರೇಣಿಯಿಂದ ಸಿಂಧೂ, ಗಂಗಾ, ಬ್ರಹ್ಮಪುತ್ರ ಎಂಬೀ ನದಿಗಳು ಹಾಗೂ ಅವುಗಳ ಹಲವಾರು ಉಪನದಿಗಳು ಉದ್ಭವಿಸುತ್ತವೆ.

  ಉತ್ತರದ ಪರ್ವತ ವಲಯವು ಇನ್ನೂ ಯಾವೆಲ್ಲಾ ರೀತಿಯಲ್ಲಿ ಪ್ರಯೋಜನಕಾರಿಯಾಗಿದೆ ಎಂದು ಕಂಡುಕೊಳ್ಳಲು ಪ್ರಯತ್ನಿಸಿರಿ.

## ಉತ್ತರ ಭಾರತದ ಸಮತಲ


ಚಿತ್ರವನ್ನು ಗಮನಿಸಿರಿ.



ಚಿತ್ರದಲ್ಲಿರುವುದು ಉತ್ತರ ಭಾರತದ ವಿಶಾಲವಾದ ಸಮತಲ ಭೂಪ್ರಕೃತಿಯಾಗಿದೆ.

ರಾಜಸ್ಥಾನ, ಪಂಜಾಬು, ಹರಿಯಾಣ, ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳದ ಹೆಚ್ಚಿನ ಭಾಗಗಳನ್ನು ಈ ಸಮತಲವು ಒಳಗೊಂಡಿದೆ. ಈ ಸಮತಲವು ಸಿಂಧೂ, ಗಂಗಾ, ಬ್ರಹ್ಮಪುತ್ರ– ಎಂಬೀ ನದಿಗಳೂ ಅವುಗಳ ಉಪನದಿಗಳೂ ಹೊತ್ತು ತಂದ ಮೆಕ್ಕಲು ಮಣ್ಣು ನಿಕ್ಷೇಪಗೊಂಡು ರೂಪುಗೊಂಡದ್ದಾಗಿದೆ. ಈ ಸಮತಲವನ್ನು ಉತ್ತರದ ಮಹಾಬಯಲು, ಸಿಂಧೂ–ಗಂಗಾ–ಬ್ರಹ್ಮಪುತ್ರ ಮಹಾಬಯಲು ಎಂಬೀ ಹೆಸರುಗಳಿಂದಲೂ ಕರೆಯುತ್ತಾರೆ. ಇದು ಭಾರತದಲ್ಲಿ ಅತ್ಯಧಿಕ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶವಾಗಿದೆ.

ಉತ್ತರದ ಮಹಾಬಯಲು ಪ್ರದೇಶದಲ್ಲಿ ಗೋಧಿ, ಜೋಳ, ಭತ್ತ, ಕಬ್ಬು, ಹತ್ತಿ, ದ್ವಿದಳ ಧಾನ್ಯಗಳಲ್ಲದೆ ಹಲವು ವಿವಿಧ ಬೆಳೆಗಳನ್ನು ಕೃಷಿ ಮಾಡುತ್ತಾರೆ.



ಉತ್ತರದ ಸಮತಲವು ಭಾರತದ ಆರ್ಥಿಕ ವ್ಯವಸ್ಥೆಯ ಬೆನ್ನೆಲುಬು ಎಂದು ಕರೆಯಲ್ಪಡುತ್ತದೆ. ಇದಕ್ಕೆ ಕಾರಣಗಳೇನಾಗಿರಬಹುದು?

ಉಳಿದ ಪ್ರಾಕೃತಿಕ ವಿಭಾಗಗಳಿಗೆ ಹೋಲಿಸುವಾಗ ರೈಲ್ವೇ, ರಸ್ತೆ ಸಾರಿಗೆ, ಕಾಲುವೆಗಳು ಈ ಭೂಪ್ರಕೃತಿ ವಿಭಾಗದಲ್ಲಿ ಅತೀ ಹೆಚ್ಚು ಅಭಿವೃದ್ಧಿ ಹೊಂದಿವೆ. ಕಾರಣಗಳೇನು?

ಈ ಬಯಲಿನ ಪಶ್ಚಿಮ ಭಾಗದಲ್ಲಿ ಮಳೆ ತೀರಾ ಕಡಿಮೆ ಪ್ರಮಾಣದಲ್ಲಿ ಲಭಿಸುವುದರಿಂದ ಭಾರತದ ವಾಯುವ್ಯ ಭಾಗದಲ್ಲಿರುವ ರಾಜಸ್ಥಾನದ ಹೆಚ್ಚಿನ ಪ್ರದೇಶಗಳೂ ಮರುಭೂಮಿಗಳಾಗಿವೆ. ಮರುಸ್ಥಲಿ ಎಂದು ಕರೆಯಲ್ಪಡುವ ಈ ಪ್ರದೇಶದಲ್ಲಿ ಜನವಾಸ ಕಡಿಮೆ. ಕಾರಣವೇನಾಗಿರಬಹುದು?

ಸಮೀಪದ ರಾಜ್ಯಗಳಲ್ಲಿ ಗೋಧಿ, ಜೋಳ ಎಂಬಿವುಗಳನ್ನು ವ್ಯಾಪಕವಾಗಿ ಕೃಷಿ ಮಾಡುವಾಗ ರಾಜಸ್ಥಾನದಲ್ಲಿ ಜೋವರ್, ಬಾಜ್ರ ಮುಂತಾದವುಗಳನ್ನು ಪ್ರಧಾನವಾಗಿ ಕೃಷಿ ಮಾಡುತ್ತಾರೆ. ಈ ಬೆಳೆಗಳಿಗೆ ನೀರು ಕಡಿಮೆ ಪ್ರಮಾಣದಲ್ಲಿ ಸಾಕಾಗುತ್ತದೆ.

### ರಾಜಸ್ಥಾನದ ಒಂದು ನೋಟ

ಥಾರ್ ಮರುಭೂಮಿಯು ಭಾರತದ ವಾಯುವ್ಯದಲ್ಲಿರುವ ರಾಜಸ್ಥಾನದ ಹೆಚ್ಚಿನ ಪ್ರದೇಶಗಳನ್ನು ಒಳಗೊಂಡಿರುವ ಉಷ್ಣ ಮರುಭೂಮಿಯಾಗಿದೆ. ಮಳೆ ತುಂಬಾ ವಿರಳವಾಗಿರುವುದರಿಂದ ಮುಳ್ಳಿನ ಗಿಡಗಳೂ ಕುರುಚಲು ಕಾಡುಗಳೂ ಇಲ್ಲಿ ಪ್ರಾಕೃತಿಕ ಸಸ್ಯವರ್ಗಗಳಾಗಿ ಸ್ವಾಭಾವಿಕವಾಗಿ ಬೆಳೆಯುತ್ತವೆ. ವಿಶಾಲವಾದ ಮರಳಿನ ಸಮತಲಗಳೂ ಮರಳ ದಿಣ್ಣೆಗಳೂ ಇಲ್ಲಿನ ವಿಶೇಷತೆಗಳಾಗಿವೆ. ರಾಜಸ್ಥಾನದ ಜನರು ಶುದ್ಧ ನೀರಿನ ಮೌಲ್ಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ರಾಜಸ್ಥಾನದಲ್ಲಿ ಒಂದು ವರ್ಷ ಲಭಿಸುವ ಮಳೆಯ ಪ್ರಮಾಣವು ಕೇರಳದಲ್ಲಿ ಒಂದೋ ಎರಡೋ ದಿನಗಳಲ್ಲಿ ಲಭಿಸುವ ಮಳೆಯ ಪ್ರಮಾಣಕ್ಕೆ ಸಮಾನವಾಗಿದೆ. ಅಲ್ಲಿನ ಗ್ರಾಮೀಣರು ಕುಡಿಯುವ ನೀರಿಗಾಗಿ ಕಿಲೋಮೀಟರ್‌ಗಳಷ್ಟು ದೂರ ಹೋಗಬೇಕಾಗುತ್ತದೆ.



### ಪೀಠಭೂಮಿಯ ಮೂಲಕ...

ಉತ್ತರದ ಪರ್ವತ ವಲಯದಿಂದ ಬಯಲು ಪ್ರದೇಶವನ್ನು ದಾಟಿ ದಕ್ಷಿಣ ಭಾರತದೆಡೆಗೆ ಪ್ರಯಾಣ ಮಾಡಿದರೆ ವಿಶಾಲವಾದ ಒಂದು ಪೀಠಭೂಮಿ ಪ್ರದೇಶವನ್ನು ತಲುಪಬಹುದು. ಮಧ್ಯಪ್ರದೇಶ, ಝಾರ್ಖಂಡ್, ಛತ್ತೀಸ್‌ಘಡ್ ಎಂಬೀ ರಾಜ್ಯಗಳೂ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ, ಒಡಿಶಾ, ಪಶ್ಚಿಮಬಂಗಾಳ ಎಂಬೀ ಪ್ರಾಂತ್ಯಗಳ ಕೆಲವು ಪ್ರದೇಶಗಳೂ ಒಳಗೊಂಡ ಈ ಪೀಠಭೂಮಿ ಪ್ರದೇಶವನ್ನು ಪರ್ಯಾಯ ದ್ವೀಪದ ಪೀಠಭೂಮಿ ಎಂದು ಕರೆಯುತ್ತಾರೆ. ದಖ್ಖಣ ಪೀಠಭೂಮಿಯು ಪರ್ಯಾಯ ದ್ವೀಪದ ಪೀಠಭೂಮಿಯ ಭಾಗವಾಗಿದೆ. ಈ ಪೀಠಭೂಮಿಯ ಹೆಚ್ಚಿನ ಭಾಗಗಳು ಹಿಂದೆ ಯಾವಾಗಲೋ ಹರಿದ ಲಾವಾರಸ ತಣಿದು ಗಟ್ಟಿಯಾಗಿ ರೂಪುಗೊಂಡುದಾಗಿದೆ. ಇದು ಹುಡಿಯಾಗಿ ಉಂಟಾದ ಕಪ್ಪುಮಣ್ಣು ಹತ್ತಿ ಕೃಷಿಗೆ ಹೆಚ್ಚು ಯೋಗ್ಯವಾಗಿದೆ.

ವಿಂಧ್ಯಾ, ಸಾತ್ಪುರ, ಆರಾವಳಿ, ಪಶ್ಚಿಮಘಟ್ಟ, ಪೂರ್ವಘಟ್ಟ ಎಂಬೀ ಪರ್ವತ ಸಾಲುಗಳು ಪರ್ಯಾಯ ದ್ವೀಪ ಪೀಠಭೂಮಿಯ ಭಾಗಗಳಾಗಿವೆ. ಕೇರಳದ ಆನೆಮುಡಿಯು ಈ ವಲಯದ ಅತೀ ಎತ್ತರದ ಭೂಭಾಗವಾಗಿದೆ.

ಹತ್ತಿ, ಧಾನ್ಯ ವರ್ಗಗಳು, ನೆಲಕಡಲೆ, ಕಬ್ಬು, ಜೋಳ, ರಾಗಿ, ಮೆಣಸು ಎಂಬಿವು ಪೀಠಭೂಮಿ ಪ್ರದೇಶದ ಪ್ರಧಾನ ಕೃಷಿ ಬೆಳೆಗಳಾಗಿವೆ. ಕಲ್ಲಿದ್ದಲು, ಕಬ್ಬಿಣದ ಅದಿರು, ಮ್ಯಾಂಗನೀಸ್, ಬೋಕ್ಸೈಟ್, ಸುಣ್ಣದಕಲ್ಲು ಮುಂತಾದ ಖನಿಜ ನಿಕ್ಷೇಪಗಳಿರುವ ಈ ಪೀಠಭೂಮಿಯಲ್ಲಿ ಖನನವೂ ಖನಿಜ ಆಧಾರಿತ ಕೈಗಾರಿಕೆಗಳೂ ಪ್ರಧಾನ ಉದ್ಯೋಗ ವಲಯಗಳಾಗಿವೆ.



ಪೀಠಭೂಮಿಯ ಒಂದು ಕಲ್ಲಿದ್ದಲಿನ ಗನಿ

ಗೋದಾವರಿ, ಮಹಾನದಿ, ಕೃಷ್ಣ, ಕಾವೇರಿ, ನರ್ಮದಾ ಮತ್ತು ತಪತಿ ನದಿಗಳು ಪರ್ಯಾಯ ದ್ವೀಪ ಪೀಠಭೂಮಿಯಿಂದ ಉದ್ಭವಿಸುತ್ತವೆ.

## ಕರಾವಳಿ ಪ್ರದೇಶಗಳೆಡೆಗೆ

ಪೀಠಭೂಮಿಯಿಂದ ಉದ್ಭವಿಸಿ ಹರಿಯುವ ನದಿಗಳು ಮುಂದುವರಿದು ಕರಾವಳಿ ಬಯಲುಗಳೆಡೆಗೆ ತಲುಪುತ್ತವೆ. ಭಾರತಕ್ಕೆ ಸುಮಾರು 6100 ಕಿ.ಮೀ. ಉದ್ದದ ಕರಾವಳಿ ಇದೆ. ಸಮಾಜವಿಜ್ಞಾನ ಪ್ರಯೋಗಶಾಲೆಯಲ್ಲಿರುವ ಭಾರತದ ಭೌಗೋಳಿಕ ಭೂಪಟವನ್ನು ವೀಕ್ಷಿಸಿರಿ. ಬಂಗಾಳ ಕೊಲ್ಲಿಯೊಂದಿಗೆ ಸೇರಿರುವ ಪೂರ್ವ ತೀರವನ್ನೂ ಅರಬೀ ಸಮುದ್ರದೊಂದಿಗೆ ಸೇರಿರುವ ಪಶ್ಚಿಮ ತೀರವನ್ನು ನೋಡಿದಿರಲ್ಲವೆ? ಪಶ್ಚಿಮ ಕರಾವಳಿ ಪ್ರದೇಶವು ಪೂರ್ವ ಕರಾವಳಿ ಪ್ರದೇಶಕ್ಕಿಂತಲೂ ಅಗಲ ಕಿರಿದಾಗಿದೆ. ಪಶ್ಚಿಮ ಕರಾವಳಿಯ ಭಾಗವಾದ ಕೇರಳದಲ್ಲಿ ಹಲವಾರು ಹಿನ್ನೀರುಗಳಿವೆ. ಭತ್ತ, ತೆಂಗು ಎಂಬಿವುಗಳು ಪಶ್ಚಿಮ ಕರಾವಳಿಯ ಪ್ರಧಾನ ಕೃಷಿ ಬೆಳೆಗಳಾಗಿವೆ.

ಪೂರ್ವ ಕರಾವಳಿಯ ಬಯಲಿನಲ್ಲಿರುವ ಕಾವೇರಿ, ಕೃಷ್ಣ, ಗೋದಾವರಿ ಮತ್ತು ಮಹಾನದಿಗಳ ತೀರಗಳಲ್ಲಿ ಹೇರಳವಾಗಿ ಭತ್ತ ಕೃಷಿಯನ್ನು ಮಾಡುತ್ತಾರೆ. ಮೀನುಗಾರಿಕೆಯು ಕರಾವಳಿ ಜನರ ಪ್ರಧಾನ ಕಸುಬು ಆಗಿದೆ.

## ಸಮುದ್ರದಲ್ಲಿನ ಹಸಿರು ದ್ವೀಪಗಳು

ದ್ವೀಪಗಳು ಸಮುದ್ರದಿಂದ ಸುತ್ತುವರಿದ ಸಣ್ಣ ಭೂಭಾಗಗಳಾಗಿವೆ. ಅರಬೀ ಸಮುದ್ರದಲ್ಲಿನ ಲಕ್ಷದ್ವೀಪ ಸಮೂಹವನ್ನು ಮತ್ತು ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ್ ನಿಕೋಬಾರ್ ದ್ವೀಪ ಸಮೂಹಗಳನ್ನು ನೀವು ಭೂಪಟಗಳಲ್ಲಿ ನೋಡಿರಬಹುದು. ಲಕ್ಷದ್ವೀಪದಲ್ಲಿ ಹೆಚ್ಚಿನವು ಹವಳ ದ್ವೀಪಗಳಾಗಿವೆ. ಅಲ್ಪ ಪ್ರಮಾಣದಲ್ಲಿ ಮಾತ್ರವೇ ಕೃಷಿ ಮಾಡುವ ಲಕ್ಷದ್ವೀಪದ ಜನರು ಸಮುದ್ರವನ್ನು ಆಶ್ರಯಿಸಿ ಜೀವಿಸುತ್ತಾರೆ. ಅಂಡಮಾನ್ ನಿಕೋಬಾರಿನ ಹೆಚ್ಚಿನ ದ್ವೀಪಗಳಲ್ಲಿಯೂ ನಿಬಿಡವಾದ ವನಗಳಿವೆ.

### ಹವಳ ದ್ವೀಪಗಳು


ಉಷ್ಣ ವಲಯದ ಸಮುದ್ರಗಳಲ್ಲಿ ಕಾಣಲ್ಪಡುವ 'ಕೋರಲ್ ಪೊಲಿಪ್ಸ್' ಎಂಬ ಸಣ್ಣ ಸಮುದ್ರ ಜೀವಿಗಳ ಕ್ಯಾಲ್ಸಿಯಂಯುಕ್ತ ಅವಶೇಷಗಳು ಸಂಗ್ರಹಗೊಂಡು ಹವಳದ ಬಂಡೆಗಳು ರೂಪುಗೊಳ್ಳುತ್ತವೆ. ವಿವಿಧ ಆಕೃತಿಯಲ್ಲಿ ಕಂಡುಬರುವ ಈ ಹವಳ ಬಂಡೆಗಳ ಮೇಲೆ ದ್ವೀಪಗಳು ರೂಪುಗೊಳ್ಳುತ್ತವೆ. ಭಾರತದ ಭಾಗವಾದ ಲಕ್ಷದ್ವೀಪ, ಅಂಡಮಾನ್ ನಿಕೋಬಾರಿನ ಕೆಲವು ದ್ವೀಪಗಳು ಈ ರೀತಿ ರೂಪುಗೊಂಡಿವೆ. ಹವಳದ ಬಂಡೆಗಳು ಪ್ರಬಲವಾದ ಅಲೆಗಳಿಂದ ಈ ದ್ವೀಪಗಳನ್ನು ಸಂರಕ್ಷಿಸುತ್ತವೆ.



ಭಾರತದ ಪ್ರಾಕೃತಿಕ ವಿಭಾಗಗಳ ವಿಶೇಷತೆಗಳ ಕುರಿತು ಈಗ ನೀವು ಸಾಮಾನ್ಯ ತಿಳುವಳಿಕೆಯನ್ನು ಗಳಿಸಿರಬಹುದು. ಭಾರತದ ಪ್ರಾಕೃತಿಕ ವಿಭಾಗಗಳನ್ನು ಕೆಳಗೆ ಕೊಡಲಾಗಿದೆ.

- ಉತ್ತರದ ಪರ್ವತ ವಲಯ
- ಉತ್ತರದ ಮಹಾಬಯಲು
- ಪರ್ಯಾಯ ದ್ವೀಪದ ಪೀಠಭೂಮಿ
- ಕರಾವಳಿ
- ದ್ವೀಪಗಳು

ಕೆಳಗೆ ಕೊಟ್ಟಿರುವ ಭೂಪಟದ (ಚಿತ್ರ 13.1) ಸಹಾಯದಿಂದ ಪ್ರಾಕೃತಿಕ ವಿಭಾಗಗಳನ್ನು ತಿಳಿದುಕೊಂಡು ಸೂಚಕವನ್ನು ಪೂರ್ತಿಗೊಳಿಸಿರಿ.





ಚಿತ್ರ 13.1

## ಭಾರತದ ನದಿಗಳು

ಭಾರತದ ಜನರು ಹಿಂದಿನ ಕಾಲದಿಂದಲೇ ತಮ್ಮ ವಾಸಕ್ಕಾಗಿ ನದೀ ತೀರಗಳನ್ನು ಆಯ್ಕೆ ಮಾಡಿಕೊಂಡಿದ್ದರು.

ಭಾರತದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸುವುದರಲ್ಲೂ ಕೃಷಿಯನ್ನು ಆಧಾರವಾಗಿರಿಸಿ ಒಂದು ಸಂಸ್ಕೃತಿಯು ರೂಪುಗೊಳ್ಳುವುದರಲ್ಲೂ ನದಿಗಳ ಪಾತ್ರ ಮಹತ್ತರವಾದುದು.

ನದಿಗಳ ಪ್ರಯೋಜನಗಳನ್ನು ನೀವು ಹಿಂದಿನ ಅಧ್ಯಾಯದಲ್ಲಿ ಕಲಿತಿರುವಿರಿ.



ಚಿತ್ರದಲ್ಲಿ ಕಾಣುವುದು ಗಂಗಾ ನದಿ ತೀರದಲ್ಲಿನ ವಾರಣಾಸಿಯ ದೃಶ್ಯ. ವಾರಣಾಸಿ ನಗರದ ರೂಪೀಕರಣದಲ್ಲಿ ಈ ನದಿಯು ಎಷ್ಟರ ಮಟ್ಟಿಗೆ ಪ್ರಭಾವ ಬೀರಿರಬಹುದು?


ತರಗತಿಯಲ್ಲಿ ಚರ್ಚಿಸಿರಿ.

ಸಿಂಧೂ, ಗಂಗಾ, ಬ್ರಹ್ಮಪುತ್ರ ಎಂಬೀ ನದಿಗಳು ಹಾಗೂ ಅವುಗಳ ಉಪನದಿಗಳು ಉತ್ತರ ಭಾರತದ ಪ್ರಧಾನ ಜಲಮೂಲಗಳಾಗಿವೆ. ಹಿಮಾಲಯದಿಂದ ಉದ್ಭವಿಸುವ ನದಿಗಳನ್ನು ಹಿಮಾಲಯದ ನದಿಗಳೆಂದು ಕರೆಯುತ್ತಾರೆ. ಹಿಮಾಲಯದ ಹಿಮದಿಂದಾವೃತವಾದ ಪ್ರದೇಶದಿಂದ ಉದ್ಭವಿಸುವುದರಿಂದಾಗಿ ಇವುಗಳು ಬೇಸಗೆಯಲ್ಲೂ ಜಲ ಸಮೃದ್ಧವಾಗಿರುತ್ತವೆ. ಹಿಮಾಲಯದ ನದಿಗಳು ಹೊತ್ತು ತರುವ ಮೆಕ್ಕಲು ಮಣ್ಣು ನಿಕ್ಷೇಪಗೊಂಡು ಉತ್ತರದ ಮಹಾಬಯಲು ರೂಪುಗೊಂಡಿದೆ. ಈ ನದಿಗಳು ಹರಿಯುವ ರಾಜ್ಯಗಳನ್ನು ಮತ್ತು ಸಂಗಮಿಸುವ ಸಮುದ್ರಗಳನ್ನು ಭೂಪಟ ನಿರೀಕ್ಷಿಸಿ ಕಂಡುಹಿಡಿಯಿರಿ.

ಪರ್ಯಾಯ ದ್ವೀಪದ ಪೀಠಭೂಮಿಯಿಂದ ಉದ್ಭವಿಸುವ ನದಿಗಳನ್ನು ಪರ್ಯಾಯ ದ್ವೀಪದ ನದಿಗಳು ಎಂಬುದಾಗಿ ಕರೆಯುತ್ತಾರೆ. ಗೋದಾವರಿ, ಮಹಾನದಿ, ಕೃಷ್ಣ, ಕಾವೇರಿ, ನರ್ಮದಾ, ತಪತಿ ಎಂಬಿವು ಪರ್ಯಾಯ ದ್ವೀಪದ ಪ್ರಧಾನ ನದಿಗಳಾಗಿವೆ. ಈ ನದಿಗಳು ಮಳೆಯನ್ನೇ ಆಶ್ರಯಿಸಿರುವುದರಿಂದಾಗಿ ಬೇಸಗೆ ಕಾಲದಲ್ಲಿ ಅವುಗಳಲ್ಲಿ ನೀರು ತುಂಬಾ ಕಡಿಮೆಯಾಗಿರುತ್ತದೆ.

ಭೂಪಟವನ್ನು ನಿರೀಕ್ಷಿಸಿ ಪರ್ಯಾಯ ದ್ವೀಪದ ನದಿಗಳನ್ನು ಅವುಗಳು ಸಂಗಮಿಸುವ ಸಮುದ್ರದ ಆಧಾರದಲ್ಲಿ ವರ್ಗೀಕರಿಸಿರಿ.


| ಅರಬೀ ಸಮುದ್ರದಲ್ಲಿ ಸಂಗಮಿಸುವವುಗಳು | ಬಂಗಾಳ ಕೊಲ್ಲಿಯಲ್ಲಿ ಸಂಗಮಿಸುವವುಗಳು |
|---|---|
| • | • |
| • | • |


ಭಾರತದ
ನದಿಗಳು
N
ಸಿಂಧೂ
ಲೂಣಿ
ಗಂಗಾ
ಬ್ರಹ್ಮಪುತ್ರ
ನರ್ಮದಾ
ತಪತಿ
ಗೋದಾವರಿ
ಕೃಷ್ಣ
ಕಾವೇರಿ
ಲಕ್ಷದ್ವೀಪ
ಅಂಡಮಾನ್ ನಿಕೋಬಾರ್ ದ್ವೀಪಗಳು

ಚಿತ್ರ 13.2

## ಭಾರತದ ಮಣ್ಣಿನ ವಿಧಗಳು

ಮಣ್ಣಿನ ಪ್ರಾಧಾನ್ಯದ ಕುರಿತು ಹಿಂದಿನ ಅಧ್ಯಾಯದಲ್ಲಿ ನೀವು ಕಲಿತಿರುವಿರಿ. ಭಾರತವನ್ನು ಒಂದು ಕೃಷಿ ಪ್ರಧಾನ ದೇಶವನ್ನಾಗಿ ಮಾಡುವುದರಲ್ಲಿ ಮಣ್ಣಿನ ವಿಧಗಳ ಪಾತ್ರವು ಮಹತ್ತರವಾದುದಾಗಿದೆ. ವೈವಿಧ್ಯದಿಂದ ಕೂಡಿದ ಮಣ್ಣಿನ ವಿಧಗಳು ವ್ಯತ್ಯಸ್ತ ಬೆಳೆಗಳ ಬೆಳವಣಿಗೆಗೆ ಸಹಾಯಕವಾಗಿವೆ. ಭೂಪಟ (ಚಿತ್ರ 13.3) ವನ್ನು ನಿರೀಕ್ಷಿಸಿ ಭಾರತದ ಪ್ರಧಾನ ಮಣ್ಣಿನ ವಿಧಗಳನ್ನು ತಿಳಿದುಕೊಳ್ಳಿರಿ.




ಚಿತ್ರ 13.3

ಭಾರತದಲ್ಲಿ ಕಂಡುಬರುವ ಪ್ರಧಾನ ಮಣ್ಣಿನ ವಿಧಗಳನ್ನು ಬರೆಯಿರಿ.

- ಮೆಕ್ಕಲು ಮಣ್ಣು
- 
- 
- 
- 

ಉತ್ತರದ ಮಹಾಬಯಲಿನಲ್ಲಿ ಮತ್ತು ಇತರ ನದೀದಡಗಳಲ್ಲಿರುವ ಮಣ್ಣಿನ ವಿಧಗಳಾದ ಮೆಕ್ಕಲು ಮಣ್ಣು ಅತೀ ಹೆಚ್ಚು ಫಲವತ್ತಾದುದಾಗಿದೆ. ಮೆಕ್ಕಲು ಮಣ್ಣು ತುಂಬಿರುವ ನಮ್ಮ ನದೀತೀರಗಳು ಹಿಂದಿನ ಕಾಲದಿಂದಲೂ ಸಮೃದ್ಧವಾದ ಕೃಷಿ ವಲಯವಾಗಿವೆ . ಪರ್ಯಾಯ ದ್ವೀಪದ ಪೀಠಭೂಮಿಯಲ್ಲಿನ ಕಪ್ಪುಮಣ್ಣು ಹತ್ತಿ, ಕಬ್ಬು ಮುಂತಾದ ಬೆಳಗಳ ಕೃಷಿಗೆ ಯೋಗ್ಯವಾಗಿದೆ. ಕೆಂಪು ಮಣ್ಣು ಮತ್ತು ಮುರಕಲ್ಲು ಮಣ್ಣು ಪೀಠಭೂಮಿ ಪ್ರದೇಶದ ಇತರ ಪ್ರಧಾನ ಮಣ್ಣಿನ ವಿಧಗಳಾಗಿವೆ.ಇವುಗಳು ಫಲವತ್ತತೆ ಕಡಿಮೆಯಾದರೂ ಗೊಬ್ಬರ ಹಾಕುವುದರ ಮೂಲಕ ಕೃಷಿಗೆ ಯೋಗ್ಯವಾಗುತ್ತದೆ. ರಾಜಸ್ಥಾನದ ಮರುಭೂಮಿ ಮಣ್ಣಿನಲ್ಲಿ ಜಲಾಂಶವು ಕಡಿಮೆಯಾಗಿರುವುದರಿಂದ ಅಲ್ಲಿ ಕೃಷಿ ಚಟುವಟಿಕೆಗಳಿಗೆ ನೀರಾವರಿ ವ್ಯವಸ್ಥೆಯು ಅತೀ ಅಗತ್ಯವಾಗಿದೆ. ನಿಬಿಡವಾದ ಕಾಡುಗಳಿರುವ ಪರ್ವತ ಪ್ರದೇಶದಲ್ಲಿನ ಮಣ್ಣನ್ನು ಪರ್ವತ ಮಣ್ಣು ಎನ್ನುವರು. ಈ ಮಣ್ಣಿನಲ್ಲಿ ಜೈವಿಕಾಂಶವು ಅಧಿಕವಾಗಿರುತ್ತದೆ.

## ಹವಾಮಾನ

ಭಾರತದ ಹವಾಮಾನವು ಹೆಚ್ಚಿನ ವೈವಿಧ್ಯದಿಂದೊಡಗೂಡಿದೆ.

ಜಗತ್ತಿನಲ್ಲೇ ಅತೀ ಹೆಚ್ಚು ಮಳೆ ಬೀಳುವ ಚಿರಾಪುಂಜಿಯು ಭಾರತದಲ್ಲಿದೆ. ಚಳಿಗಾಲದಲ್ಲಿ ಉಷ್ಣತೆಯು $0^{0}$ ಸೆಲ್ಸಿಯಸ್‌ಗೆ ಸಮೀಪ ಬಂದು ಚಳಿಯಿಂದ ನಡುಗುವ ದೆಹಲಿಯಲ್ಲಿ ಬೇಸಿಗೆಯಲ್ಲಿ $40^{0}$ ಸೆಲ್ಸಿಯಸ್‌ಗಿಂತಲೂ ಅಧಿಕ ಉಷ್ಣತೆಯು ಅನುಭವಕ್ಕೆ ಬರುತ್ತದೆ. ಕಾಶ್ಮೀರದ ಕಾರ್ಗಿಲ್, ದ್ರಾಸ್ ಎಂಬೆಡೆಗಳಲ್ಲಿ ಚಳಿಗಾಲದಲ್ಲಿ ಉಷ್ಣತೆಯು $-40^{0}$ ಸೆಲ್ಸಿಯಸ್ ವರೆಗೆ ಇಳಿಯುತ್ತದೆ. ಈ ರೀತಿಯ ವೈವಿಧ್ಯಗಳು ಇರುವುದರಿಂದ ಭಾರತದ ಹವಾಮಾನವನ್ನು ಉಷ್ಣ ವಲಯದ ಮನ್ಸೂನ್ ಹವಾಗುಣ ಎಂದು ಕರೆಯುತ್ತಾರೆ. ಭಾರತದಲ್ಲಿ ಸಾಮಾನ್ಯವಾಗಿ ಮೂರು ಕಾಲಗಳು ಅನುಭವಕ್ಕೆ ಬರುತ್ತವೆ.

- ಬೇಸಗೆ ಕಾಲ (Summer Season)
- ಚಳಿಗಾಲ (Winter Season)
- ಮಳೆಗಾಲ (Rainy Season)

## ಬೇಸಗೆ ಕಾಲ

ಮಾರ್ಚ್ ತಿಂಗಳಿನಿಂದ ಮೇ ತಿಂಗಳ ವರೆಗೆ ಭಾರತದಲ್ಲಿ ಬೇಸಗೆ ಕಾಲವು ಅನುಭವಕ್ಕೆ ಬರುತ್ತದೆ. ಈ ಸಮಯದಲ್ಲಿ ಉತ್ತರ ಭಾರತದಲ್ಲಿ ಅತ್ಯಧಿಕ ಉಷ್ಣವು ಅನುಭವಕ್ಕೆ ಬರುತ್ತದೆ. ದಕ್ಷಿಣ ಭಾರತದ ತೀರ ಪ್ರದೇಶಗಳಲ್ಲಿ ಸಮುದ್ರ ಹತ್ತಿರವಿರುವುದರಿಂದ ಅಧಿಕ ಉಷ್ಣತೆಯು ಅನುಭವಕ್ಕೆ ಬರುವುದಿಲ್ಲ. ಈ ಕಾಲದಲ್ಲಿ ಭಾರತದಲ್ಲಿ ಸಾಮಾನ್ಯವಾಗಿ ಜಲಕ್ಷಾಮವು ಅನುಭವಕ್ಕೆ ಬರುತ್ತದೆ. ಕೆಲವೆಡೆಗಳಲ್ಲಿ ವಿರಳವಾಗಿ ಬೇಸಗೆ ಮಳೆ ಬರುತ್ತದೆ.

## ಬರಗಾಲ ಎಂಬ ಪ್ರಕೃತಿ ದುರಂತ



ಮಳೆಯ ಅಭಾವ, ನೀರಿನ ದುರ್ಬಳಕೆ ಇತ್ಯಾದಿಗಳ ಪರಿಣಾಮವಾಗಿ ಜಲಕ್ಷಾಮವು ಅನುಭವಕ್ಕೆ ಬರುವ ಸನ್ನಿವೇಶವನ್ನು ಬರಗಾಲವೆನ್ನುವರು. ಭಾರತದಲ್ಲಿ ಸಾಮಾನ್ಯವಾಗಿ ಮೂರರಲ್ಲಿ ಒಂದು ಭಾಗವು ಬರಗಾಲ ಪೀಡಿತ ಪ್ರದೇಶವಾಗಿದೆ ಎಂದು ಕಂಡುಕೊಳ್ಳಲಾಗಿದೆ. ಬೆಳೆ ನಾಶ, ಶುದ್ಧಜಲದ ಕೊರತೆ ಮುಂತಾದವುಗಳಿಗೆ ಕಾರಣವಾಗುವ ಈ ಪ್ರಾಕೃತಿಕ ದುರಂತಗಳ ತೀವ್ರತೆಯನ್ನು ಕಡಿಮೆ ಮಾಡಲು ಏನೆಲ್ಲಾ ಮಾಡಬಹುದು ನೋಡಿರಿ.

- ಜಲ ಸಮೃದ್ಧವಾದ ನದಿಗಳನ್ನು ಬರಗಾಲ ಪ್ರದೇಶಗಳ ನದಿಗಳೊಂದಿಗೆ ಜೋಡಿಸಬಹುದು.
- ಬರಗಾಲವನ್ನು ಎದುರಿಸಬಲ್ಲ ಬೆಳೆಗಳನ್ನು ಕೃಷಿ ಮಾಡಬಹುದು.
- ಮಳೆ ಕೊಯ್ಲಿನ ವಿಧಾನಗಳನ್ನು ಜಾರಿಗೊಳಿಸಬಹುದು.

### ಚಳಿಗಾಲ

ಭಾರತದಲ್ಲಿ ಚಳಿಗಾಲವು ದಶಂಬರದಿಂದ ಫೆಬ್ರವರಿ ವರೆಗೆ ಅನುಭವಕ್ಕೆ ಬರುತ್ತದೆ. ಉತ್ತರ ಭಾರತದಲ್ಲಿ ಅತೀ ಶೈತ್ಯ ಅನುಭವಕ್ಕೆ ಬರುವ ಈ ಕಾಲದಲ್ಲಿ ಹಿಮಾಲಯ ಪರ್ವತ ಸಾಲುಗಳಲ್ಲಿ ಹಿಮ ಬೀಳುತ್ತದೆ. ಉತ್ತರ ಭಾರತದಲ್ಲಿ ಬೀಳುವ ದಟ್ಟವಾದ ಮಂಜು ಈ ಕಾಲದ ವಿಶೇಷತೆಯಾಗಿದೆ. ಸಾಮಾನ್ಯವಾಗಿ ಶುಷ್ಕ ಹವಾಮಾನವಿರುವ ಚಳಿಗಾಲದಲ್ಲಿ ಪಂಜಾಬ್ ಮತ್ತು ಸುತ್ತುಮುತ್ತಲಿನ ಪ್ರದೇಶಗಳಲ್ಲಿ ಮಳೆ ಬೀಳುತ್ತದೆ. ಇದು ಗೋಧಿ ಕೃಷಿಗೆ ಉತ್ತಮವಾಗಿದೆ. ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿ ಚಳಿಯ ತೀವ್ರತೆಯು ಕಡಿಮೆಯಾಗಿದೆ.




ಉತ್ತರಭಾರತದ ಚಳಿಗಾಲದ ಒಂದು ದೃಶ್ಯ

### ಮಳೆಗಾಲ

ಭಾರತದಲ್ಲಿ ಎರಡು ಮಳೆಗಾಲಗಳಿವೆ. ಇದರಲ್ಲಿ ಮೊದಲನೆಯದು ಜೂನ್‌ನಿಂದ ಸೆಪ್ಟಂಬರಿನ ವರೆಗೆ. ಹಿಂದೂ ಮಹಾಸಾಗರದಿಂದ ತೇವಾಂಶವನ್ನು ಹೊತ್ತು ತರುವ ಗಾಳಿಯನ್ನು ಪರ್ವತ ಸಾಲುಗಳು ತಡೆದು ನಿಲ್ಲಿಸುವುದರಿಂದಾಗಿ ಪಶ್ಚಿಮ ತೀರದಲ್ಲೂ ಈಶಾನ್ಯ ರಾಜ್ಯಗಳಲ್ಲೂ ಹಿಮಾಲಯದ ತಪ್ಪಲುಗಳಲ್ಲೂ ಧಾರಾಳ ಮಳೆ ಲಭಿಸುತ್ತದೆ. ನೈಋತ್ಯ ಮುನ್ಸೂನ್ ಕಾಲ ಎಂಬುದಾಗಿ ಹೇಳಲಾಗುವ ಈ ಕಾಲದಲ್ಲಿ ಭಾರತದಲ್ಲಿ ಅತೀ ಹೆಚ್ಚು ಮಳೆ ಲಭಿಸುತ್ತದೆ.

#### ಮಳೆ ನಿಲ್ಲದ ಚಿರಾಪುಂಜಿ

ಚಿರಾಪುಂಜಿಯು ಮೇಘಾಲಯದ ಖಾಸಿ ಗುಡ್ಡಗಳ ದಕ್ಷಿಣದ ಇಳಿಜಾರಿನಲ್ಲಿರುವ ಗ್ರಾಮವಾಗಿದೆ. ಜಗತ್ತಿನಲ್ಲೇ ಅತೀ ಹೆಚ್ಚು ಮಳೆ ಲಭಿಸುವ ಪ್ರದೇಶವೆಂಬುದಾಗಿ ಅಂಗೀಕರಿಸಿರುವ ಚಿರಾಪುಂಜಿಗೆ ಸೊಹರ ಎಂಬ ಹೆಸರು ಬಳಕೆಯಲ್ಲಿದೆ.



ಅಲ್ಪ ವಿರಾಮದ ನಂತರ ಒಕ್ಟೋಬರ್–ನವೆಂಬರ್ ತಿಂಗಳುಗಳು ಪುನಃ ಮಳೆಯ ಕಾಲವಾಗಿವೆ. ಈಶಾನ್ಯ ಮನ್ಸೂನ್ ಕಾಲವೆಂಬುದಾಗಿ ತಿಳಿಯಲ್ಪಡುವ ಈ ಸಮಯದಲ್ಲಿ ಭಾರತದ ಪೂರ್ವ ತೀರದಲ್ಲಿ ಅತೀ ಹೆಚ್ಚು ಮಳೆ ಬೀಳುತ್ತದೆ. ಪ್ರತ್ಯೇಕವಾಗಿ ತಮಿಳುನಾಡು, ಆಂಧ್ರ ಹಾಗೂ ಕೇರಳದ ತೀರಗಳಲ್ಲೂ ಈ ಮಳೆ ಲಭಿಸುತ್ತದೆ.

### ನೆರೆ – ಬೆದರಿಕೆಯೊಡ್ಡುವಾಗ

ದೇಶದ ವಿವಿಧ ಭಾಗಗಳಲ್ಲಿ ಮಳೆಗಾಲದಲ್ಲಿ ಉಂಟಾಗುವ ನೆರೆಯು ಕೃಷಿ ಸ್ಥಳಗಳಿಗೂ ಮಾನವನ ವಾಸಸ್ಥಳಗಳಿಗೂ ಬೆದರಿಕೆಯಾಗಿದೆ. ಮುನ್ಸೂನ್ ಕಾಲದಲ್ಲಿ ಸುರಿಯುವ ಅತಿವೃಷ್ಟಿ, ನದೀ ದಡಗಳನ್ನು ಸ್ವಾಧೀನ ಪಡಿಸಿ ಮನೆಗಳನ್ನು ನಿರ್ಮಿಸುವುದು, ಬಯಲುಗಳಿಗೆ ಮಣ್ಣು ತುಂಬಿಸುವುದು ಇತ್ಯಾದಿಗಳು ಭಾರತದಲ್ಲಿ ನೆರೆ ಹಾವಳಿ ಉಂಟುಮಾಡುವುದಕ್ಕಿರುವ ಕಾರಣಗಳಾಗಿವೆ. ಪ್ರಾಣಕ್ಕೂ ಸೊತ್ತಿಗೂ ಅಪಾರ ನಾಶವನ್ನುಂಟುಮಾಡುವ ಈ ಪ್ರಾಕೃತಿಕ ದುರಂತವನ್ನು ತಡೆಯಲು ಮತ್ತು ಇದರ ತೀವ್ರತೆಯನ್ನು ಕಡಿಮೆಗೊಳಿಸಲು ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

- ಅಣೆಕಟ್ಟುಗಳನ್ನು ನಿರ್ಮಿಸುವುದು
- ಕಾಡು ಬೆಳೆಸುವುದು
- ನದಿಗಳ ತೀರಗಳಲ್ಲಿ ದೊಡ್ಡ ಪ್ರಮಾಣದ ನಿರ್ಮಾಣ ಚಟುವಟಿಕೆಗಳನ್ನು ನಿರುತ್ಸಾಹಗೊಳಿಸುವುದು
- ನೆರೆ ಬಾಧಿತ ಪ್ರದೇಶಗಳಿಂದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸುವುದು.
- ತೀರ ಪ್ರದೇಶಗಳಲ್ಲಿ ಅಪಘಾತದ ಮುನ್ಸೂಚನೆ ಕೇಂದ್ರಗಳನ್ನು ಸ್ಥಾಪಿಸುವುದು.



## ನೈಸರ್ಗಿಕ ಸಸ್ಯಜಾಲಗಳು ಹಾಗೂ ಪ್ರಾಣಿ ವೈವಿಧ್ಯಗಳು

ಪಾಠಭಾಗದಲ್ಲಿ ಕೊಟ್ಟಿರುವ ಕಾಶ್ಮೀರದ ಒಂದು ಕುಗ್ರಾಮದಲ್ಲಿನ ಮನೆಯ ಹಿನ್ನೆಲೆಯಲ್ಲಿ ಕಾಣುವ ಮರಗಳ ವಿಶೇಷತೆಗಳನ್ನು ಗಮನಿಸಿದ್ದೀರಲ್ಲವೇ? ಇವುಗಳು ಸೂಜಿಮೊನೆ ಆಕೃತಿಯಲ್ಲಿವೆ. ಚಿತ್ರದಲ್ಲಿ ಕಾಣುವ ಮರಗಳನ್ನು ನಮ್ಮ ಊರಿನ ಮರಗಳ ಆಕೃತಿಯೊಂದಿಗೆ ಹೋಲಿಸಿರಿ.

ನೈಸರ್ಗಿಕ ಸಸ್ಯಜಾಲಗಳು ಒಂದು ಪ್ರದೇಶದ ಭೂಪ್ರಕೃತಿ, ಹವಾಮಾನ, ಮಣ್ಣಿನ ವಿಧ ಎಂಬೀ ಪ್ರಾಕೃತಿಕ ವಿಶೇಷತೆಗಳಿಗನುಸಾರವಾಗಿ ಅಲ್ಲಿ ಬೆಳೆಯುವ ಸ್ವಾಭಾವಿಕ ಸಸ್ಯಜಾಲಗಳಾಗಿವೆ. ಹವಾಗುಣಕ್ಕನುಸಾರವಾಗಿ ಪ್ರಾಣಿವರ್ಗಗಳಲ್ಲೂ ವೈವಿಧ್ಯಗಳನ್ನು ಕಾಣಬಹುದು.

ಭಾರತದಲ್ಲಿ ಕಂಡುಬರುವ ವಿವಿಧ ನೈಸರ್ಗಿಕ ಸಸ್ಯಜಾಲಗಳನ್ನು ಹಾಗೂ ಜೀವಜಾಲಗಳನ್ನು ಪರಿಚಯಿಸಿಕೊಳ್ಳೋಣ.

### ಉಷ್ಣವಲಯದ ನಿತ್ಯ ಹಸಿರು ವನಗಳು



ವಾರ್ಷಿಕ ಮಳೆಯ ಪ್ರಮಾಣ ತುಂಬಾ ಹೆಚ್ಚಿರುವ ಪಶ್ಚಿಮ ಘಟ್ಟದಲ್ಲೂ ಈಶಾನ್ಯ ರಾಜ್ಯಗಳಲ್ಲೂ ನಿತ್ಯ ಹಸಿರು ವನಗಳು ಕಂಡು ಬರುತ್ತವೆ. ಸಿಂಹ ಬಾಲದ ಮಂಗ, ಹಲವು ತರದ ಹಾವುಗಳು, ವಿವಿಧ ರೀತಿಯ ಪಟ್ಟದಿಗಳು, ಜಗತ್ತಿನಲ್ಲೇ ಅತೀ ದೊಡ್ಡ ಚಿಟ್ಟೆಯಾದ ಅಟ್ಲಸ್‌ಮೋತ್ (ನಿಶಾಶಲಭ)ಗಳಂತಹ ಹಲವು ವಿಧದ ಚಿಟ್ಟೆಗಳು ಈ ಕಾಡುಗಳಲ್ಲಿವೆ.

### ಎಲೆ ಉದುರಿಸುವ ಕಾಡುಗಳು

ನಿರ್ದಿಷ್ಟ ಕಾಲದಲ್ಲಿ ಮಾತ್ರವೇ ಮಳೆ ಲಭಿಸುವ ಪ್ರದೇಶಗಳಲ್ಲಿ ಎಲೆ ಉದುರಿಸುವ ಕಾಡುಗಳು ಕಂಡುಬರುತ್ತವೆ. ಭಾರತದ ಪರ್ಯಾಯ ದ್ವೀಪದ ಹೆಚ್ಚಿನ ಪ್ರದೇಶಗಳಲ್ಲಿ ಎಲೆ ಉದುರಿಸುವ ಕಾಡುಗಳೇ ಇರುವುದು. ಇವು ಹಲವು ಜಾತಿಯ ಜಿಂಕೆಗಳು, ಮೊಲ, ನವಿಲು, ಕೊಂಬುಕೊಕ್ಕಿನ ಪಕ್ಷಿ, ಅನೇಕ ವಿಧದ ಪಕ್ಷಿಗಳು, ಕಾಡುಕೋಣ, ಆನೆ, ಚಿರತೆ, ಹುಲಿ ಇತ್ಯಾದಿ ವಿವಿಧ ಜೀವಜಾಲಗಳು ಅತ್ಯಧಿಕವಾಗಿ ಕಂಡು ಬರುವ ವನಗಳಾಗಿವೆ.



### ಮುಳ್ಳುಗಿಡಗಳು ಮತ್ತು ಕುರುಚಲು ಕಾಡುಗಳು



ರಾಜಸ್ಥಾನದ ಮರುಭೂಮಿಯಲ್ಲೂ ಪರ್ಯಾಯ ದ್ವೀಪದ ಮಧ್ಯಭಾಗಗಳಲ್ಲೂ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿರುವುದರಿಂದ ಮುಳ್ಳಿನ ಗಿಡಗಳು, ಕುರುಚಲು ಗಿಡಗಳು ಅಲ್ಲಿ ಬೆಳೆಯುತ್ತವೆ. ಒಂಟೆ, ರಣಹದ್ದು, ವಿವಿಧ ಉರಗಗಳು ಈ ಒಣ ಪ್ರದೇಶಗಳಲ್ಲಿ ಕಂಡುಬರುತ್ತವೆ.

### ಕಾಂಡ್ಲಾ ಕಾಡುಗಳು

ಕಾಂಡ್ಲಾ ಕಾಡು ಉಪ್ಪಿನ ಅಂಶವಿರುವ ಮಣ್ಣಿನಲ್ಲಿ ಬೆಳೆಯುವ ವಿಶೇಷ ರೀತಿಯ ಸಸ್ಯಜಾಲವಾಗಿದೆ. ನದಿಮುಖಜ ಭೂಮಿ ಹಾಗೂ ಸಮುದ್ರ ತೀರಗಳಲ್ಲಿ ದಡ ಕುಸಿತವನ್ನು ಈ ಕಾಡುಗಳು ತಡೆಯುತ್ತದೆ. ಪಶ್ಚಿಮ ಬಂಗಾಳದ ಕಾಂಡ್ಲಾ ಕಾಡು ಬಂಗಾಳ ಚಿರತೆಯ ಆವಾಸಕೇಂದ್ರವಾಗಿದೆ. ಕಾಂಡ್ಲಾ ಕಾಡಿನ ಬೇರುಗಳ ವಿಶಿಷ್ಟ ರಚನೆಯು ಅನೇಕ ವಿಧದ ಮೀನುಗಳ ಪ್ರತ್ಯುತ್ಪಾದನಾ ಕೇಂದ್ರವಾಗಿದೆ.



### ಪರ್ವತ ಕಾಡುಗಳು



ಉನ್ನತ ಪ್ರದೇಶಗಳಲ್ಲಿ ಕಂಡುಬರುವ ಸೂಜಿ ಮೊನೆ ಮರಗಳು ಹಾಗೂ ಅತಿ ಶೈತ್ಯವಿರುವ ಪರ್ವತ ಪ್ರದೇಶಗಳಲ್ಲಿ ಕಂಡುಬರುವ ಹಾವಸೆ ವರ್ಗಕ್ಕೆ ಸೇರಿದ ಸಸ್ಯಗಳು ಪರ್ವತ ಕಾಡುಗಳಲ್ಲಿ ಒಳಗೊಳ್ಳುತ್ತವೆ. ಈ ಕಾಡುಗಳು ಕಸ್ತೂರಿಮೃಗ, ಬರೆ ಆಡು, ಹಿಮ ಹುಲಿ ಮೊದಲಾದ ಅಪೂರ್ವ ಜೀವಿಗಳ ವಾಸಸ್ಥಳವಾಗಿದೆ. ಬರೆ ಆಡುಗಳನ್ನು ಪಶ್ಚಿಮ ಘಟ್ಟದ ಉನ್ನತ ಪ್ರದೇಶಗಳಲ್ಲೂ ಕಾಣಬಹುದು.

ಭಾರತವು ಭೂ ಪ್ರಕೃತಿ, ಹವಾಮಾನ, ಮಣ್ಣಿನ ವಿಧಗಳು, ಸಸ್ಯಜೀವಜಾಲಗಳು ಎಂಬಿವುಗಳಲ್ಲಿ ಇತರ ದೇಶಗಳಿಗಿಂತ ತುಂಬಾ ವ್ಯತ್ಯಸ್ತವಾಗಿಯೂ ವೈವಿಧ್ಯದಿಂದಲೂ ಕೂಡಿದ ದೇಶವಾಗಿದೆ ಎಂದು ನಿಮಗೆ ತಿಳಿಯಿತಲ್ಲವೇ. ಭೌಗೋಳಿಕ ವಿಶೇಷತೆಗಳ ಈ ವೈವಿಧ್ಯವು ಭಾರತದ ಸಾಂಸ್ಕೃತಿಕ ವೈವಿಧ್ಯಕ್ಕೆ ಕಾರಣವಾಗಿದೆ. ವೈವಿಧ್ಯಗಳಿದ್ದರೂ ಭಾರತವು ಏಕತೆಯಿಂದ ಕೂಡಿದ ದೇಶವಾಗಿದೆ. ನಾವೆಲ್ಲರೂ ಭಾರತೀಯರೆಂಬ ಭಾವನೆಯು ನಮ್ಮನ್ನು ಒಂದುಗೂಡಿಸುತ್ತದೆ.

## ಕ್ರೋಢೀಕರಣ

- ವಿಷ್ಯಾಭೂಖಂಡದಲ್ಲಿರುವ ಭಾರತವು ಭೂ ಪ್ರಕೃತಿಯಲ್ಲೂ ಹವಾಮಾನದಲ್ಲೂ ವೈವಿಧ್ಯದಿಂದ ಕೂಡಿದೆ.
- ಭೂ ಪ್ರಕೃತಿ, ಹವಾಮಾನ, ನದಿಗಳು, ಮಣ್ಣಿನ ವಿಧಗಳು ಮುಂತಾದ ಘಟಕಗಳು ಭಾರತದ ಕೃಷಿ ವೈವಿಧ್ಯಕ್ಕೆ ತಳಹದಿಯಾಗಿವೆ.
- ಭಾರತದ ಭೌಗೋಳಿಕ ವೈವಿಧ್ಯವು ಜನಜೀವನದ ಮೇಲೆ ಪ್ರಭಾವವನ್ನು ಬೀರುತ್ತದೆ.
- ಈ ಭೌಗೋಳಿಕ ವಿಶೇಷತೆಗಳು ಭಾರತದ ಸಾಂಸ್ಕೃತಿಕ ವೈವಿಧ್ಯಕ್ಕೆ ಕಾರಣವಾಗುತ್ತವೆ.

## ಪ್ರಧಾನ ಕಲಿಕಾ ಸಾಧನೆಗಳಲ್ಲಿ ಒಳಪಡುವವುಗಳು

- ಭಾರತದ ಸ್ಥಾನ, ವ್ಯಾಪ್ತಿ ಮೊದಲಾದವುಗಳನ್ನು ಸ್ಪಷ್ಟಪಡಿಸುವುದು.
- ವೈವಿಧ್ಯದಿಂದ ಕೂಡಿದ ಭಾರತದ ಪ್ರಾಕೃತಿಕ ವಿಶೇಷತೆಗಳನ್ನು ವಿಶ್ಲೇಷಿಸುವುದು.
- ಭಾರತದ ನದಿಗಳನ್ನು ವರ್ಗೀಕರಿಸುವುದು.
- ಹವಾಮಾನ, ಪ್ರಾಕೃತಿಕ ವೈವಿಧ್ಯಗಳು, ಮಣ್ಣಿನ ವಿಧಗಳು ಹಾಗೂ ಸಸ್ಯಜಾಲಗಳು ಉಂಟುಮಾಡುವ ವೈವಿಧ್ಯಗಳನ್ನು ವಿಶ್ಲೇಷಿಸುವುದು.

## ಮೌಲ್ಯನಿರ್ಣಯ ಮಾಡುವ

1. ಪ್ರಾಕೃತಿಕ ವಿಭಾಗಗಳಲ್ಲಿರುವ ವ್ಯತ್ಯಾಸವು ಭಾರತದ ಜನಜೀವನದ ಮೇಲೆ ಪ್ರಭಾವ ಬೀರುತ್ತದೆ. ಈ ಹೇಳಿಕೆಯನ್ನು ಉದಾಹರಣೆ ಸಹಿತ ಸಮರ್ಥಿಸಿರಿ.
2. ಕೇರಳದ ಕರಾವಳಿಯು ಭಾರತದ ಯಾವ ಕರಾವಳಿ ಬಯಲಿನಲ್ಲಿ ಒಳಗೊಂಡಿದೆ? ಈ ಕರಾವಳಿ ಬಯಲಿನ ಸಾಮಾನ್ಯ ವಿಶೇಷತೆಗಳು ಯಾವುವು?
3. ಪರ್ಯಾಯ ಪೀಠಭೂಮಿಯ ಯಾವುದಾದರೂ ಎರಡು ವಿಶೇಷತೆಗಳನ್ನು ಬರೆಯಿರಿ.

## ಮುಂದುವರಿದ ಚಟುವಟಿಕೆಗಳು

- ಭಾರತದ ವಿವಿಧ ಪ್ರದೇಶಗಳ ಕುರಿತಾದ ಪ್ರವಾಸ ಕಥನಗಳನ್ನು ಓದಿರಿ.
- ಪ್ರಯಾಣ ಮಾಡುವಾಗ ಗಮನಿಸುವ ಭೂಪ್ರಕೃತಿ, ಹವಾಮಾನ, ಸಸ್ಯ ಜೀವಜಾಲ, ಜನಜೀವನ ಎಂಬ ಮಾಹಿತಿಗಳನ್ನು ಸೇರಿಸಿ ಪ್ರವಾಸ ಕಥನಗಳನ್ನು ತಯಾರಿಸಿ ಶಾಲಾ ಸಂಚಿಕೆಯಲ್ಲಿ ಸೇರಿಸಿರಿ.
- ಭೂಪ್ರಕೃತಿಯ ವಿಶೇಷತೆಗಳು, ಕೃಷಿ ವಿಧಾನಗಳು, ನೈಸರ್ಗಿಕ, ಸಸ್ಯ, ಪ್ರಾಣಿ, ಪಕ್ಷಿ ಸಂಕುಲಗಳನ್ನು ಸೇರಿಸಿಕೊಂಡು 'ಭಾರತದ ವೈವಿಧ್ಯಗಳು' ಎಂಬ ಹೆಸರಿನಲ್ಲಿ ಒಂದು ಡಿಜಿಟಲ್ ಆಲ್ಬಂ ತಯಾರಿಸಿರಿ.
- ವಿವಿಧ ಮಾಹಿತಿಗಳನ್ನು ಚಿತ್ರೀಕರಿಸಿದ ಭೂಪಟಗಳನ್ನು ಪಾಠ ಪುಸ್ತಕಗಳಿಂದಲೂ ಇತರ ಮೂಲಗಳಿಂದಲೂ ಟ್ರೇಸಿಂಗ್ ಪೇಪರ್ ಉಪಯೋಗಿಸಿ ಭಾರತದ ಭೂಪಟ ತಯಾರಿಸಿರಿ.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ, ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಚರಿಸುತ್ತಿದೆ. ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳ ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್… …ಂಕ್ಷನ್ … …ಪುರ – 34

ಫೋನ್ : 0471–23[illegible]602, 2346603

E-mail : keralachildrights@gmail.com. web site : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

**ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000**

Visit : nireekshana.org.in (CRTE monitoring system)






**State Council of Educational Research & Training (SCERT)**
Vidyabhavan, Poojappura, Thiruvananthapuram, Kerala - 695 012 Website www.scert.kerala.gov.in
e-mail scertkerala@gmail.com

KBPS
Printed by the Managing Director
**Kerala Books and Publications Soci**
(An Undertaking of the Government of Kerala)
Kakkanad, Kochi-682 030